ಆತ್ಮೀಯ ಗೆಳೆಯರಾದ ಬೆಂ.ವಿ.ವಿ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾದ ಗಂಗಾಧರ ಅವರು ನೀಡಿದ ಸಲಹೆಯನ್ನು ಗೌರವಿಸಿ, ಬರೆಯಲಾಗದ ಪರಿಸ್ಥಿತಿಯಲ್ಲಿದ್ದರೂ ನಾಲ್ಕು ಸಾಲುಗಳನ್ನು ಬರೆದುಕೊಟ್ಟಿದ್ದೇನೆ. ಮತ್ತೊಮ್ಮೆ ಇನ್ನೊಂದು ಸಂದರ್ಭದಲ್ಲಿ ಈ ಕೃತಿಯ ಬಗ್ಗೆ ವಿಸ್ತಾರವಾಗಿ ಬರೆಯಬೇಕೆಂಬ ಹಂಬಲ ನನಗಿದೆ. ಕವಿಮಿತ್ರ ಲಕ್ಷ್ಮೀನಾರಾಯಣ ಸ್ವಾಮಿ ಅವರಿಗೆ ಎಲ್ಲ ರೀತಿಯ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

**–ಕೆ.ಬಿ.ಸಿದ್ದಯ್ಯ.**

# ಆಡಾಡುತ್ತಲೇ ಮಹಾ ಪರಿವರ್ತನೆ ಸಾಧಿಸಿದವರ ಕಥೆ!

**ಕಾಡತೊರೆಯ ಜಾಡು (ಕಡಿದಾಳು ಶಾಮಣ್ಣನವರ ಬದುಕು ಹೋರಾಟಗಳ ಕಥನ) ಸಂಗ್ರಹ ಮತ್ತು ಕೃತಿರೂಪ: ಅಕ್ಷತಾ ಕೆ.**

**ಪ್ರ: ಅಭಿನವ, ಬೆಂಗಳೂರು ಪುಟ: ೩೦೦ ಬೆಲೆ: ರೂ. ೧೫೦/–**

ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡ ಕಡಿದಾಳು ಶಾಮಣ್ಣನವರ ಬದುಕು ಹೋರಾಟಗಳ ಈ ಕಥನ ಒಂದು ರೀತಿಯಲ್ಲಿ ಅವರ ಆತ್ಮಕಥನವೆಂದರೂ ನಡೆದೀತು. ಈ ಪುಸ್ತಕದಲ್ಲಿ ಶಾಮಣ್ಣ ತಮ್ಮ ಕಥೆಯನ್ನು ಬಾಲ್ಯದಿಂದ ಈವರೆಗಿನ ನೆನಪುಗಳ ಆಧಾರದ ಮೇಲೆ, ಅವುಗಳಿಂದ ಹೆಕ್ಕಿದ ಸ್ವಾರಸ್ಯಕರ ಮತ್ತು ಕೆಲವೆಡೆ ಹೃದಯಂಗಮವೆನಿಸುವ ಪ್ರಸಂಗಗಳನ್ನು ನಿರೂಪಿಸುತ್ತಾ, ಒಂದು ಪಕ್ಕದಿಂದ ನೋಡಿದರೆ ಕಳೆದ ಅರುವತ್ತು ವರ್ಷಗಳ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಂತೆಯೂ ಕಾಣುವ ವಿಶಿಷ್ಟ ಕಥನವೊಂದನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ವೈಯಕ್ತಿಕ ಮತ್ತು ಸಾಮಾಜಿಕ ನೆಲೆಗಳೆರಡರಲ್ಲೂ ತುಯ್ದಾಡುತ್ತಾ ಸೃಜನ ಮತ್ತು ಸೃಜನೇತರಗಳೆಂಬ ವಿಂಗಡಣೆಗಳನ್ನು ಒಡೆದು ನಿಲ್ಲುವ ಹೊಸದೊಂದು ಸೊಬಗಿನ ಇತಿಹಾಸ ಕಥನವೂ ಆಗಿದೆ




ಎಲ್ಲ ಘನ ಸಮಾಜವಾದಿಗಳಂತೆಯೇ, ಶಾಮಣ್ಣ ಸಾಹಿತ್ಯ, ಸಂಗೀತ, ಕಲೆ, ಕೃಷಿ, ಶಿಕಾರಿ, ಅಲೆದಾಟ, ಸಮಾಜ ಸುಧಾರಣೆ, ಚಳುವಳಿ, ರಾಜಕಾರಣ ಹೀಗೆ ಬದುಕಿನ ಆಸಕ್ತಿ ಮತ್ತು ಕುತೂಹಲಗಳ ಎಲ್ಲ ಕ್ಷೇತ್ರಗಳಿಂದಲೂ ಸಾರ ಪಡೆದು ಒಂದು ಆವೃತ ಜೀವನ ದೃಷ್ಟಿಕೋನವನ್ನು ರೂಪಿಸಿಕೊಂಡ ಪರಿ ಈ ಕೃತಿಯಲ್ಲಿ ಎಷ್ಟು ವರ್ಣರಂಜಿತವಾಗಿ ನಿರೂಪಿತವಾಗಿದೆ ಎಂದರೆ, ಇದು ಲೌಕಿಕ–ಪಾರಮಾರ್ಥಿಕಗಳ ನಡುವಣ ಬೇಧವನ್ನೂ ಅಳಿಸಿಹಾಕಿಬಿಡುತ್ತದೆ. ಈ ಅರ್ಥದಲ್ಲಿ ಈ ಕೃತಿ ಲೋಹಿಯಾ ರಾಜಕಾರಣದ ತಾತ್ವಿಕತೆಯನ್ನು ಅದರ ಪಾರಿಭಾಷಿಕ ಹುದಲಿನಿಂದ ಹೊರತೆಗೆದು ಜೀವಂತ ಜೀವನ ವಿವರಗಳ ಮೂಲಕವೇ ಅದನ್ನು ಸಾಮಾನ್ಯರಿಗೂ ಪ್ರಸ್ತುತಪಡಿಸುವ ಪ್ರಯತ್ನ ಮಾಡುತ್ತದೆ. ಶಾಮಣ್ಣನವರ ಮುಖದ ಮೇಲೆ ಸದಾ ಕಂಡೂ ಕಾಣದಂತೆ ಮಿನುಗುವ ತುಂಟ ನಗೆ ಈ ಪುಸ್ತಕದುದ್ದಕ್ಕೂ ಹಾಯ್ದು ಹೋಗಿದ್ದು, ಮೂರು ನೂರು ಪುಟಗಳನ್ನು ಆಯಾಸವಿಲ್ಲದಂತೆ–ಒಮ್ಮೊಮ್ಮೆ ಬಿದ್ದು ಬಿದ್ದು ನಗುವಂತೆ ಮಾಡಿಯೂ–ಓದಿಸಿಕೊಂಡು ಹೋಗುತ್ತದೆ.

ಈ ಕೃತಿಯನ್ನು ಓದುತ್ತಿದ್ದಂತೆ 'ಆಡಾಡುತ್ತಾ ಆಯುಷ್ಯ' ಎಂಬ ಗಾದೆಗೆ ಸಮನಾಂತರವಾಗಿ 'ಆಡಾಡುತ್ತಾ ಪರಿವರ್ತನೆ' ಕೂಡ ಎಂಬ ಹೊಸ ಅರಿವು ಹುಟ್ಟಿಸುವ ಘಟನಾವಳಿಗಳು ನಿಮ್ಮ ಕಣ್ಮುಂದೆ ಹಾದು ಹೋಗುತ್ತವೆ. ಶಾಮಣ್ಣ ತಮ್ಮ ಸಮಾಜವಾದಿ ಗೆಳೆಯರಾದ ತೇಜಸ್ವಿ, ಎಂಡಿಎನ್, ಸುಂದರೇಶ್, ಶ್ರೀರಾಂ, ಲಂಕೇಶ್, ರಾಮದಾಸ್ ಮುಂತಾದವರೊಂದಿಗೆ ಮೇಲ್ನೋಟಕ್ಕೆ ಹುಡುಗಾಟದಂತೆ ಕಾಣುವ ಚಟುವಟಿಕೆಗಳ ಮೂಲಕವೇ ಕರ್ನಾಟಕದ ಜನರ ಮಾನಸಿಕತೆಯಲ್ಲಿ ಎಂತಹ ನಿರ್ಣಾಯಕ ಸ್ಥಿತ್ಯಂತರಗಳಿಗೆ ಕಾರಣರಾಗಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಇದೆಲ್ಲದರ ಹಿಂದೆ ಒಂದೆಡೆ ಕುವೆಂಪು ಮತ್ತೊಂದೆಡೆ ಗೋಪಾಲಗೌಡರು ಇದ್ದಾರೆಂಬುದನ್ನೂ ಇಲ್ಲಿ ದಾಖಲಿಸಬೇಕು. ಕರ್ನಾಟಕದಲ್ಲಿ ಸಮಾಜವಾದಿ ರಾಜಕಾರಣ ಸಂಪೂರ್ಣ ವಿಫಲವಾಗಿದೆ ಎನ್ನುವವರಿಗೆ ನಿಜವಾಗಿ ರಾಜಕಾರಣವೆಂದರೇನು ಎಂಬುದು ಗೊತ್ತಿಲ್ಲ ಎಂಬುದನ್ನು ಈ ಕೃತಿ ಸಾರಿ ಹೇಳುತ್ತದೆ.

ಅಕ್ಷತಾ, ಶಾಮಣ್ಣನವರ ಈ ಕಥನವನ್ನು ಅವರು ಹೇಳಿದ ಭಾಷೆಯಲ್ಲೇ, ಅದರ ಸರಳ ಸೌಂದರ್ಯ ಮತ್ತು ಸೊಗಡು–ಸುಭಗತೆಗಳು ಭಂಗಗೊಳ್ಳದಂತೆ ನಿರೂಪಿಸಿ, ಈ ಪುಸ್ತಕದ ಯಶಸ್ಸಿಗೆ ತಾವೂ ಕಾರಣರಾಗಿದ್ದಾರೆ. ಅಪಾರ ಅವರ ಮುಖಪುಟ ವಿನ್ಯಾಸ ಈ ಕೃತಿಯ ಸೊಬಗನ್ನು ಹೆಚ್ಚಿಸಿದೆ.

**–ಡಿ.ಎಸ್.ನಾಗಭೂಷಣ.**

**ಮುದ್ರಕರು: ತಾರಾ ಪ್ರಿಂಟರ್ಸ್, # ೨೮೫/ಎಫ್೬, ಉತ್ತರಮಠ ರಸ್ತೆ, ೫ನೇ ಪಶ್ಚಿಮ ತಿರುವು, ಮೈಸೂರು– ೫೭೦೦೦೪**

ಪುಸ್ತಕ ಅಂಚೆ

ಇವರಿಗೆ,

**If undelivered please return to D.S.Nagabhushana, HIG-5, 'Nudi', Kallahalli Extension, Vinoba Nagara, Shivmogga-577204 (Karnataka)**

## ಸಾಹಿತ್ಯ-ಸಂಸ್ಕೃತಿ ಇತ್ಯಾದಿ

# ಸಂಘರ್ಷವೂ ಅನುಸಂಧಾನವಾಗುವ ಕಾವ್ಯದ ನಿರೀಕ್ಷೆಯಲ್ಲಿ...

**ಗೆಳತಿ ಮತ್ತೊಮ್ಮೆ ಯೋಚಿಸು (ಕವನ ಸಂಕಲನ) ಲೇ: ಎಚ್.ಲಕ್ಷ್ಮೀನಾರಾಯಣಸ್ವಾಮಿ**
**ಪ್ರ: ಫ್ರೆಂಡ್ಸ್ ಪಬ್ಲಿಕೇಷನ್ಸ್, ಬೆಂಗಳೂರು ಪು: ೮೦ ಬೆಲೆ: ರೂ. ೮೦/-**

**(ಈ ಕೃತಿಗೆ ಹಿರಿಯ ಕವಿ ಹಾಗೂ ದಲಿತ ಚಿಂತಕ ಕೆ.ಬಿ.ಸಿದ್ದಯ್ಯ ಬರೆದಿರುವ ಮುನ್ನುಡಿ ಈ ಕೃತಿಯ ಸಂಕ್ಷಿಪ್ತ ಪರಿಚಯ ಮಾಡಿಕೊಡುವುದರ ಜೊತೆಗೆ, ಇಂದು ದಲಿತ ಸಾಂಸ್ಕೃತಿಕ ಲೋಕವನ್ನು ಕಾಡುತ್ತಿರುವ ಹಲವು ಪ್ರಶ್ನೆಗಳ ಕಡೆಗೂ ನಮ್ಮ ಗಮನ ಸೆಳೆಯುವಂತಿರುವುದರಿಂದ ಅದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ)**




೭೦ರ ದಶಕದಲ್ಲಿ ಕರ್ನಾಟಕದ ಬೀದಿಗಳಲ್ಲಿ ಕೂಗಿದ್ದ 'ದಲಿತ' ಅನ್ನುವ ಪದ ತಮಟೆಯ ಲಯದಂತೆ ಎದೆಯ ದನಿಯಾಗಿ ಕೇಳಿಸಿತ್ತು. ಮೈನೆರೆತ ಹುಡುಗಿಯಂತೆ ಮುಗ್ಧತೆ, ನಾಚಿಕೆ, ಸಂಭ್ರಮ, ನೆನಪು ಮತ್ತು ಕನಸುಗಳನ್ನು ಮೈಗೂಡಿಸಿಕೊಂಡು ಓಡಾಡುತ್ತಿತ್ತು. ಈಗ ಮದುವೆಯಾಗಿ ಮಕ್ಕಳನ್ನು ಹೆತ್ತ ತಾಯಿಯಂತೆ ದಲಿತ ಪದ ತಿರುಗಾಡುತ್ತಿದೆ. ದಲಿತ ಚಳುವಳಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲಘಟ್ಟದಲ್ಲಿ ಅಸ್ಪೃಶ್ಯತೆ ಅನುಭವದಂತಹ ಸಾಮಾಜಿಕ ಸಂಕಟವನ್ನು ವಿರೋಧಿಸುವ ಕ್ರಮವಾಗಿ ದಲಿತರನ್ನು ಎಚ್ಚರಿಸುವ ನೆಪದಲ್ಲಿ 'ಇಕ್ರಲಾ ವದೀರ್ಲಾ ಈನನ್ ಮಕ್ಳ ಚರ್ಮ ಎಬ್ರಲಾ' ಎಂಬ ಪ್ರತಿಭಟನಾ ಮಾದರಿಯ ಕಾವ್ಯ ಹುಟ್ಟಿತ್ತು. ಸದ್ಯದಲ್ಲಿ ದಲಿತ ಚಳುವಳಿ ದಣಿದು ಸುಸ್ತಾದಂತೆ ಕಾಣುತ್ತದೆ. ಇಕ್ಕಲು ಆಗದ, ಒದೆಯಲು ಆಗದ ಅಂಗವಿಕಲ ಸ್ಥಿತಿಯಲ್ಲಿದೆ. ಅಥವಾ ದಲಿತ ಚಳುವಳಿ ದಾರಿ ತಪ್ಪಿದ ಮಗನಂತಾಗಿದೆ ಎಂದರೂ ಸಲ್ಲುತ್ತದೆ. ಇದು ದಲಿತ ಚಳುವಳಿಯ ಸಂಕ್ರಮಣ ಕಾಲ ಎಂದರೂ ಸರಿಯೇ...

ಇಂತಹ ಸಂದರ್ಭದಲ್ಲಿ ಕವಿ ಮಿತ್ರ ಲಕ್ಷ್ಮೀನಾರಾಯಣ ಸ್ವಾಮಿ ಅವರು 'ಗೆಳತಿ ಮತ್ತೊಮ್ಮೆ ಯೋಚಿಸು' ಎಂಬ ಕವನ ಕವನ ಸಂಕಲನದ ಮೂಲಕ ಎಪ್ಪತ್ತರ ದಶಕದ ದಲಿತ ಸಂಭ್ರಮವನ್ನು ನೆನಪಿಸುತ್ತಿದ್ದಾರೆ. ಈ ಕವಿಯ ಸಂಭ್ರಮ 'ನಾನು ದಲಿತ ಕವಿ' ಎಂಬ 'ಅಹಂ'ಅನ್ನು ನಿರಾಕರಿಸಿ, ಅಂತರಂಗದ ಸಾಮಾಜಿಕ ಸಂಕಟ ಮತ್ತು ಸ್ವಾಭಿಮಾನವನ್ನು ಧ್ವನಿಸುತ್ತದೆ. ಅದಕ್ಕಾಗಿ ಈ ಕವಿಯನ್ನು ಅಭಿನಂದಿಸುತ್ತೇನೆ.

ದಲಿತ ಕಾವ್ಯದ ಬಗ್ಗೆ ಮಾತನಾಡುವುದೆಂದರೆ, ದಲಿತ ಪರಂಪರೆ, ಭಾಷೆ, ಸಂಸ್ಕೃತಿ, ರಾಜಕಾರಣದ ಬಗ್ಗೆ ನಡೆಸುವ ಗಂಭೀರ ಚರ್ಚೆ ಎಂದರ್ಥ. ಈ ಹಿನ್ನೆಲೆಯಲ್ಲಿ ದಲಿತ ಚಿಂತಕರು, ಬರಹಗಾರರು, ರಾಜಕಾರಣಿಗಳು, ಹೋರಾಟಗಾರರು ಮಾತೃಭಾಷೆ ಮತ್ತು ಇಂಗ್ಲಿಷ್ ಭಾಷೆಯ ಬಗ್ಗೆ ಖಚಿತ ತಾತ್ವಿಕ ನಿಲುವಿಗೆ ಬರುವ ಅನಿವಾರ್ಯತೆ ಇದೆ. ಏಕೆಂದರೆ ಕೆಲವು ಬುದ್ಧಿಜೀವಿಗಳು ದಲಿತ ಕಾಲೋನಿಗಳಲ್ಲಿ ಇಂಗ್ಲಿಷ್‌ದೇವಿ ಗುಡಿ ಕಟ್ಟಿಸಿ ಇಂಗ್ಲಿಷ್ ದೇವಿಯನ್ನು ಆರಾಧಿಸುವಂತೆ ಠರಾವು ಹೊರಡಿಸಿದ್ದಾರೆ. ಅಲ್ಲದೆ ದಲಿತರಿಗೆ ಇಂಗ್ಲಿಷ್ ಅನಿವಾರ್ಯ, ಇಂಗ್ಲಿಷ್ ದಲಿತ ಸ್ವಾಭಿಮಾನದ ಸಂಕೇತ, ಇಂಗ್ಲಿಷ್ ನಿಂದಲೇ ಅನ್ನ ಬಟ್ಟೆ ಎಂಬ ಭ್ರಮೆಯ ಬೀಜಗಳನ್ನು ದಲಿತ ಅಕ್ಷರಸ್ಥ ಸಮುದಾಯದ ನಡುವೆ ಬಿತ್ತುತ್ತಿದ್ದಾರೆ. ದಲಿತರು ಇಂಗ್ಲಿಷ್ ಕಲಿಯುವುದಕ್ಕೆ ನನ್ನ ವಿರೋಧವಿಲ್ಲ. ಇಂಗ್ಲಿಷ್ ದೇವಿಯನ್ನು ಆರಾಧಿಸುವ ಆಧುನಿಕ ಮೂಢ ನಂಬಿಕೆಗೆ ನನ್ನ ವಿರೋಧವಿದೆ.

ಜಾಗತಿಕ ಬದಲಾವಣೆ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಜಾಗತಿಕ ಗುತ್ತಿಗೆದಾರರು ತಮಗೆ ಅಧೀನತಮವಾದ ಗುಲಾಮ ಜಗತ್ತೊಂದನ್ನು ಸೃಷ್ಟಿಸಲು ಬಳಸುತ್ತಿರುವ ಅಸ್ತ್ರವೇ ಇಂಗ್ಲಿಷ್ ಭಾಷೆ. ದಲಿತರು ಇಂತಹ ಗುಲಾಮಿ ಹಿಡಿತದಿಂದ ತಪ್ಪಿಸಿಕೊಳ್ಳಲು ಹೊಸ ದಾರಿಗಳನ್ನು ಹುಡುಕಬೇಕಾಗಿದೆ. ಅಂಬೇಡ್ಕರ್ ಹೇಳಿದ ಜನಪ್ರಿಯವಾಣಿಯೊಂದು ನಮ್ಮನ್ನು ಚಿಂತನೆಗೆ ಒಳಪಡಿಸುತ್ತದೆ. 'ಗುಲಾಮನಿಗೆ ನೀನು ಗುಲಾಮನಾಗಿದ್ದೀಯಾ ಎಂದು ಎಚ್ಚರಿಸಿದರೆ ಅವನು ಗುಲಾಮಗಿರಿಯ ವಿರುದ್ಧ ಎದ್ದು ನಿಲ್ಲುತ್ತಾನೆ;' ಅಂತಹ ಸಂದರ್ಭ ಇಂಡಿಯಾದ ದಲಿತರಿಗೆ ಮತ್ತು ಜನಭಾಷೆಗೆ ಎದುರಾಗಿದೆ.

ಮಾತೃಭಾಷೆಯು ದಲಿತರನ್ನು ಹೆಚ್ಚು ಸ್ವಾಭಿಮಾನಿಯಾಗಿಸುತ್ತದೆ. ಶೋಷಣೆಯ ಅಸ್ತ್ರವಾದ ಇಂಗ್ಲಿಷ್ ಭಾಷೆಗೆ ಶ್ರೇಣೀಕೃತ ವ್ಯವಸ್ಥೆಯನ್ನು ಬದಲಾವಣೆ ಮಾಡಲು; ಅಂಬೇಡ್ಕರ್ ಹೇಳಿದಂತೆ ಸ್ವಾತಂತ್ರ್ಯ, ಸಮಾನತೆ ಸಹೋದರತೆಯ ಸಮಾಜ ಕಟ್ಟಲು ಹೇಗೆ ಸಾಧ್ಯವಾಗುತ್ತದೆ? ಇಂತಹ ನಿಲುವು ದಲಿತರ ವೈಚಾರಿಕತೆಯನ್ನು, ಕನ್ನಡ ಸಂಸ್ಕೃತಿಯನ್ನು ಅರ್ಥಪೂರ್ಣವಾಗಿ ವಿಸ್ತರಿಸಬಲ್ಲುದು. ಇದು ಕೇವಲ ಭಾಷೆಯ ಪ್ರಶ್ನೆ ಅಲ್ಲದೆ, ಸಾಮಾಜಿಕ ರಾಜಕೀಯ ಪ್ರಶ್ನೆಯೂ ಹೌದು. ಈ ಹಿನ್ನೆಲೆಯಲ್ಲಿ 'ಗೆಳತಿ ಮತ್ತೊಮ್ಮೆ ಯೋಚಿಸು' ಕವನ ಸಂಕಲನದ 'ಮಾದಿಗರ ಹುಡುಗ' ಎಂಬ ಕವನ ಎದುರಾಗುತ್ತದೆ:

ಲೋಕವು ಕೇಳುತಿದೆ ನೀನಾರೆಂದು?
ಊರ ಒಡೆಯನಲ್ಲಯ್ಯ ನಾನು
ಯಾಗ ಯಜ್ಞದವನೂ ಅಲ್ಲ
ಲಿಂಗ ಕಟ್ಟಿದವನೂ ಅಲ್ಲಯ್ಯ ನಾನು
ಹೊಲದ ಒಡೆಯನೂ ಅಲ್ಲ
ಜಾತಿ ಧರ್ಮವ ಬಿಟ್ಟವನಯ್ಯ
ಮಾದಿಗರ ಹುಡುಗ
ಕಾಲನಿ ಕುವರ

'ಮಾದಿಗರ ಹುಡುಗ' ಎಂಬ ಕವನ ಜಾತಿ ವ್ಯವಸ್ಥೆಯ ನಡುವಿನಿಂದ ಎದ್ದು ನಿಂತ ಸ್ವಾಭಿಮಾನಿ ಹುಡುಗನ ಸಾಮಾಜಿಕ ಜೀವನ ಮತ್ತು ವೈಯುಕ್ತಿಕ ಬದುಕನ್ನು ಬಿಡಿಸಿಹೇಳುತ್ತದೆ. ಮೇಲ್ನೋಟಕ್ಕೆ ಸಮಾಜಶಾಸ್ತ್ರೀಯ ಮಾಹಿತಿಗೆ ಅಧ್ಯಯನಯೋಗ್ಯವಾದ ಕವನ ಇದಾಗಿದೆ. ಆದರೆ ಅಗ್ರಹಾರದ ಬ್ರಾಹ್ಮಣರ ಹುಡುಗನೂ ಅಂಥ ಒಂದು ಕವನ ರಚಿಸಬಹುದು. ಅಗ್ರಹಾರದ ಹುಡುಗನ ರಚನೆಗೂ ಮಾದಿಗರ ಹುಡುಗನ ರಚನೆಗೂ ಮುಖಾಮುಖಿಯಾಗುವ ಸವಾಲೆಂದರೆ, ಈ ಇಬ್ಬರೂ ಈ ಸಂಘರ್ಷ ಸ್ಥಿತಿಯನ್ನು ಸೃಜನಶೀಲ ಕ್ರಿಯೆಯಲ್ಲಿ ಹೇಗೆ ದಾಟಿದ್ದಾರೆ ಎಂಬುದು. ಆತ್ಯಂತಿಕವಾಗಿ ಇದು ಸಾಮಾಜಿಕ ಮತ್ತು ಆಧ್ಯಾತ್ಮಿಕ ಪ್ರಶ್ನೆಯಾಗಿ ಮಾದಿಗರ ಹುಡುಗನಿಗೂ, ಅಗ್ರಹಾರದ ಹುಡುಗನಿಗೂ ಕಾಡುತ್ತಿರಬೇಕು -ಇದು ಸಂಘರ್ಷಾತ್ಮಕವೂ, ಅನುಸಂಧಾನವೂ ಆಗಿರುತ್ತದೆ. 'ಗೆಳತಿ ಮತ್ತೊಮ್ಮೆ ಯೋಚಿಸು' ಕಾವ್ಯ ಕೃತಿಯ ಕವಿ ಇಂಥ ಒಂದು ಸಂಘರ್ಷಕ್ಕೆ ಸನ್ನದ್ಧವಾಗಿರುವ ಸೂಚನೆಗಳು ಈ ಸಂಕಲನದ ಬಹುತೇಕ ಕವನಗಳಲ್ಲಿ ವ್ಯಕ್ತವಾಗಿವೆ.

# ಅನುಭವ: ಹಳ್ಳಿ ಹುಡುಗರಿಗೆ ಇಂಗ್ಲಿಷ್ ಕಲಿಸುತ್ತಾ, ನಾನೂ ಬೆಳೆಯುತ್ತಾ...

ಅನಿರೀಕ್ಷಿತವಾಗಿ ದೊರಕಿದ ಸರಕಾರಿ ಹುದ್ದೆ, ಆಪ್ತ ಉಪನ್ಯಾಸಕ ವೃತ್ತಿ ಈ ಎರಡೂ ಪ್ರಸ್ತುತ ನನ್ನನ್ನು ಮೈಸೂರು ಜಿಲ್ಲೆಯ ಅತಿ ಹಿಂದುಳಿದ ತಾಲೂಕಿನ ಹಳ್ಳಿಯೊಂದಕ್ಕೆ ತಂದು ನಿಲ್ಲಿಸಿವೆ. ಸರಕಾರಿ ಸೇವೆ



ಹೊಸದಾದರೂ ಉಪನ್ಯಾಸಕ ವೃತ್ತಿ ಹೊಸದೇನಲ್ಲ. ಈ ಮೊದಲು ಮೈಸೂರಿನ ಖಾಸಗೀ ಕಾಲೇ ಜೊಂದರಲ್ಲಿ ತರಗತಿಯ ಒಳಗಿನ ಹುಡುಕಾಟಕ್ಕೆ ತೆರೆದುಕೊಂಡ ಸಣ್ಣ ಅನುಭವ. ಪಠ್ಯದ ಜೊತೆಗೇ ಪರೀಕ್ಷೆಯವರೆಗಿನ ಪ್ರಯಾಣ. ನಾಲ್ಕೈದು ವರ್ಷಗಳಲ್ಲಿ ಸೀಸನ್ಡ್ ಆಗಿದ್ದೇನೇನೋ ಎಂಬ ಆತಂಕ.

ತರಗತಿಗಳು ಅವುಗಳ ಆಕರ್ಷಣೆಯನ್ನೇನೂ ಕಳೆದು ಕೊಂಡಿರಲಿಲ್ಲ. ಆದರೂ ಪಠ್ಯದ ಹೊರಗಿನ ಸಾಧ್ಯತೆಗಳ ಹುಡುಕಾಟಕ್ಕೆ ಸ್ವಲ್ಪ ಕಷ್ಟವೆನಿಸುವ ವಾತಾವರಣ. ಅಲ್ಲಿಂದ ಇಲ್ಲಿಗೆ ಒಂದು ಸ್ಥಾನ ಪಲ್ಲ ಟವೇ ಹೌದು, ನನ್ನೊಳಗೆ. ಅಪ್ಪನ ಸಮಾಜವಾದದ, ಅಮ್ಮನ ಸಾಹಿತ್ಯದ ಪಾಠಗಳನ್ನು, ಒಳನೋಟಗಳನ್ನು ಕೇಳಿ ತಿಳಿದು ಬೆಳೆದಿದ್ದೆ. ಆಗೀಗ ಅಲ್ಪ ಸ್ವಲ್ಪ ಪ್ರಾಯೋಗಿಕ ಅನುಭವವೂ ಇತ್ತು. ಆದರೆ ಅಪ್ಪ ಅಮ್ಮ ತೀರಿಹೋದ ಮೇಲೆ ಮಡಿಲಲ್ಲಿ ಎಳೆಯ ಕೂಸನ್ನು ಕಟ್ಟಿಕೊಂಡು ಬದುಕಿನ ಹೊಸ ಸಾಧ್ಯತೆಗಳ ಹುಡುಕಾಟದಲ್ಲಿ ಬಂದು ನಿಂತದ್ದು ನಾಲ್ಕು ವರ್ಷಗಳ ಕೆಳಗೆ, ಈ ನನ್ನ ಹಳ್ಳಿಯ ಕಾಲೇಜಿನಲ್ಲಿ. ಈ ಪ್ರಕ್ರಿಯೆಯಲ್ಲಿ ವೈಯಕ್ತಿಕವಾಗಿ ನಾನು ನನ್ನನ್ನು ಕಂಡುಕೊಂಡಿದ್ದೇನೆ. ಬೆಳೆದಿದ್ದೇನೆ, ಬದುಕಿಗೆ ಹತ್ತಿರವಾಗಿ.

ಸರಕಾರಿ ಕೆಲಸ ಎನ್ನುವ ಹಣೆಪಟ್ಟಿಯನ್ನು ಮೀರಿ ಉಪನ್ಯಾಸಕ ವೃತ್ತಿಯ ಪಾವಿತ್ರ್ಯ ಮತ್ತು ಅದರ ಪ್ರಾಮುಖ್ಯತೆಯ ಅರಿವಿನ ಮುಖಾ ಮುಖಿಯಾಗಿದ್ದು ಇಲ್ಲಿಯೇ. ವಿದ್ಯಾರ್ಥಿಗಳು-ಪಠ್ಯಪುಸ್ತಕ-ಪರೀಕ್ಷೆ-ಪ್ರಶ್ನೆ ಎಲ್ಲವೂ ಅದೇ ಆಗಿದ್ದರೂ, ಈ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ನಮ್ಮ ತರಗತಿಗಳು ಹೆಚ್ಚು ಸಂಕೀರ್ಣವಾದವು ಮತ್ತು ಇಲ್ಲಿಯ ವಾಸ್ತವಿಕ ಸವಾಲುಗಳು ಹೆಚ್ಚು ಭಿನ್ನವಾದವು ಎನಿಸತೊಡಗಿತು. ಮೊದಮೊದಲು ತರಗತಿಯಲ್ಲಿ ವಿದ್ಯಾರ್ಥಿಗಳನ್ನು ನನ್ನ ಆಲೋಚನೆಗೆ ಸರಿಹೊಂದುವಂತೆ ಸೆಳೆಯುವ ಪ್ರಯತ್ನ ಮಾಡಿದೆ. ಕಾಲ ಕ್ರಮೇಣ ನಾನು ಅವರಂತೆ ಬದಲಾಗಿದ್ದೇನೆ, ಅವರೂ ನನ್ನಂತೆಯೇ ಯೋಚಿಸ ಬಲ್ಲರು ಎನ್ನುವ ಆಶಾಭಾವದಿಂದ.

ಕೆಲವು ಬಾರಿ ನನ್ನ ಬಹಳಷ್ಟು ವಿದ್ಯಾರ್ಥಿಗಳಿಗೆ ಅವರ ಈ ಪುಟ್ಟ ಹಳ್ಳಿಯ ಆಚೆಗೆ, ನಾಗಾಲೋಟದಲ್ಲಿ 'ಎತ್ತಲೋ' ಓಡುತ್ತಿರುವ, ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಸ್ಪರ್ಧಾತ್ಮಕ ಪ್ರಪಂಚದ ಕಲ್ಪನೆಯೂ ಇದ್ದಂತೆ ಕಾಣುವುದಿಲ್ಲ. ಎರಡು ವಿಭಿನ್ನ ಪರಿಸರಗಳ 'ಲ್ಲಿ ಕೆಲಸ ಮಾಡಿರುವ ನನಗೆ ಅವೆರಡರ ನಡುವಿನ ಕಂದಕ ದಾಟಲಾರದ್ದೇನೋ ಎನಿಸುವಷ್ಟು ಪ್ರಯಾಸದಾಯಕವಾಗಿ ಕಂಡು ಗಾಬರಿಯಾದ ದಿನಗಳೂ ನೆನಪಿಗೆ ಬರುತ್ತವೆ. ಈ ಮುಗ್ಧ ವಿದ್ಯಾರ್ಥಿಗಳ ಅಗಾಧ ಪ್ರತಿಭೆ, ಸ್ಥಳೀಯ ಪ್ರಜ್ಞೆಯನ್ನು ಕಂಡು ಅಷ್ಟೇ ಬೆರಗುಗೊಳ್ಳುತ್ತೇನೆ.

ಈ ಪ್ರತಿಭೆಯನ್ನು ಮುಖ್ಯವಾಹಿನಿಗೆ ತಂದು ಸೇರಿಸುವಷ್ಟು ಪ್ರೇರಣಾ ಶಕ್ತಿಯನ್ನು, ಸಾಮರ್ಥ್ಯವನ್ನು ಒಟ್ಟು ಮಾಡಿಕೊಳ್ಳಲು ಹೆಣಗಾಡುತ್ತೇನೆ. ಸರಕಾರಿ ಕೆಲಸಗಳ ವಿರೋಧಾಭಾಸಗಳ ನಡುವೆ ಆ ಚಾಲನಾ ಶಕ್ತಿಯನ್ನು ಕಾಪಿಟ್ಟುಕೊಳ್ಳುವುದೇ ಕೆಲವೊಮ್ಮೆ ತ್ರಾಸದಾಯಕವಾಗಿ ಕಾಣುತ್ತದೆ. ಹಳ್ಳಿ ಹಳ್ಳಿಗಳಲ್ಲಿ ಕಾಲೇಜು ತೆರೆಯುವ ಸರಕಾರದ ನೀತಿ, ಯೋಜನೆಯನ್ನು ಧಿಕ್ಕರಿಸಿ ಹಳ್ಳಿಯ ಕಾಲೇಜುಗಳಿಂದ ವಿಮುಖವಾಗಿ ನಗರದ ಪಾಲಾಗುತ್ತಿರುವ ಬಹಳಷ್ಟು ವಿದ್ಯಾರ್ಥಿಗಳಿಗೆ 'ಇಲ್ಲಿಯೂ ಅದೇ ಶೈಕ್ಷಣಿಕ ಅನುಭವ ಪಡೆಯಬಹುದೆಂಬ ಭಾವನೆ ಮೂಡಿಸುವಲ್ಲಿ ನಾವೇಕೆ ಸೋಲುತ್ತಿದ್ದೇವೆ' ಎನ್ನುವ ಪ್ರಶ್ನೆ ಆಗಾಗ ನನ್ನನ್ನು ಕಾಡುತ್ತದೆ.

ಇಂಥಾ ಸಂಕೀರ್ಣ ಸನ್ನಿವೇಶದಲ್ಲಿ ಭಾಷಾ ಪಠ್ಯದಲ್ಲಿ, ಅದರಲ್ಲೂ ಆಂಗ್ಲ ಭಾಷೆಯನ್ನು ಪ್ರಸ್ತುತವೆನಿಸುವಂತೆ ಮನದಟ್ಟು ಮಾಡಿ, 'ಮ್ಯಾಜಿಕ್ ೩೦' ಅಂಕಗಳಿಗೂ ಮೀರಿ ಭಾಷಾ ಪ್ರಯೋಗದ ಮಟ್ಟಕ್ಕೇರಿಸುವುದು ಸವಾಲೇ ಸರಿ. ಸವಾಲು ಬರೀ ಆಂಗ್ಲ ಭಾಷಾ ಕಲಿಕೆಯದ್ದಾಗಿದ್ದರೆ ಚೆನ್ನಾಗಿರುತ್ತಿತ್ತು. ಆದರೆ, ಇಲ್ಲಿನ ಪ್ರಶ್ನೆ ಶೈಕ್ಷಣಿಕ ಮಟ್ಟದಲ್ಲಿನ ಕುಸಿತಕ್ಕೆ ಸಂಬಂಧಿಸಿದ್ದು ಎನ್ನುವುದು ವಿಪರ್ಯಾಸ. ಪಿಯುಸಿ ಪರೀಕ್ಷೆ ಬರೆಯುವ ಕನಸು ಕಾಣುವ ವಿದ್ಯಾರ್ಥಿಗೆ ಮಾತೃ ಭಾಷೆಯ ಅಕ್ಷರಗಳೇ ಇನ್ನೂ ಸಮಸ್ಯೆಯಾಗಿ ಕಾಡುತ್ತಿರುವ ಹೊತ್ತಿನಲ್ಲಿ ಸುಧಾರಣೆಯ ಪ್ರಾರಂಭಿಕ ಹಾದಿಯೇ ಮಬ್ಬಾಗಿ ಕಾಣುತ್ತದೆ.

ಈ ಹಂತದಲ್ಲಿ ಗಾಂಧೀಜಿ ಹೇಳಿದ ಹಾಗೆ 'ವಿದ್ಯಾಭ್ಯಾಸ ಎಂದರೆ ಬರೀ ಓದು-ಬರಹವಲ್ಲ, ಅದು 'ಜ್ಞಾನ' ಎಂಬ ಅರಿವನ್ನು ಮೂಡಿಸುವುದೆಂತು ಎನ್ನಿಸುತ್ತದೆ. ಆ ಜ್ಞಾನದಿಂದ, ಹಳ್ಳಿಯೊಳಗೂ ನಮ್ಮ ಅಸ್ತಿತ್ವವನ್ನು ಕೊಂಡುಕೊಳ್ಳಬಹುದು ಎಂಬ ವಿಶ್ವಾಸ ಮೂಡಿಸುವುದೇ ಆ ಮಕ್ಕಳಿಗೆ ನಾವು ನೀಡಬಹುದಾದ ಭರವಸೆಯೂ ಹೌದು.

ಇಷ್ಟಾಗ್ಯೂ, ವೇಗದ ಸಾಮಾಜಿಕ ಸ್ಥಿತ್ಯಂತರಗಳ ಹರಿವಿನಲ್ಲಿ ಸಿಲುಕಿ ಗಲಿಬಿಲಿಗೊಳ್ಳುವಂತಹ ಈ ಹೊತ್ತಿನಲ್ಲೂ ನನ್ನ ವಿದ್ಯಾರ್ಥಿಗಳ ಕಣ್ಣುಗಳಲ್ಲಿನ ಹೊಳಪು ನೋಡಿದಾಗ ಮಾತ್ರ ಮತ್ತೆ ಆತ್ಮವಿಶ್ವಾಸ ಗಟ್ಟಿಗೊಳ್ಳುತ್ತದೆ. ಹೊಸ ಸಾಧ್ಯತೆಯೆಡೆಗೆ ಮನಸ್ಸು ವಾಲುತ್ತದೆ. ಅಲ್ಲೊಬ್ಬ ವಿದ್ಯಾರ್ಥಿ ಇಂಗ್ಲಿಷ್ ಸಾಹಿತ್ಯವನ್ನು ಪದವಿ ತರಗತಿಯಲ್ಲಿ ಆಯ್ಕೆ ಮಾಡಿಕೊಂಡು ಸಂಭ್ರಮಿಸುತ್ತಾನೆ. ಇಲ್ಲೊಬ್ಬ, ಕಾಲೇಜಿನ ಬಯಲಿನಲ್ಲಿ ನೆಟ್ಟ ಹತ್ತಾರು ಸಸಿಗಳಿಗೆ ಆಸರೆಯಾಗಿ ನಿಲ್ಲುತ್ತಾನೆ. ಮುಂದೆ ಓದುವ ಆಸೆಯಿಂದ ಮನೆಯವರ ಮದುವೆ ಒತ್ತಾಯಕ್ಕೆ ಮಣಿಯದೆ ಗಟ್ಟಿಯಾಗಿ ನಿಲ್ಲುವ ಹೆಣ್ಣುಮಕ್ಕಳನೇಕರು ನನ್ನ ಕಣ್ಣಿನ ಮುಂದಿನ ಮಾದರಿಯಾಗಿ ಕಾಣುತ್ತಾರೆ. ಹಳ್ಳಿಯೊಳಗಿನ ಸಾಮಾಜಿಕ ಸಂಕೀರ್ಣತೆಯ ಒಳಗೇ ತಮ್ಮ ಬದುಕನ್ನು ಗಟ್ಟಿಗೊಳಿಸಿಕೊಳ್ಳಲು ತಹತಹಿಸುವ, ಸಮಾನತೆ, ಜಾತ್ಯಾತೀತೆಯತ್ತ ತುಡಿಯುವ ಈ ಎಳೆಯರು ನನ್ನ ಅನೇಕ ತಾತ್ವಿಕ ಪ್ರಶ್ನೆಗಳಿಗೆ ಉತ್ತರವಾಗುತ್ತಾರೆ.

ಕತ್ತಲ ದಾರಿ ದೂರವಿದೆ. ಕೊರತೆ ಇಲ್ಲದಂತೆ 'ಎಣ್ಣೆ, ಬತ್ತಿ'ಯನ್ನು ಹಾಕಿದರೆ ಈ ಮಕ್ಕಳೇ ಕಿರು ಹಣತೆಗಳಾಗಿ ಆ ದಾರಿಯನ್ನು ಬೆಳಗುವ ವಿಶ್ವಾಸವೂ ಇದೆ. ಶಿಕ್ಷಣದ ಸ್ಥಿತಿಗಷ್ಟೆ ಅಲ್ಲ, ಇವತ್ತಿನ ಒಟ್ಟು ಸಂದರ್ಭಕ್ಕೆ ಇಂಥದೊಂದು ವಿಶ್ವಾಸವಷ್ಟೆ ಸಾಂದರ್ಭಿಕ ಮದ್ದು ಎನ್ನಿಸುತ್ತೆ.

**-ಸ್ನೇಹಾ ಎನ್.ಆರ್, ಮೈಸೂರು**

ಪ್ರಿಯ ಓದುಗರೇ,

ಪತ್ರಿಕೆಗೆ ಲೇಖನ ಕಳಿಸಿಕೊಡಬಯಸುವವರು, ೫೦೦ ಶಬ್ದಗಳಿಗೆ ಮೀರದ ಲೇಖನಗಳನ್ನು ಸಾಂದರ್ಭಿಕ ಫೋಟೋ ಸಮೇತ ಮತ್ತು ಪತ್ರಿಕೆಯ ಲೇಖನಗಳಿಗೆ ಪ್ರತಿಕ್ರಿಯೆ ಕಳಿಸಬಯಸುವವರು ೨೫೦ ಶಬ್ದಗಳಿಗೆ ಮೀರದಂತೆ ನುಡಿ/ಬರಹದಲ್ಲಿ ಬರೆದು ಈ ಮೇಲ್ ಮಾಡಬಹುದು.

ಪತ್ರಿಕೆಯ ಆಶಯಕ್ಕೆ ಹೊಂದುವ ಪುಸ್ತಕಗಳನ್ನು ಮಾತ್ರ ಪರಿಚಯ/ವಿಮರ್ಶೆಗೆ ಆಯ್ಕೆ ಮಾಡಿಕೊಳ್ಳಲಾಗುವುದು. ಆಸಕ್ತರು ತಮ್ಮ ಪುಸ್ತಕಗಳ ಎರಡು ಪ್ರತಿಗಳನ್ನು ಸಂಪಾದಕರ ವಿಳಾಸಕ್ಕೆ ಕಳಿಸಬಹುದು. ಈ ವಿಷಯಗಳಲ್ಲಿ ಸಂಪಾದಕರದ್ದೇ ಅಂತಿಮ ತೀರ್ಮಾನ.

## ಪ್ರವಾಸಿ (ಸವಿತಾ) ಕಂಡ ಇಂಡಿಯಾ–೧

# ವಾಘಾ ಗಡಿಯಲ್ಲಿ ಒಂದು ಸಂಜೆ...

ಜನ ನುಗ್ಗಾಡುತ್ತಿದ್ದರು. ನಾನು ಈ ನೂಕಾಟದ ಲಾಭ ಪಡೆದು, ಅಲ್ಲಿನ ಎಲ್ಲ ನಿಯಮಗಳನ್ನೂ ಉಲ್ಲಂಘಿಸಿ ವಿ.ಐ.ಪಿ. ಗ್ಯಾಲರಿಯತ್ತ ಹೆಜ್ಜೆ ಹಾಕಿದೆ. ಅರ್ಥಾತ್ ಬೇಲಿ ಹಾರಿದೆ! ಅಬ್ಬಾ ಎಷ್ಟು ಸಂತೋಷ ವಾಯಿತು! ನಾನು ಭಾರತ–ಪಾಕ್ ಗಡಿ ಬಾಗಿಲಿನ ಹತ್ತಿರವೇ ಇದ್ದೆ. ನಾನು ಕುಳಿತ ಸ್ಥಳದಿಂದ ಗೇಟು ಅಂದರೆ ಗಡಿ ಬರೀ ಹತ್ತು ಮಾರುಗಳು! ಈ ನೂಕಾಟದಲ್ಲಿ ನನ್ನ ಸಹ ಪ್ರವಾಸಿಗರು ಮತ್ತು ಸ್ನೇಹಿತರು ಎಲ್ಲೆಲ್ಲಿಯೋ ಹರಡಿ ಹೋಗಿದ್ದರು. ಎಲ್ಲಿ ಹೋಗುತ್ತಾರೆ, ಸಿಕ್ಕೆ ಸಿಗುತ್ತಾರೆ ಎಂದು ನಾನು ನಿರಾತಂಕದಿಂದ ಅಲ್ಲೇ ವಿ.ಐ.ಪಿ.ಯಾಗಿ ಆಸೀನಳಾದೆ! ನನ್ನ ಪಕ್ಕ ಕೂತಿದ್ದ ವಿದೇಶಿ(ಪಶ್ಚಿಮದ) ಮಹಿಳೆ ಗಡಿಯಾಚೆ–ಗಡಿಯೀಚೆ (ಎಂದಿನ ಕಾರ್ಯ ಕ್ರಮದಂತೆ) ನಡೆಯುತ್ತಿದ್ದ ಹಾಡು–ನೃತ್ಯ–ವಿಚಿತ್ರ ಸೈನಿಕ ಕಸರತ್ತುಗಳನ್ನು ಕುತೂಹಲಭರಿತ ಗಾಬರಿ ಯಿಂದ ವೀಕ್ಷಿಸುತ್ತಿದ್ದಳು. ನಮ್ಮ ಕಡೆಯಿಂದ ದೇಶಪ್ರೇಮದ ಗೋಷಣೆಗಳು ಮೊಳಗುತ್ತಿದ್ದವು. ಇದರ ಮಧ್ಯೆ, ನೆರೆದಿರುವ ಜನರಾರೂ ಪಾಕಿಸ್ತಾನ ವಿರೋಧಿ ಘೋಷಣೆಗಳನ್ನು ಕೂಗಬಾರದೆಂದು ಗಡಿ ಭದ್ರತಾ ಪಡೆಯವರು ಪದೇ ಪದೇ ಧ್ವನಿವರ್ಧಕದ ಮೂಲಕ ವಿನಂತಿಸುತ್ತಿದ್ದರು. ಒಂದು ರೀತಿಯ ತಲ್ಲಣಪೂರ್ಣ ಸಂಭ್ರಮ ಅಲ್ಲಿ ಮೆರೆದಾಡುತ್ತಿತ್ತು.



ಎರಡೂ ಕಡೆ ಪಥ ಸಂಚಲನ, ಹಾಡು, ನೃತ್ಯ ಎಲ್ಲ ಮುಗಿದ ಮೇಲೆ ಗಡಿಯ ಬಾಗಿಲು ಮುಚ್ಚುವ ಸಮಯ ಬಂತು. ಆಗಂತೂ ನಮ್ಮ ಪಡೆಯವರು ವಿವಿಧ ಭಾವ ಭಂಗಿಗಳಲ್ಲಿ ಕಸರತ್ತು ಮಾಡುತ್ತಾ, ಸುಳ್ಳು ಸುಳ್ಳೇ ಮುನಿಸು ಆವಾ ಹಿಸಿಕೊಂಡಂತೆ– ಆಕಾಶಕ್ಕೇ ಎಂಬಂತೆ ಕೈಕಾಲುಗಳನ್ನು ಎತ್ತಿ ಒಗೆಯುವುದೇನು, ಅದರ ಭಾಗವಾಗಿ ಗಡಿ ಬಾಗಿಲನ್ನು ಜೋರಾಗಿ ಒದ್ದು ಮುಚ್ಚುವುದೇನು!–ಅಬ್ಬರದ ದೇಶಪ್ರೇಮ ಮೆರೆದು ಬಾಗಿಲಿಗೆ ಬೀಗ ಜಡಿದರು. ಆ ಕಡೆಯೂ ಅದೇ ಆಗಿರಬೇಕು!

ಇದಾದ ತಕ್ಷಣವೇ ಎರಡೂ ಕಡೆಯಿಂದ ಜನ ಅವರವರ ಗಡಿಯ ಬಾಗಿಲ ಬಳಿ ಸಾರಿಕಿಕ್ಕಿರಿದು ನಿಂತು ಬಾಗಿಲ ಸಂದುಗಳಿಂದ ಪರಸ್ಪರ ಮಿಕಿ ಮಿಕಿನೋಡತೊಡಗಿದರು. ಯಾವುದೇ ಕಾರಣಕ್ಕೆ ಗಡಿಯ ಬಾಗಿಲು ತೆಗೆದದ್ದೇ ಆದರೆ, ಈಚೆಯಿಂದ ಆಚೆಗೆ, ಆಚೆಯಿಂದ ಈಚೆಗೆ ನುಗ್ಗಿ ಬರಲು ಸನ್ನದ್ಧರಾದಂತೆ ಆ ಈ ಜನ ವಿಚಿತ್ರ ಉದ್ವಿಗ್ನತೆಯಲ್ಲಿದ್ದಂತೆ ನಿಂತೇ ಇದ್ದರು. ನಾನೂ ಬಾಗಿಲ ಬಳಿ ನಿಂತು ಅತ್ತ ನೋಡಿದೆ. ಅವರು, ನಾವು ಇಬ್ಬರೂ ಗಡಿ ಬಾಗಿಲೆಂಬ ಅಡ್ಡಗೋಡೆಯಿರುವ ಒಂದೇ ಬಂಧಿಖಾನೆಯಲ್ಲಿ ಇದ್ದಂತೆ ಭಾಸವಾಯಿತು... ಯಾರಿಗೂ ಹೋಗುವ ಮನಸ್ಸಿಲ್ಲ! 'ಚಲೋ ಚಲೋ' ಎಂದು ಗಡಿ ಭದ್ರತಾ ಪಡೆಯವರು ನಮ್ಮನ್ನು ಅಲ್ಲಿಂದ ಕದಲಿಸಲು ಯತ್ನಿಸುತ್ತಿದ್ದರು. ಆದರೆ ಬಾಗಿಲಿನ ಎರಡೂ ಕಡೆ ನಿಂತವರು ಅಲ್ಲೇ ಬೇರುಬಿಟ್ಟಂತೆ, ಕದಲಲು ನಿರಾಕರಿಸುತ್ತಿರುವಂತೆ ನಿಂತೇ ಇದ್ದರು! 'ಕತ್ತಲಾಗುತ್ತಿದೆ, ನಡೆಯಿರಿ...' ಎಂದು ಪದೇ ಪದೇ ಆದೇಶಿಸಿದರೂ, ಜಮಾಯಿಸಿದ ಜನ ಕದಲಲೊಲ್ಲರು! 'ದ್ವೇಷವೂ ಪ್ರೀತಿಯ ಇನ್ನೊಂದು ಮುಖವಲ್ಲವೇ?' ಈ ಮಾತಿನ ಸತ್ಯ ಮೊದಲ ಬಾರಿಗೆ ಅಲ್ಲಿ ನನಗೆ ಸಾಕ್ಷಾತ್ಕಾರವಾದಂತೆನಿಸಿತು...

ಕೊನೆಗೂ ಹೊರಡಲೇಬೇಕಾಗಿ ಬಂದು, ಮುಂದೆ ಸಾಗುವಾಗ ಭಾರತದ ಪ್ರವೇಶ ದ್ವಾರದಲ್ಲಿನ ಅಶೋಕ ಚಕ್ರ ನನ್ನ ಕಣ್ಣನ್ನು ಮುದ್ದಿಸಿತು. ನಾನು ಭಾರತದ ನಿವಾಸಿ, ಹೆಮ್ಮೆ ಅನಿಸಿತು. ಜೊತೆಗೇ, 'ಕುರುಡು ಹಮ್ಮು ಬೇಟೆಯಾಡಿ ಜೀವ ನರಳಿದೆ' ಎಂಬ ಕವಿ ಸಾಲು ಏಕೋ ಒಳಗೊಳಗೇ ಅನುರಣಿಸಿತು. ಯಾರೋ ಹೇರಿರುವ ದ್ವೇಷದ ಭಾರವನ್ನು ಆದಷ್ಟು ಬೇಗ ಇಳಿಸಿಕೊಂಡು ಒಂದಾಗಬೇಕು... ಹೇಗೆ ಒಂದಾಗುವುದು? ದಾರಿಗಾಣದೆ ಹೃದಯ ಪರಿತಪಿಸಿತು.

ಅದೋ ಅಲ್ಲಿ ಗಡಿಯಾಚೆಯಿಂದ ಎಲ್ಲರ ಕಣ್ತಪ್ಪಿಸಿ ನುಸುಳಿಕೊಂಡು ಬಂದ ದುಪ್ಪಟ್ಟಾಗಳು ನಮಗಾಗಿ ಕಾದು ಕುಳಿತಿವೆ!. ಅಯ್ಯೋ ಎಷ್ಟು ಸುಲಭ ದರ ಅಂತ ಒಬ್ಬೊಬ್ಬರೂ ಮೂರು–ನಾಲ್ಕು ಖರೀದಿಸಿ ಮೈಮೇಲೆ ಹಾಕಿಕೊಂಡೆವು. ದೇವರೇ... ಎಷ್ಟು ಬೆಚ್ಚಗಿದೆ!

**–ಸವಿತಾ ನಾಗಭೂಷಣ.**

ಪ್ರಿಯ ಓದುಗರೇ,

ಪತ್ರಿಕೆಯ ಮೊದಲ ಸಂಚಿಕೆಗೆ ರಾಜ್ಯಾದ್ಯಂತ ದೊರೆತಿರುವ ಸ್ವಾಗತ ನಮ್ಮಲ್ಲಿ ಹೊಸ ಹುರುಪು ಮೂಡಿಸಿದೆ. ಆದರೆ ಹಣಕಾಸಿನ ಬೆಂಬಲ ಇನ್ನಷ್ಟು ಅಗತ್ಯವಿದೆ. ಪತಿಕೆಯ ಪೋಷಕ ನಿಧಿಗೆ ನಿಮ್ಮ ಶಕ್ತ್ಯಾನುಸಾರ ದೇಣಿಗೆ ನೀಡಿ. ಹಣಕಾಸಿನ ಅನುಕೂಲವಿಲ್ಲದವರು ಕನಿಷ್ಠ ವಾರ್ಷಿಕ ಚಂದಾ ನೂರು ರೂಪಾಯಿಗಳನ್ನು ಕಳಿಸಿಕೊಡಿ. ಪತ್ರಿಕೆ ಇನ್ನೂ ನೋಂದಣಿಯಾಗದಿರುವುದರಿಂದ, ಹಣವನ್ನು ಸಂಪಾದಕರ ಹೆಸರಿಗೆ(ಡಿ.ಎಸ್.ನಾಗಭೂಷಣ) ಎಂ.ಓ. ಮಾಡಿ ಅಥವಾ ಡಿ.ಡಿ/ಚೆಕ್ ರೂಪದಲ್ಲಿ ಪತ್ರಿಕೆಯ ಮುಖಪುಟದಲ್ಲಿರುವ ವಿಳಾಸಕ್ಕೆ ಕಳಿಸಿಕೊಡಿ.

ಅದಕ್ಕಾಗಿ ಅವರು ಪಶ್ಚಾತ್ತಾಪ ಮತ್ತು ಕ್ಷಮಾಪಣೆಗಳ ಮೂಲಕ ತಮ್ಮನ್ನು ತಾವು ಸ್ಪಷ್ಟಪಡಿಸಿಕೊಳ್ಳಬೇಕಿತ್ತು. ನಾನು ಇಂತಹ ಮಾತುಗಳನ್ನೆಲ್ಲ ಒಂದೋ ಅಥವಾ ಎರಡೋ ಸಭೆಗಳಲ್ಲಿ ಅನಿವಾರ್ಯವಾದಾಗ ಮಾತ್ರ ಆಡಿದ್ದೇನೆ. (೨) ಸಂಪತ್ತು ಸೃಷ್ಟಿಸಲು ಕಷ್ಟ ಪಟ್ಟು ಕೆಲಸಮಾಡಬೇಕೆನ್ನುವ ಘೋಷಣೆ ಮತ್ತು ಮಂತ್ರ ಸಾಕಷ್ಟು ಉಪಕರಣಗಳು ಮತ್ತು ಯಂತ್ರಗಳ ಪೂರೈಕೆಯ ಬೆಂಬಲವಿಲ್ಲದ ಸಂದರ್ಭದಲ್ಲಿ ಬರೀ ಹುಸಿ ಮತ್ತು ಬರಡು ಎನ್ನಿಸಿಕೊಳ್ಳುತ್ತದೆ. ಈ ಸಂಬಂಧವಾಗಿ ನಾನು, ಈಗಾಗಲೇ ಜನ ಎಷ್ಟು ಕಷ್ಟಪಟ್ಟು ದುಡಿಮೆ ಮಾಡುತ್ತಿದ್ದಾರೆ ಎಂಬುದನ್ನು ಪ್ರಧಾನ ಮಂತ್ರಿ ಒಂದು ವಾರ ರಿಕ್ಷಾ ಎಳೆದು ತಿಳಿದುಕೊಳ್ಳಬೇಕೆಂದು ಸಲಹೆ ಮಾಡಿದ್ದೇನೆ. (೩) ಪ್ರಧಾನ ಮಂತ್ರಿ ಮತ್ತು ಅವರ ಸರ್ಕಾರ ಬರಗಾಲದ ಹೊಣೆ ಹೊರಬೇಕಾಗಿದೆ ಮತ್ತು ಇದಕ್ಕಾಗಿ ಮಳೆ, ಮೋಡ ಇತ್ಯಾದಿಗಳನ್ನು ದೂಷಿಸುವುದನ್ನು ನಿಲ್ಲಿಸಬೇಕಾಗಿದೆ. ಏಕೆಂದರೆ ಅಧಿಕಾರ ವಹಿಸಿಕೊಂಡ ನಂತರ ಪ್ರಧಾನಿ ಯಾವುದೇ ಕಾರಣಕ್ಕಾಗಿ ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸಲು ನಿರಾಕರಿಸುವ ಮೂಲಕ ವಾರ್ಷಿಕವಾಗಿ ಕನಿಷ್ಠ ೨೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಕೊರತೆಗೆ ಕಾರಣರಾಗಿದ್ದಾರೆ. ಹಾಗೇ ಬೀಳು ಬಿದ್ದ ಭೂಮಿಯಲ್ಲಿ ಉಳುಮೆ ಮಾಡಲು ಆಹಾರ ಸೇನೆಯೊಂದನ್ನು ರಚಿಸಲು ನಿರಾಕರಿಸುವ ಮೂಲಕ ಇನ್ನೂ ೨೦ ಲಕ್ಷ ಟನ್ನುಗಳಷ್ಟು ಮತ್ತು ಭೂಮಿಯನ್ನು ಪುನರ್ವಿತರಿಸಿ ಸಣ್ಣ ನೀರಾವರಿ ಯೋಜನೆಗಳಿಗಾಗಿ ಸ್ವಯಂ ಪ್ರೇರಿತ ಶ್ರಮದಾನವನ್ನು ಪ್ರೋತ್ಸಾಹಿಸಲು ನಿರಾಕರಿಸುವ ಮೂಲಕ ಮತ್ತೆ ೪೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಕೊರತೆಗೆ ಕಾರಣರಾಗಿದ್ದಾರೆ. (೪) ಲಕ್ಷಾಂತರ ರೂಪಾಯಿಗಳಷ್ಟು ದೊಡ್ಡದಾಗಿರುವ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯನ್ನು ಸರ್ಕಾರದ ಅಥವಾ ಸಂಸತ್ತಿನ ಲೆಕ್ಕಪತ್ರ ಪರಿಶೋಧನೆಗೆ ಒಳಪಡಿಸಬೇಕು ಮತ್ತು ಅದರ ಖರ್ಚು ವೆಚ್ಚಗಳನ್ನು ಈಗಿರುವಂತೆ ಅವರ ವೈಯುಕ್ತಿಕ ವಿವೇಚನಾಧಿಕಾರಕ್ಕೆ ಬಿಡಬಾರದು. ಈ ನಿಧಿಯನ್ನು ಪ್ರಧಾನ ಮಂತ್ರಿಯ ವೈಯುಕ್ತಿಕ ವರ್ಚಸ್ಸನ್ನು ಬೆಳಸಲು ಬಳಸಲಾಗುತ್ತಿದೆ ಎಂಬ ಅನುಮಾನ ಯಾರಿಗೂ ಬಾರದಂತೆ ನೋಡಿಕೊಳ್ಳಬೇಕು. ಈ ವಿಷಯಗಳಲ್ಲಿ ಏನಾದರೂ ನಿರ್ಧಾರ ಆಗಬಹುದು ಎಂದು ನಿರೀಕ್ಷಿಸುತ್ತಾ ಈ ಮಾತುಗಳನ್ನು ನಾನು ಬಹಳ ಬಾರಿ ಆಡಿಲ್ಲ.

ಪ್ರಧಾನ ಮಂತ್ರಿಗಳ ಟೀಕಾಕಾರರ ಪೈಕಿ, ಬಹುಶಃ ನಾನು ಅವರನ್ನು ವೈಯುಕ್ತಿಕ ನೆಲೆಯಲ್ಲಿ ಅತಿ ಕಡಿಮೆ ಟೀಕಿಸಿದವನಿರಬೇಕು;ಹಾಗೇ ಒರಟಾಗಿ, ಆದರೆ ಸಕಾರಣವಾಗಿ ಅತಿ ಹೆಚ್ಚು ಟೀಕಿಸುತ್ತಿರುವವನೂ ನಾನೇ ಎಂಬುದು ನನಗೆ ಗೊತ್ತಿದೆ. ಪ್ರಧಾನ ಮಂತ್ರಿ ಸಾರ್ವಜನಿಕವಾಗಿ ಮಾಡದ ಯಾವುದೇ ಕೆಲಸದ ಬಗ್ಗೆ ನಾನು ಎಂದೂ ಮಾತಾಡಿಲ್ಲ. ಅವರ ಬಂಧುವೊಬ್ಬರು ಖಾಸಗಿ ಸಂಭಾಷಣೆಯೊಂದರಲ್ಲಿ ಇಂತಹ ಮಾತು ಶುರು ಮಾಡಿದಾಗ ನಾನೇ ಅವರಿಗೆ ಮುಂದೆ ಮಾತಾಡದಂತೆ ಅಂತಿಮ ಎಚ್ಚರಿಕೆ ನೀಡಿದ್ದೇನೆ. ಆದರೆ ಇದೇ ಮಾತನ್ನು ಪ್ರಧಾನ ಮಂತ್ರಿ ಮತ್ತು ವಿಶೇಷವಾಗಿ ಅವರ ಪರಿವಾರದವರ ಬಗ್ಗೆ ಹೇಳಬಹುದೆಂದು ನನಗನ್ನಿಸುತ್ತಿಲ್ಲ. ಈ ಪರಿವಾರದವರು ಅಗ್ಗದ ವದಂತಿ ಮತ್ತು ವ್ಯಂಗ್ಯ-ಕಟಕಿಗಳನ್ನು ಚಲಾವಣೆಗೆ ತರುವುದರಲ್ಲಿ ನಿಸ್ಸೀಮರಾಗಿದ್ದಾರೆ. ಸಾರ್ವಜನಿಕ ನೀತಿ ಸಂಬಂಧವಾದ ಸಾರ್ವತ್ರಿಕ ನಡೆ ನುಡಿಗಳಲ್ಲಿ ಪ್ರಧಾನಿ ಅಮೂರ್ತ ಮತ್ತು ಸ್ಥೂಲವಾಗಿದ್ದುಕೊಂಡು, ಕಾರಣ ವಿಲ್ಲದೆ ಇತರರನ್ನು ದೂಷಿಸುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಅವರು ಸಮಯ ಸಿಕ್ಕಾಗಲೆಲ್ಲ ನನ್ನನ್ನು ಖಂಡಿಸುವ ಮತ್ತು ನಿಮ್ಮನ್ನು ಮತ್ತು ಇತರರನ್ನು ಹೊಗಳುವ ಅಶ್ಲೀಲ ನಡೆಯನ್ನು ಪ್ರದರ್ಶಿಸುತ್ತಿದ್ದಾರೆ.

ನಾನು ವಿದೇಶ ಪ್ರವಾಸದಲ್ಲಿದ್ದಾಗ ತಮ್ಮನ್ನು ಮತ್ತು ತಮ್ಮ ಸರ್ಕಾರವನ್ನು ಟೀಕಿಸುವುದರ ಹೊರತಾಗಿ ನನಗೆ ಬೇರೆ ಕೆಲಸವಿಲ್ಲವೆಂದು ಪ್ರಧಾನ ಮಂತ್ರಿ ಭಾವಿಸಿದಂತಿದೆ. ಇದು ಸಂಪೂರ್ಣ ಅಸತ್ಯ. ಏಕೆಂದರೆ ಅವರಿಗಾಗಲೀ, ಅವರ ಸರ್ಕಾರಕ್ಕಾಗಲೀ ನಾನು ಅಷ್ಟು ಮಹತ್ವ ನೀಡಿಲ್ಲ. ನನ್ನ ಭಾಷಣಗಳು ಮಾತ್ರವಲ್ಲ, ಖಾಸಗಿ ಮಾತುಕತೆಗಳ ದಾಖಲೆಗಳು ಲಭ್ಯವಿವೆ. ಸಾರ್ವಜನಿಕ ಮತ್ತು ಖಾಸಗಿ ಮಾತುಕತೆಗಳ ಒಟ್ಟು ಸಮಯದಲ್ಲಿ, ಭಾರತ ಸರ್ಕಾರ ಮತ್ತು ಪ್ರಧಾನ ಮಂತ್ರಿಯ ಬಗ್ಗೆ ಮಾತಾಡಲು ನನ್ನನ್ನು ಒತ್ತಾಯಿ ಸಲಾಗುತ್ತದೆಯಾದರೂ, ನಾನು ಅದಕ್ಕೆ ಶೇ. ೫ಕ್ಕಿಂತ ಹೆಚ್ಚು ಭಾಗವನ್ನು ನೀಡಿಲ್ಲ. ಎರಡು ವರ್ಷಗಳ ಹಿಂದೆ ನಾನು ವಿಭಿನ್ನ ನೀತಿಯೊಂದನ್ನು ಅಳವಡಿಸಿಕೊಂಡಿದ್ದೆನಾದರೂ, ಸಮಾಜವಾದ ಮತ್ತು ವಿಶ್ವ ಸರ್ಕಾರದಲ್ಲಿ ನಂಬಿಕೆ ಇಟ್ಟಿರುವ ನನಗೆ, ಪ್ರಧಾನ ಮಂತ್ರಿಗಳು ಬಯಸುತ್ತಿರುವಂತೆ ಸ್ವದೇಶ ಮತ್ತು ವಿದೇಶ ಭಾಷಣಗಳ ನಡುವೆ ಅಂತಹ ಯಾವುದೇ ಗೆರೆ ಎಳೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪ್ರಧಾನ ಮಂತ್ರಿ ಮತ್ತು ಅವರ ವಿದೇಶಿ ರಾಯಭಾರ ಕಛೇರಿಗಳು ನನ್ನ ಬಗ್ಗೆ ಅಪಪ್ರಚಾರದ ಎಷ್ಟೇ ಪ್ರಯತ್ನ ಮಾಡಿದರೂ, ನಾನು ಕುಗ್ಗಿ ಅವರಿಂದ ಕನಿಷ್ಠ ಸೌಜನ್ಯ-ಸೌಹಾರ್ದ ವರ್ತನೆಯನ್ನು ಬಯಸುತ್ತಾ ಅವರ ಕಛೇರಿಗಳ ಬಾಗಿಲ ಬಳಿ ಎಂದೂ ಸುಳಿಯಲಾರೆ. ನಾವು ಒಬ್ಬರನ್ನೊಬ್ಬರು ಅವರವರ ಪಾಡಿಗೆ ಇರಲು ಬಿಟ್ಟುಬಿಡಬೇಕು ಅಥವಾ ಅವರು ಅಧಿಕೃತ ರಾಯಭಾರ ಔಪಚಾರಿಕತೆಗಳನ್ನು ಪಾಲಿಸುವುದನ್ನು ಕಲಿಯಬೇಕು.

ಇನ್ನಷ್ಟು ಸಂಗತಿಗಳನ್ನು ಹೇಳುವುದಾದರೆ, ಅಮೆರಿಕಾದ ರಾಯಭಾರಿ ನಾರ್ಮನ್ ಕಸಿನ್ಸ್ ಅವರು ಮೆಕಾರ್ಥಿಯಂತೆ ವರ್ತಿಸುತ್ತಾ, ನಾನು ಜಪಾನ್ ಪರ ಎಂದು ಅಮೆರಿಕನ್ ವ್ಯವಸ್ಥೆಗೆ ಸಾಬೀತು ಪಡಿಸಲು, ೧೯೪೨ರಲ್ಲಿ 'ಹರಿಜನ'ದಲ್ಲಿ ನಾನು ಬರೆದ ಯಾವುದೋ ಒಂದು ಲೇಖನವನ್ನು ಹುಡುಕಿ ಸಾಗಿಸಿ ಕಳಿಸುತ್ತಾರೆಂದರೆ, ಇದರ ಮಾಹಿತಿಯನ್ನು ಅವರಿಗೆ ಯಾರು ನೀಡಿರಬಹುದೆಂದು ಊಹಿಸಲಾಗದಷ್ಟು ದಡ್ಡ ನಾನಲ್ಲ. ಈ ರಾಯಭಾರಿಯು ನನ್ನ ಅಮೆರಿಕಾ ಪ್ರವಾಸದ ಎರಡು ವಾರಗಳ ಮುನ್ನವೇ ಚಿಕಾಗೋದಲ್ಲಿನ ಭಾರತೀಯ ವಿದ್ಯಾರ್ಥಿಗಳ ಸಭೆಯಲ್ಲಿ ಅದರ ಪ್ರಸ್ತಾಪ ಮಾಡಿ, ನನ್ನನ್ನು ಯಾವಾಗಲೂ ಭಾರತದ ಉತ್ಕರ್ಷಕ್ಕೆ ವಿರುದ್ಧವಾಗಿ ಮಾತಾಡುವ ಮತ್ತು ಕೆಲಸ ಮಾಡುವ ಕೆಂಪು ಗಾಡಿಯ ಪ್ರಯಾಣಿಕ ಎಂದು ಪರಿಚಯಿಸುವ ಸೌಜನ್ಯವನ್ನು ಮೆರೆದಿದ್ದರು!

ದೇಶದ ಸಂಘಟಿತ ಅಭಿಪ್ರಾಯ, ಪತ್ರಿಕೆಗಳು, ವಾಣಿಜ್ಯ ಮಂಡಳಿಗಳು, ರಾಜಕೀಯ ಪಕ್ಷಗಳು ಇತ್ಯಾದಿಗಳ ಮೇಲೆ ಪ್ರಧಾನ ಮಂತ್ರಿಯವರು ಎಂತಹ ಕಪಿಮುಷ್ಠಿಯನ್ನು ಹೊಂದಿದ್ದಾರೆಂದು ನಾನು ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲೆ. ವ್ಯಕ್ತಿಯೊಬ್ಬನ ಮೇಲೆ ವೈಯುಕ್ತಿಕ ಅವಹೇಳನದ ಕಾರ್ಯಕ್ರಮವನ್ನು ಚಾಲೂ ಮಾಡಿ, ಆತನ ವಿಚಾರಗಳು ಚರ್ಚೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಬಂಡವಾಳಶಾಹಿ ಮತ್ತು ಕಮ್ಯುನಿಸಂಗಳಾಚೆಗೆ, ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳಾಚೆಗೆ, ಅಮೆರಿಕಾ ಮತ್ತು ರಷ್ಯಾಗಳಾಚೆಗೆ ಹೆಜ್ಜೆ ಹಾಕುವುದೆಂದರೆ ಕತ್ತಿಯಲಗಿನ ಮೇಲೆ ನಡೆದಂತೆ ಮತ್ತು ಪ್ರಧಾನ ಮಂತ್ರಿಯ ಪರಿವಾರ ಮತ್ತು ಕಮ್ಯುನಿಸ್ಟರಿಬ್ಬರಿಂದಲೂ ಅವಹೇಳನಕ್ಕೀಡಾಗಲು ಸಿದ್ಧವಾಗುವುದೆಂದೇ ಅರ್ಥ ಎಂದು ನನಗೆ ಗೊತ್ತು. ಆದರೆ ಇದೆಲ್ಲ ನನಗೆ ಸಾಕಾಗಿ, ಇದರಾಚೆ ಬರಲು ನಾನು ಕಾತುರನಾಗಿದ್ದೇನೆ.

**ನಿಮ್ಮ ಪ್ರೀತಿಯ**
**(ಸಹಿ)**
**ರಾಮಮನೋಹರ**

**೧ ಮಾರ್ಚ್, ೧೯೬೨**
**ಕಲ್ಕತ್ತ**

**(ಕನ್ನಡಕ್ಕೆ: ಡಿಎಸ್ಸೆನ್)**

ಶಿಲ್ಪಗಳ ಬಗ್ಗೆ ಮಾತನಾಡಿ. ಅವನ್ನು ಜನಸಂಖ್ಯೆ ಹೆಚ್ಚಿಸಲು ಕೆತ್ತಲಾಗಿತ್ತು;ಈಗ ಅವು ನಿಷ್ಪ್ರಯೋಜಕವಾಗಿವೆ ಎನ್ನುತ್ತಾರೆ!(ನಗು) ಹಿಂದೂ ದೇವತೆಗಳ ಐಂದ್ರಿಯಿಕವಾದ, ಜೀವಂತವಾದ, ವಿಕಾಸಶೀಲ ಸ್ವಭಾವವನ್ನು ಅರ್ಥ ಮಾಡಿ ಕೊಳ್ಳಬಲ್ಲವರು ಹಳ್ಳಿಯ ಜನರೇ ಎನಿಸುತ್ತದೆ. ಅವರು ಬಂಡೆಯ ಮೇಲೆ ಒಂದಿಷ್ಟು ಕಿತ್ತಳೆ ಬಣ್ಣ ಬಳಿದು, ಅದನ್ನೇ ಹನುಮಂತ ಎಂದು ಭಾವಿಸಬಲ್ಲರು!

**ಶೋ:** ನಿಮ್ಮ ಚಿತ್ರಗಳ ಬಗ್ಗೆ ಯಾವ ಪರಿಭಾಷೆಯಲ್ಲಿ ಮಾತನಾಡಬೇಕೆಂದು ಮತ್ತು ನೆನಪಿಸಿಕೊಳ್ಳಬೇಕೆಂದು ನೀವು ಬಯಸುತ್ತೀರಿ?

**ಹು:** ನಾನೆಂದೂ ಜಾಣ, ನಿಗೂಢ, ಅಮೂರ್ತವಾಗಿರಲು ಬಯಸಲಿಲ್ಲ. ಹೇಳುವುದನ್ನು ಸರಳವಾಗಿ ಹೇಳಬಯಸಿದವನು ನಾನು. ನನ್ನ ಭಿತ್ತಿಗಳಲ್ಲಿ ಕಥೆಯೊಂದಿರಬೇಕೆಂದು ಬಯಸಿದವನು ನಾನು. ನನ್ನ ಚಿತ್ರಗಳು ಜನರೊಂದಿಗೆ ಮಾತಾಡಬೇಕೆಂದು ಬಯಸಿದವನು ನಾನು. ೧೯೪೮ರಲ್ಲಿ ಮೊದಲ ಬಾರಿಗೆ ನಾನು ಬಾಂಬೆ ಆರ್ಟ್ಸ್ ಸೊಸೈಟಿಯಲ್ಲಿ ನನ್ನ ಚಿತ್ರ ಪ್ರದರ್ಶನ ಮಾಡುವ ಹೊತ್ತಿಗೆ, ಸಾಕಷ್ಟು ಕೆಲಸ ಮಾಡಿ ಅನುಭವ ಗಳಿಸಿದ್ದೆ. ಈ ಪ್ರದರ್ಶನದಲ್ಲಿ ನಾನು ತಂಜಾವೂರು, ಚೋಳ ಮತ್ತು ಗುಪ್ತರ ಕಾಲದ ಅಭಿಜಾತ ರೂಪಗಳನ್ನು ಮತ್ತು ಪಹಾಡ್ ಪರಂಪರೆಯ ಚಿತ್ರಗಳಲ್ಲಿನ ಐಂದ್ರಯಿಕ ಆಕರ್ಷಣೆಯ ವಿವಿಧ ಬಣ್ಣಗಳನ್ನು ನೋಡಿ; ಅಭಿಜಾತ ರೂಪವಿದ್ದರೂ, ಜಾನಪದದ ಮುಗ್ಧತೆ ಇರುವಂತಹ ಚಿತ್ರಗಳನ್ನು ಬಿಡಿಸಿ ಇಟ್ಟಿದ್ದೆ. ಡಿ'ಸೌಜಾ ಇದನ್ನು ನೋಡಿ, ಇದನ್ನು ಎಲ್ಲಿಂದ ತಂದೆ ಎಂದು ಕೇಳಿದ. ನಾನು ಹೇಳಲಿಲ್ಲ. ಹೋಗಿ ಹುಡುಕು ಎಂದಷ್ಟೇ ಹೇಳಿದೆ. ಕಲಾ ಸಾಧನೆಯ ಹೃದಯ ಸ್ಥಾನ ದಲ್ಲಿರುವುದು ಇದೇ: ಪರಂಪರೆಯಿಂದ ಅತ್ಯುತ್ತಮವಾದುದನ್ನು ಗುರುತಿಸಿ ಆಯ್ದುಕೊಂಡು ಅದನ್ನು ಕುಶಲಗೊಳಿಸಿಕೊಳ್ಳುವುದು. ಭಾರತದಲ್ಲಿ ಎಂತೆಂತಹ ಪರ್ವಕಾಲಗಳು ಆಗಿ ಹೋಗಿವೆ! ಅವುಗಳ ಹಿಂದೆ ಶತಶತಮಾನಗಳ ವೀಕ್ಷಣೆ ಮತ್ತು ಗುರುತಿಸುವಿಕೆಯ ಕುಶಲತೆ ಇದೆ. ನೀವು ಚಕ್ರವನ್ನು–ನಿಮ್ಮ ವ್ಯಕ್ತಿ ವೈಶಿಷ್ಟ್ಯವನ್ನು– ಪುನರನ್ವೇಷಿಸಲಾರಿರಿ, ನಿಮ್ಮ ಸೃಜನಶೀಲ ಕಣ್ಣು ಇರುವುದು, ಯಾವುದನ್ನು ನೀವು ಗುರುತಿಸಿ ಎತ್ತಿಕೊಳ್ಳುತ್ತೀರಿ ಎಂಬುದರಲ್ಲಿ. ಇನ್ನೊಂದು ಅಂದರೆ, ನಿಮ್ಮದೇ ಲಯ ಮತ್ತು ಸಂಯೋಜನೆಯ ಲೆಕ್ಕಾಚಾ ರವನ್ನು ಕಂಡು ಕೊಳ್ಳುವುದು. ಖಾಲಿ ಭಿತ್ತಿಯ ಮೇಲೆ ಎಲ್ಲಿ ಗೆರೆ ಹಾಕಬೇಕು, ಎಲ್ಲಿ ಬಿಂದು ಇಡಬೇಕು? ಎಷ್ಟು ಹಳದಿ, ಎಷ್ಟು ಕೆಂಪು ಬಳಸಬೇಕು? ನಾನು ೧ ಮಿಮೀ ಕೆಂಪನ್ನು ಬಳಸಿದರೆ, ನೀಲಿ ಅರ್ಧ ಮಿಮೀ ಇರಬೇಕೋ ಅಥವಾ ಇನ್ನೂ ಹೆಚ್ಚಿರಬೇಕೋ ಎಂಬುದನ್ನು. ಕಲಾವಿದನೊಬ್ಬನ ಧ್ವನಿ ಇರುವುದು ಈ ಲೆಕ್ಕಾಚಾರದಲ್ಲಿ, ಈ ಗಣಿತದಲ್ಲಿ. ನಿಮ್ಮದೇ ಶೈಲಿ ಮತ್ತು ಭಾಷೆ ರೂಢಿಸಿ ಕೊಳ್ಳಬೇಕಾದರೆ ೬೦–೭೦ ವರ್ಷಗಳ ನಿರಂತರ ದುಡಿಮೆ ಬೇಕಾಗು ತ್ತದೆ.

**ಶೋ:** ನಿಮ್ಮ ರಚನೆಗಳ ಪೈಕಿ ಅತ್ಯಂತ ಮಹತ್ವದ್ದೆಂದು, ಪಿಕಾಸೋನ Guernicaಗೆ ತನ್ನದೇ ರೀತಿಯಲ್ಲಿ ಸಮನಾಗಿ ನಿಲ್ಲುವಂತಹದ್ದು ಎಂದು ನೀವು ಯಾವುದನ್ನು ಗುರುತಿಸುತ್ತೀರಿ?

**ಹು:** 'Between the Spider and the Lamp'(೧೯೫೬). ನನಗೆ ಅದರ ಗುಂಪು ಸಂಯೋಜನೆಯ ಹಿಂದಿನ ರಚನಾ ಕೌಶಲ್ಯದ ಬಗ್ಗೆ ಬಹಳ ಖುಷಿ ಇದೆ–ಆ ಐದು ಜನ ಏನು ಮಾತಾಡುತ್ತಿದ್ದಾರೆ ಎಂಬುದರ ಬಗ್ಗೆ ಅಲ್ಲಿ ಒಂದು ರೀತಿಯ ನಿಗೂಢತೆ ಸೃಷ್ಟಿಯಾಗಿದೆ. ಬಹುಶಃ ತಮಗೇ ಗೊತ್ತಿಲ್ಲದ ಕಥೆಗಳ ಬಗ್ಗೆ. ಆ ಹೆಂಗಸು ಸೂಕ್ಷ್ಮವಾದ ದಾರದ ಮೇಲೆ ಜೇಡವನ್ನು ಹಿಡಿದಿರುವ ಕುಶಲತೆಯ ಬಗೆಯಲ್ಲೇ ಒಂದು ವಿಶಿಷ್ಟ ಭಾವವಿದೆ. ಒಂದು ಭಯ. ನಾನು ಅಪರೂಪಕ್ಕಷ್ಟೇ ಕಣ್ಣುಗಳನ್ನು ಬಿಡಿಸುವುದು. ಕಣ್ಣುಗಳನ್ನು ಬಿಡಿಸುವುದರಿಂದ ವ್ಯಕ್ತಿಯೊಬ್ಬನ ಚಹರೆಗಳನ್ನು ಗುರುತಿಸಿ ಅವನನ್ನು ವ್ಯಾಖ್ಯಾನಿಸುವ ಕೆಲಸವಾಗಿಬಿಡುವುದರಿಂದ, ನಾನು ನನ್ನ ಕೃತಿಗಳಲ್ಲಿ ಸಾಮಾನ್ಯ ವಾಗಿ ಕಣ್ಣುಗಳನ್ನು ಬಳಸುವುದಿಲ್ಲ. ಬದಲಿಗೆ ದೇಹವನ್ನು ಭಾವಪೂರ್ಣ ಅಭಿವ್ಯಕ್ತಿಯನ್ನಾಗಿ ಮಾಡಲು ಇಷ್ಟಪಡುತ್ತೇನೆ. ಕೈಗಳ ಭಾವಾಭಿವ್ಯಕ್ತಿಯನ್ನು ಅರಿಯಲು ನಾನು ರೋಡಿನ್‌ನ ಶಿಲ್ಪಗಳನ್ನು– ಉದಾಹರಣೆಗೆ, 'Men of Calais'–ಅಧ್ಯಯನ ಮಾಡಿದೆ. ಅವಕ್ಕೆ ಅಭಿಜಾತ ಮುದ್ರೆಗಳ ಜ್ಞಾನ ಪ್ರದಾನ ಮಾಡಿದೆ! ಭಾರತದಲ್ಲಿನ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಎಷ್ಟೊಂದು ಮಾತನಾಡಲಾಗುತ್ತದೆ, ಆದರೆ ಸ್ವಾತಂತ್ರ್ಯಾನಂತರದ ಈ ೬೦ ವರ್ಷಗಳ ನಂತರವೂ ನಮ್ಮ ಕಲಾ ವಿದ್ಯಾರ್ಥಿಗಳು ದೇಹ ರೂಪವನ್ನು ಗ್ರೀಕ್ ಕಲೆಯ ಮೂಲಕವೇ ಕಲಿಯುತ್ತಿದ್ದಾರೆ. ಡಾ.ಕುಮಾರಸ್ವಾಮಿಯವರ ಹೆಸರು ಎಲ್ಲೂ ಕಾಣುವುದಿಲ್ಲ! ಕಾಲೇಜುಗಳಲ್ಲಿ ಷೇಕ್ಸ್‌ಪಿಯರ್, ಕೀಟ್ಸ್ ಬಗ್ಗೆ ಹೇಳಿಕೊಡಲಾಗುತ್ತದೆ, ಕಾಳಿದಾಸನ ಪ್ರಸ್ತಾಪವನ್ನೇ ಮಾಡುವುದಿಲ್ಲ! ಹೀಗಾಗಿಯೇ ಭಾರತದಲ್ಲಿ ಪೆಹಚಾನ್ ಎಂಬುದರ, ಭಾರತೀಯ ಅಂದರೇನು ಎಂಬುದರ ಅರಿವಿನ ಸುಳಿವೇ ಇಲ್ಲವಾಗಿದೆ. ಇಲ್ಲಿ ಪರಿಸ್ಥಿತಿ ಎಷ್ಟು ಮೂರ್ಖ ತನದಿಂದ ಕೂಡಿದೆ ಎಂದರೆ, ಕೆಲವು ವರ್ಷಗಳ ಹಿಂದೆ ನನ್ನ ಜೊತೆಗೆ ಸುಬ್ಬುಲಕ್ಷ್ಮಿ, ಜೆಆರ್‌ಡಿ ಟಾಟಾ ಮತ್ತು ಮದರ್ ತೆರೇಸಾ ಅವರನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯದವರು ಸನ್ಮಾನಿಸಿದಾಗ ನಮಗೆ ಧರಿಸಲು ಕೆಂಪು ಟೋಪಿ ಮತ್ತು ನಿಲುವಂಗಿಗಳನ್ನು ನೀಡಲಾಯಿತು!(ನಗು) ಇದು ಹಿಂದೂ ಸಂಸ್ಕೃತಿ ಅಧ್ಯಯನ ಪೀಠದ ಗತಿ! ಭಾರತೀಯ ಸಂಸ್ಕೃತಿಯ ವಾರಸುದಾರಿಕೆಯ ಶೈಲಿ! ಇದಕ್ಕಿಂತ ಅಶ್ಲೀಲವಾದದ್ದು ಜಗತ್ತಿನಲ್ಲಿ ಬೇರಾವುದಾದರೂ ಇದೆಯಾ? ಇದು ದುರ್ವತನೆ! ಈ ಬಗ್ಗೆ ಇನ್ನೇನು ತಾನೇ ಹೇಳಬಲ್ಲೆ?

**(ಕನ್ನಡಾನುವಾದ: ಡಿಎಸ್ಸೆನ್)**

# ದಾಖಲೆ: ಜಯಪ್ರಕಾಶರಿಗೆ ಲೋಹಿಯಾ ಬರೆದ ಒಂದು ಪತ್ರ

**ಕಾಂಗ್ರೆಸ್ಸಿನೊಳಗೇ ಒಂದು ಉಪ ಪಕ್ಷವಾಗಿ ಹುಟ್ಟಿ, ಗಾಂಧೀಜಿ ಸಾವಿನ ನಂತರ ಕಾಂಗ್ರೆಸ್ ಸಹವಾಸ ತೊರೆಯಬೇಕಾಗಿ ಬಂದ ಸಮಾಜವಾದಿ ಪಕ್ಷ; ಆ ನಂತರವೂ ಕಾಂಗ್ರೆಸ್ ಬಗೆಗಿನ ತನ್ನ ಸಂಬಂಧ ಸಮೀಕರಣಗಳನ್ನು ಸ್ಪಷ್ಟಗೊಳಿಸಿಕೊಳ್ಳದೆ ತನ್ನ ಆರಂಭದ ದಿನಗಳಿಂದಲೇ ಹೇಗೆ ಬಳಲತೊಡಗಿತು ಎಂಬುದರ ಸೂಚನೆಯನ್ನು ಈ ಪತ್ರ ಒದಗಿಸುತ್ತದೆ. ಸಮಾಜವಾದಿ ಪಕ್ಷದೊಳಗೂ ಕೈವಾಡ ನಡೆಸಲು ಪ್ರಧಾನಿ ನೆಹ್ರೂಗೆ ಅವಕಾಶ ನೀಡುತ್ತಿದ್ದ ತಮ್ಮ ಸಮಾಜವಾದಿ ಮಿತ್ರರ ಬಗೆಗಿನ ಜಿಗುಪ್ಸೆಯಲ್ಲಿ ಲೋಹಿಯಾ ಬರೆದಿರುವ ಈ ಪತ್ರ, ಮುಂದೆ ಸಮಾಜವಾದಿ ಪಕ್ಷ ಏಕೆ ಒಡೆಯಿತು ಮತ್ತು ಒಡೆಯುತ್ತಲೇ ಹೋಯಿತು ಎಂಬುದರ ಸೂಚನೆ ನೀಡುತ್ತದೆ.–ಸಂ**

ನನ್ನ ಪ್ರೀತಿಯ ಜಯಪ್ರಕಾಶ್,

ನೀವು ನನ್ನ ಗಮನಕ್ಕೆ ತಂದ ಪ್ರಧಾನ ಮಂತ್ರಿಯವರ ಪತ್ರವನ್ನು ಎರಡು ಬಾರಿ ಓದಿದೆ. ನಾನು ಇಲ್ಲಿ ಏನನ್ನೂ ಯಾವುದೇ ಸಂಚಾರಿ ಭಾವದ ಕಿರಿಕಿರಿಯಿಂದ ಬರೆಯುತ್ತಿಲ್ಲ. ನಾನು ಎಂದೂ ಯಾವುದೇ ರೀತಿಯ 'ನೋವನ್ನುಂಟು ಮಾಡುವ ಅಥವಾ ವೈಯುಕ್ತಿಕ' ವೆನ್ನಿಸುವುದನ್ನು ಬರೆದಿದದ್ದು ನನಗೆ ನೆನಪಿಲ್ಲ. ಆದರೆ ರಾಜನ ಭಯದಿಂದಾಗಿ ರಾಜಸೇವಾಸಕ್ತರಲ್ಲಿ ತಳಮಳವನ್ನುಂಟುಮಾಡಿರಬಹುದಾದ ಕೆಲವು ವಿಷಯಗಳನ್ನು ನಾನಿಲ್ಲಿ ದಾಖಲಿಸುತ್ತಿದ್ದೇನೆ. (೧) ಈ ಮಹಾಶಯರು ಮಹಾತ್ಮ ಗಾಂಧಿಯವರ ಶವಯಾತ್ರೆಯ ಸಮಯದಲ್ಲಿ ಶವ ವಾಹನವನ್ನೇರಿ ನಿಂತದ್ದು ರಾಷ್ಟ್ರವೊಂದು ಎಂದೂ ಅನುಭವಿಸಬಾರದ ಅಪಮಾನದ ಸಂಗತಿಯಾಗಿದೆ. ಇದು ಆಕಸ್ಮಿಕವಾದ ತಿಕ್ಕಲುತನವಾಗಿದ್ದರೆ,

ಹೇಳುತ್ತೇವೆ ಅಲ್ಲವೇ? ಏ ಆಪಸ್ ಕ ಮಾಮಲಾ ಹೈಂ! ನನ್ನ ಕಲೆಯನ್ನು ವಿರೋಧಿಸುವವರಿಗೆ ಅದು ಅರ್ಥವಾಗಿಲ್ಲ ಆಥವಾ ಅವರು ಅದನ್ನು ನೋಡಿಲ್ಲ ಅಷ್ಟೇ!

**ಶೋ:** ನೀವೇಕೆ ಭಾರತಕ್ಕೆ ಬಂದು ಹೋರಾಟ ಮುಂದುವರೆಸಬಾರದು?

**ಹು:** ಪರಿಸ್ಥಿತಿ ಹೀಗಿರುವಂತೇ ಇದ್ದರೆ, ನಾನು ವಾಪಸ್ ಬರಲಾರೆ. ನನ್ನನ್ನು ಯಾರೂ ಗಡಿಪಾರು ಮಾಡಿಲ್ಲ. ನನಗೆ ತುಂಬಾ ವಯಸ್ಸಾಗಿ, ದೈಹಿಕ ಹಲ್ಲೆಯನ್ನು ಎದುರಿಸಲಾರೆನಾದ್ದರಿಂದ ನಾನಾಗಿಯೇ ದೇಶ ಬಿಟ್ಟು ಹೊರಬಂದೆನಷ್ಟೆ. ಇದು ಅಲ್ಲಿ ದಾಖಲಾಗಿರುವ ಬರೀ ಮೊಕದ್ದಮೆಗಳ ಪ್ರಶ್ನೆಯಲ್ಲ. ಅಲ್ಲಿ ಉಂಟು ಮಾಡಲಾಗಿರುವ ವಾತಾವರಣವನ್ನು ನೋಡಿದಾಗ, ಯಾರಾದರೂ ಬೀದಿಯಲ್ಲಿ ನನ್ನನ್ನು ನೂಕಿ, ಹೊಡೆದು ಹಾಕಲು ಯತ್ನಿಸಿದರೆ. ನಾನು ನನ್ನನ್ನು ರಕ್ಷಿಸಿಕೊಳ್ಳಲಾರೆ. ಬಹುಶಃ ನಾನು ಸ್ವದೇಶಕ್ಕೆ ಬರಲು ಏಕೈಕ ಅವಕಾಶವಿರುವುದು ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಎಂದು ಕಾಣುತ್ತದೆ. ಅಥವಾ ಮಾಯಾವತಿ ಬಂದಲ್ಲಿ... ಈ ಸರ್ಕಾರಕ್ಕೆ ಬೆನ್ನೆಲುಬಿಲ್ಲ. ಅವರ ಕೈಗಳನ್ನು ಕಟ್ಟಿ ಹಾಕಲಾಗಿದೆ. ತಾವು ಮಾತನಾಡಿದರೆ ಅಥವಾ ಕ್ರಮ ಕೈಗೊಂಡರೆ ತಮ್ಮ ಮೇಲೆ ತುಷ್ಟೀಕರಣದ ಆರೋಪ ಬಂದುಬಿಡುತ್ತದೆ ಎಂದು ಅವರು ಹೆದರಿದ್ದಾರೆ. ವಿಪರ್ಯಾಸವೆಂದರೆ, ಅಧಿಕಾರವಿಲ್ಲದಿದ್ದಾಗ ಬಿಜೆಪಿ ತನ್ನ ವೋಟ್ ಬ್ಯಾಂಕ್ ನಿರ್ಮಿಸಿಕೊಳ್ಳಲು ಈ ರೀತಿಯ ಭಾವನೆಗಳನ್ನು ಪ್ರಚೋದಿಸುತ್ತದೆ. ಆದರೆ ಅಧಿಕಾರಕ್ಕೆ ಬಂದಲ್ಲಿ, ಗೌರವಾರ್ಹವಾಗಿ ಮತ್ತು ಧರ್ಮನಿರಪೇಕ್ಷವಾಗಿ ಕಾಣಲು ತನ್ನ ಅತಿವಾದಿ ಗುಂಪುಗಳನ್ನು ನಿಯಂತ್ರಿಸುತ್ತದೆ. ಏನು ಮಾಡುವುದು, ಇದು ಭಾರತದ ಇಂದಿನ ವಿಪರ್ಯಾಸ! ವಾಸ್ತವವಾಗಿ ಈ ಗೊಂದಲವನ್ನೆಲ್ಲ ನ್ಯಾಯಾಲಯಗಳು ಪರಿಹರಿಸಬೇಕು. ನನ್ನ ಕಲೆ ಅಶ್ಲೀಲವಾಗಿದೆ ಅಥವಾ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡುತ್ತದೆ ಎಂಬ ಆಪಾದನೆ ನ್ಯಾಯಾಲಯಗಳಲ್ಲಿ ನಿಲ್ಲುವುದಿಲ್ಲ. ಯಾರಾದರೂ ಪ್ರತಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದರೆ ಆಗಬಹುದೇನೋ... ನನಗಂತೂ ಆಗುವುದಿಲ್ಲ.

**ಶೋ:** ನೀವೇಕೆ ನಿಮ್ಮ ಕಲೆ ಬಗ್ಗೆ ಕ್ಷಮೆ ಕೇಳಿದಿರಿ? ನಿಮ್ಮ ಚಿತ್ರಗಳನ್ನು ಹರಿದು ಹಾಕಿದ ಗೂಂಡಾಗಳಿಗಿಂತ ನಿಮಗೆ ಹಿಂದೂ ಮೂರ್ತಿ ವಿದ್ಯೆ ಮತ್ತು ಶಾಸ್ತ್ರಗಳ ಬಗ್ಗೆ ಗೊತ್ತಿದೆಯಲ್ಲವೇ?

**ಹು:** ಇಲ್ಲ. ನಾನೆಂದೂ ನನ್ನ ಕಲೆಯ ವಿಷಯವಾಗಿ ಕ್ಷಮೆ ಕೇಳಿಲ್ಲ. ಅದರ ಬಗ್ಗೆ ನನಗೆ ಸಂಪೂರ್ಣ ನಂಬಿಕೆ ಇದೆ. ನಾನು ಹೇಳಿದ್ದಿಷ್ಟೆ. ನಾನು ನನ್ನ ಚಿತ್ರಗಳನ್ನು–ದೇವ ದೇವಿಯರದ್ದೂ ಸೇರಿ–ಆಳವಾದ ಪ್ರೀತಿ, ನಂಬಿಕೆ ಮತ್ತು ಸಂಭ್ರಮಾಚರಣೆಗಳೊಂದಿಗೆ ರಚಿಸಿದ್ದೇನೆ. ಹಾಗೆ ಮಾಡುವಾಗ ನಾನು ಯಾರಿಗಾದರೂ ನೋವನ್ನುಂಟು ಮಾಡಿದ್ದರೆ, ಕ್ಷಮಿಸಿಬಿಡಿ. ಇಷ್ಟೇ ನಾನು ಹೇಳಿದ್ದು. ನನ್ನ ಪ್ರಕಾರ ಮಾನವತೆಗಿಂತ ಕಲೆ ಹೆಚ್ಚಿನದೇನಲ್ಲ. ಭಾರತ ಸಂಪೂರ್ಣ ಅರ್ಥದಲ್ಲಿ ಒಂದು ಅನನ್ಯ ದೇಶ. ಉದಾರವಾದಿ, ವೈವಿಧ್ಯಮಯ ದೇಶವದು. ಇಂತಹುದು ಜಗತ್ತಿನಲ್ಲಿ ಬೇರೆಲ್ಲೂ ಇಲ್ಲ. ದೇಶದಲ್ಲಿನ ಸದ್ಯದ ಮನಃಸ್ಥಿತಿ ಕೇವಲ ಒಂದು ಐತಿಹಾಸಿಕ ಪ್ರಕ್ರಿಯೆಯಷ್ಟೆ. ನನಗೆ ಭಾರತವೆಂದರೆ ಬದುಕಿನ ಸಂಭ್ರಮಾಚರಣೆಯ ಒಂದು ಪ್ರತೀಕ. ಈ ಗುಣವನ್ನು ನೀವು ಬೇರೆಲ್ಲಿಯೂ ಕಾಣಲಾರಿರಿ.

**ಶೋ:** ನಿಮಗೆ ಹಿಂದೂ ಮೂರ್ತಿಶಾಸ್ತ್ರ ಮತ್ತು ಸಂಸ್ಕೃತಿಯ ಪರಿಚಯ ಆರಂಭವಾದದ್ದು ಹೇಗೆ ಎಂಬುದನ್ನು ಕುರಿತು ಒಂದಿಷ್ಟು ಹೇಳಿ.

**ಹು:** ಪಂಢರಪುರದಲ್ಲಿ ಒಂದು ಮಗುವಾಗಿ, ನಂತರ ಇಂದೂರಿನಲ್ಲಿ ರಾಮಲೀಲಾ ನೋಡಿ ನಾನು ಬೆರಗಾಗಿ ಹೋಗಿದ್ದೆ. ನಾನು ಮತ್ತು ನನ್ನ ಗೆಳೆಯ ಮಂಕೇಶ್ವರ್ ಇದನ್ನು ಯಾವಾ ಗಲೂ ಅಭಿನಯಿಸಿ ಸಂತೋಷಪಡುತ್ತಿದ್ದೆವು. ರಾಮಾಯಣ ಎಂತಹ ಸಮೃದ್ಧ ಮತ್ತು ಶಕ್ತಿಶಾಲಿ ಕಥೆಯೆಂದರೆ, ಡಾ. ರಾಜಗೋಪಾಲಾಚರಿ ಯವರು ಹೇಳಿದಂತೆ, ಅದರ ಪುರಾಣ ಇಲ್ಲಿ ವಾಸ್ತವವಾಗಿ ಪರಿವರ್ತಿತವಾಗಿ ಹೋಗಿದೆ. ಅದಿರಲಿ, ನನ್ನ ಜೀವನದಲ್ಲಿ ಆದ ದುರ್ಘಟನೆ ಗಳಿಂದಾಗಿ ನನಗೆ ೧೯ ಆಗಿದ್ದಾಗಲೇ ನಾನು ಆಧ್ಯಾತ್ಮಿಕ ಗ್ರಂಥಗಳನ್ನು ಓದತೊಡಗಿದೆ. ನನ್ನ ತಾಯಿ ಸತ್ತು ನಾನು ಮನೆ ಬಿಡಬೇಕಾಗಿ ಬಂದಾಗ, ೧೪–೧೫ನೇ ವಯಸ್ಸಿನಲ್ಲಿ ನನಗೆ ರಾತ್ರಿ ಭಯಂಕರ ದುಃಸ್ವಪ್ನಗಳು ಕಾಡತೊಡಗಿದ್ದವು. ೧೯ನೇ ವಯಸ್ಸಿನಲ್ಲಿ ಇವೆಲ್ಲ ನಿಂತು ಹೋದವು. ನನಗೆ ಮಹಮ್ಮದ್ ಇಷಾಕ್ ಎಂಬ ಗುರು ಇದ್ದರು. ಅವರೊಂದಿಗೆ ನಾನು ಎರಡು ವರ್ಷಗಳ ಕಾಲ ಪವಿತ್ರ ಗ್ರಂಥಗಳ ಅಧ್ಯಯನದಲ್ಲಿ ತೊಡಗಿದೆ. ಆ ಹೊತ್ತಿಗೆ ಬೈರಾಗಿಯಾಗಿಯಾಗಿದ್ದ ನನ್ನ ಗೆಳೆಯ ಮಂಕೇಶ್ವರನೊಂದಿಗೆ ನಾನು ಗೀತಾ, ಉಪನಿಷತ್ತುಗಳು ಮತ್ತು ಪುರಾಣಗಳನ್ನು ಓದಿ ಚರ್ಚಿಸಿದೆ. ನಂತರ ಆತ ಹಿಮಾಲಯಕ್ಕೆ ಹೋಗಿಬಿಟ್ಟ. ಆನಂತರ ಹಲವಾರು ವರ್ಷಗಳ ಕಾಲ ನಾನು ಈ ಅಧ್ಯಯನ ಮುಂದುವರೆಸಿದೆ. ಇದೆಲ್ಲದರಿಂದಾಗಿ ನಾನು ಸಂಪೂರ್ಣವಾಗಿ ಶಾಂತನಾದೆ. ಆಗಿನಿಂದ ನನಗೆ ಕನಸುಗಳ ಅಥವಾ ದುಃಸ್ವಪ್ನಗಳ ಕಾಟ ಸಂಪೂರ್ಣವಾಗಿ ಇಲ್ಲವಾಗಿದೆ.

ಇದಾದ ಎಷ್ಟೋ ವರ್ಷಗಳ ನಂತರ ೧೯೫೮ರಲ್ಲಿ ಹೈದರಾಬಾದ್‌ನಲ್ಲಿ ಡಾ. ರಾಮಮನೋಹರ ಲೋಹಿಯಾ ಅವರ ಭೇಟಿಯಾಯಿತು. ಅವರು ನನಗೆ ರಾಮಾಯಣವನ್ನು ಚಿತ್ರಿಸಲು ಹೇಳಿದರು. ಆಗ ನನ್ನ ಬಳಿ ಏನೂ ಇರಲಿಲ್ಲ. ಆದರೂ ಎಂಟು ವರ್ಷಗಳ ಕಾಲಾವಧಿಯಲ್ಲಿ ೧೫೦ ಚಿತ್ರಗಳನ್ನು ರಚಿಸಿದೆ. ಅದಕ್ಕಾಗಿ ನಾನು ವಾಲ್ಮೀಕಿ ಮತ್ತು ತುಳಸೀ ರಾಮಾಯಣಗಳನ್ನು (ಮೊದಲನೆಯದು ಹೆಚ್ಚು ಐಂದ್ರಿಯಿಕ ಸೌಂದರ್ಯದಿಂದ ಕೂಡಿದೆ) ಓದಿದೆ ಮತ್ತು ಬನಾರಸ್‌ನಿಂದ ಪಂಡಿತರನ್ನು ಕರೆಸಿ ಅವುಗಳಲ್ಲಿನ ಸೂಕ್ಷ್ಮ ಭಾಗಗಳ ಬಗ್ಗೆ ಚರ್ಚಿಸಿದೆ. ನಾನು ಇದನ್ನೆಲ್ಲ ಮಾಡುತ್ತಿದ್ದಾಗ ಕೆಲವು ಸಂಪ್ರದಾಯವಾದಿ ಮುಸ್ಲಿಮರು, ನೀನೇಕೆ ಮುಸ್ಲಿಂ ವಸ್ತುಗಳ ಬಗ್ಗೆ ಚಿತ್ರ ರಚಿಸಬಾರದು ಎಂದು ಕೇಳಿದರು. ನಾನು ಇಸ್ಲಾಂಗೆ ಅಂತಹ ಸಹನಶೀಲತೆ ಇದೆಯೇ ಎಂದು ಅವರನ್ನು ಕೇಳಿದೆ. ಲಿಪಿಶೈಲಿ ಸ್ವಲ್ಪ ಬದಲಾದರೂ ಅವರು ನನ್ನ ಭಿತ್ತಿಗಳನ್ನು ಹರಿದು ಚೂರು ಮಾಡಿಯಾರು ಎಂದು ಹೇಳಿದೆ.

ನನ್ನ ಜೀವಿತ ಕಾಲದಲ್ಲಿ ನಾನು ನೂರಾರು ಗಣೇಶರನ್ನು ಚಿತ್ರಿಸಿದ್ದೇನೆ–ಓಹ್, ಅದೊಂದು ಅದ್ಭುತ ಮನಮೋಹಕ ರೂಪ! ನಾನು ಯಾವುದೇ ದೊಡ್ಡ ಕೆಲಸ ಆರಂಭ ಮಾಡುವ ಮುನ್ನ ಗಣೇಶನನ್ನು ಚಿತ್ರಿಸಿಯೇ ಮುಂದುವರೆಯುವುದು. ನನಗೆ ಶಿವನ ವಿಗ್ರಹ ವಿನ್ಯಾಸ ಕೂಡಾ ತುಂಬ ಇಷ್ಟ. ಜಗತ್ತಿನ ಅತ್ಯಂತ ಸಂಕೀರ್ಣ ರೂಪಗಳಲ್ಲೊಂದಾದ ನಟರಾಜ, ಸಾವಿರಾರು ವರ್ಷಗಳ ಕಾಲ ವಿಕಾಸಗೊಳ್ಳುತ್ತಾ ಸೃಷ್ಟಿಯಾದ ಮೂರ್ತಿ. ಅದು ಸರಿ ಸುಮಾರಾಗಿ, ಐನ್‌ಸ್ಟೀನ್‌ನ ಸಮೀಕರಣದಂತೆ ಈ ವಿಶ್ವದ ಮತ್ತು ಭೌತ ವಾಸ್ತವದ ಗುಣಸ್ವರೂಪವನ್ನು ಕುರಿತ ಆಳವಾದ ತಾತ್ವಿಕ ಚಿಂತನೆ ಹಾಗೂ ಗಣಿತೀಯ ಲೆಕ್ಕಾಚಾರಗಳ ಪರಿಣಾಮವೇ ಸರಿ. ನನ್ನ ಮಗಳು ರಾಯಿಸಾ ಮದುವೆಯಾಗಲು ನಿರ್ಧರಿಸಿ, ಅದೊಂದು ಶಾಸ್ತ್ರಾಚಾರ ವಾಗಬಾರದೆಂದು ಬಯಸಿದಾಗ, ನಾನು ಒಂದು ಕಾರ್ಡ್‌ನಲ್ಲಿ ಅದನ್ನು ಘೋಷಿಸಿ, ಜಗತ್ತಿನಾದ್ಯಂತ ಇದ್ದ ನನ್ನ ಬಂಧುಗಳಿಗೆ ಕಳಿಸಿದೆ. ಆ ಕಾರ್ಡ್ ಮೇಲೆ ನಾನು, ಶಿವ ಪಾರ್ವತಿಯ ತೊಡೆಯ ಮೇಲೆ ಕೂತು ಅವಳ ಸ್ತನವೊಂದರ ಮೇಲೆ ಕೈಇಟ್ಟಿರುವ ಚಿತ್ರವನ್ನು–ವಿಶ್ವದ ಮೊದಲ ಮದುವೆ ಯನ್ನು–ಚಿತ್ರಿಸಿದ್ದೆ. ನಗ್ನತೆ ಎಂಬುದು ಹಿಂದೂ ಸಂಸ್ಕೃತಿಯಲ್ಲಿ ಪರಿಶುದ್ಧತೆ ಗೊಂದು ರೂಪಕವಷ್ಟೆ.

ಅಲ್ಲಾ, ನನಗೆ ಇಷ್ಟೊಂದು ನಿಕಟ ಮತ್ತು ಆತ್ಮೀಯವಾಗಿರುವುದನ್ನು ನಾನು ಅವಮಾನಿಸುತ್ತೇನೆಯೇ? ನಾನು, ಪುನರ್ಜನ್ಮವೂ ಸೇರಿದಂತೆ ಹಿಂದೂಗಳೊಂದಿಗೆ ಹಲವು ಸಾಮ್ಯ ನಂಬಿಕೆಗಳನ್ನು ಹೊಂದಿರುವ ಷಿಯಾಗಳ ಒಂದು ಉಪ ಪಂಗಡವಾದ ಸುಲೇಮಾನಿ ಸಮುದಾಯಕ್ಕೆ ಸೇರಿದವನು. ಸಂಸ್ಕತಿಗಳಾಗಿ, ಜುಡಾಯಿಸಂ ಮತ್ತು ಕ್ರಿಶ್ಚಿಯಾನಿಟಿ ಭಾವನಾತ್ಮಕವಾಗಿ ದೂರವಾದವುಗಳು. ಆದರೆ ಇದನ್ನೆಲ್ಲ ನನ್ನ ಕಲೆಯನ್ನು ವಿರೋಧಿಸುವವ ರೊಂದಿಗೆ ಚರ್ಚಿಸುವುದು ಅಸಾಧ್ಯವೇ ಸರಿ. ಅವರೊಂದಿಗೆ ಖಜುರಾಹೋ

# ಹಿಂದೂ ಸಂಸ್ಕೃತಿಯಲ್ಲಿ ನಗ್ನತೆ ಪರಿಶುದ್ಧತೆಗೆ ರೂಪಕ : ಎಂ.ಎಫ್.ಹುಸೇನ್



**ಎಂ.ಎಫ್. ಹುಸೇನರೆಂದೇ ಹೆಸರಾದ ಮಕ್ಬೂಲ್ ಫಿದಾ ಹುಸೇನ್ (೧೯೧೫–೨೦೧೧) ಆಧುನಿಕ ಭಾರತ ಕಂಡ ಅತ್ಯಂತ ಶ್ರೇಷ್ಠ ವರ್ಣಚಿತ್ರ ಕಲಾವಿದರಲ್ಲೊಬ್ಬರು. ಮಹಾರಾಷ್ಟ್ರದ ಭಕ್ತಿ ಕೇಂದ್ರವಾದ ಪಂಡರಾಪುರದ ಬೀದಿಗಳಲ್ಲಿ ಅನಾಥ ಮಗುವಾಗಿ ಬೆಳೆದು, ಮುಂಬೈನಲ್ಲಿ ಚಲಚಿತ್ರ ಜಾಹೀರಾತುಗಳ ಭಿತ್ತಿಚಿತ್ರಗಳನ್ನು ಬರೆಯುತ್ತಾ ಕಲಾವಿದನಾಗಿ ಮೂಡಿದ ಹುಸೇನ್; ೧೯೭೧ರ ಹೊತ್ತಿಗೆ, ಜಗತ್ತಿನ ಸರ್ವಶ್ರೇಷ್ಠ ಕಲಾವಿದನೆಂದು ಗುರುತಿಸಲ್ಪಟ್ಟ ಪಿಕಾಸೋನೊಂದಿಗೆ ವಿಶ್ವ ಚಿತ್ರ ಪ್ರದರ್ಶನದಲ್ಲಿ ತನ್ನ ಚಿತ್ರಗಳ ಪ್ರದರ್ಶನ ಮಾಡುವ ಅವಕಾಶ ಪಡೆದ ಅಪ್ರತಿಮ ಪ್ರತಿಭಾವಂತ. ಪಿಕಾಸೋನ ಘನಾಕೃತಿಗಳಂತೆ ಈತನ ಕುದುರೆಗಳು, ಜಾಗತಿಕ ಕಲಾ ಪ್ರಪಂಚದಲ್ಲಿ ಬಹುಕಾಲ ನಿಲ್ಲಬಲ್ಲ ಅನನ್ಯ ಕಲಾ ಪ್ರತೀಕಗಳಾಗಿ ಸ್ಥಾಪಿತವಾಗಿವೆ. ಈತ ಹಿಂದೂ ದೇವತೆಗಳನ್ನು–ಸರಸ್ವತಿ, ಪಾರ್ವತಿ ಇತ್ಯಾದಿಯರನ್ನು–ನಗ್ನ ರೂಪದಲ್ಲಿ ಚಿತ್ರಿಸಿದ ಎಂದು ಕೆಲವು ವರ್ಷಗಳ ಹಿಂದೆ ಹಿಂದೂ ಮೂಲ ಭೂತವಾದಿಗಳು ಈತನ ಮೇಲೆ ಹಲ್ಲೆ ನಡೆಸಿ ಈತನ ಕೃತಿಗಳನ್ನು ನಾಶ ಮಾಡುವ ಪ್ರಯತ್ನ ಮಾಡಿದರು. ಈತನ ಚಿತ್ರ ಪ್ರದರ್ಶನಗಳ ಮೇಲೆ ದಾಳಿ ನಡೆಸಿದರು. ಹಲವು ನ್ಯಾಯಾಲಯಗಳಲ್ಲಿ ಅಸಂಬದ್ಧ ಮೊಕದ್ದಮೆಗಳನ್ನು ಹೂಡಿದರು. ಕೊನೆಗೆ ಪ್ರಾಣಾಪಾಯದ ಬೆದರಿಕೆ ಹಾಕಿದರು. ಇದರಿಂದ ಬೇಸತ್ತ ೯೦ ವರ್ಷಗಳ ವೃದ್ಧ ಹುಸೇನ್ ೨೦೦೬ರಲ್ಲಿ ದೇಶ ಬಿಟ್ಟು ಕಟಾರ್‌ನಲ್ಲಿ ಆಶ್ರಯ ಪಡೆದು ತಮ್ಮ ಕಲಾ ಸೇವೆಯನ್ನು ಮುಂದುವರೆಸಿದರು. ೨೦೧೦ರಲ್ಲಿ ಆ ದೇಶದ ಪ್ರಜೆತನ ಪಡೆದ ಅವರು, ೨೦೧೧ರ ಜೂನ್‌ನಲ್ಲಿ ಅನಾರೋಗ್ಯ ಪೀಡಿತರಾಗಿ ಲಂಡನ್‌ನ ಆಸ್ಪತ್ರೆಯಲ್ಲಿ ಅಸು ನೀಗಿದರು. ಇದಕ್ಕೆ ಮುನ್ನ ತೆಹೆಲ್ಕಾ ಪತ್ರಿಕೆಯ ಶೋಮಾ ಚೌಧರಿ ಅವರೊಂದಿಗೆ ನಡೆಸಿದ ಸಂದರ್ಶನವೊಂದರ ಕನ್ನಡಾನುವಾದವನ್ನು ಇಲ್ಲಿ ನೀಡುತ್ತಿದ್ದೇವೆ. ಹುಸೇನರ ಮಾತುಗಳಲ್ಲಿ ಸಮಾಜವಾದಿ ಆಶಯಗಳು ಕಂಡೂ ಕಾಣದಂತೆ ಇಣುಕುತ್ತಿರುವುದನ್ನು ಓದುಗರು ಗಮನಿಸುತ್ತಾರೆಂದು ಭಾವಿಸುವೆ.–ಸಂ**

**ಶೋಮಾ ಚೌಧುರಿ:** ಹುಸೇನ್ ಸಾಬ್, ನಿಮ್ಮ ಮೇಲೆ ಮೂಲಭೂತವಾದಿಗಳು ನಡೆಸಿದ ದಾಳಿಯ ಬಗ್ಗೆ ನಿಮಗೇನನ್ನಿಸುತ್ತೆ?

**ಹುಸೇನ್:** ಇದೆಲ್ಲದರಿಂದ ನಾನೇನೂ ಚಿಂತಿತನಾಗಿಲ್ಲ. ಭಾರತ ಒಂದು ಪ್ರಜಾಪ್ರಭುತ್ವ ದೇಶ. ಪ್ರತಿಯೊಬ್ಬರಿಗೂ ಅಭಿಪ್ರಾಯ ಸ್ವಾತಂತ್ರ್ಯವಿದೆ. ಆದರೆ ಜನ ತಮ್ಮ ಅಭಿಪ್ರಾಯಗಳನ್ನು ಹಿಂಸಾಚಾರದ ಬದಲಾಗಿ ಚರ್ಚೆಯ ಮೂಲಕ ವ್ಯಕ್ತಪಡಿಸಬೇಕೆಂಬುದಷ್ಟೇ ನನ್ನ ಬಯಕೆ. ಮಾಧ್ಯಮ ಮಿತ್ರರು ನನ್ನ ಬಳಿಗೆ ಕಟುವಾದ ಹೇಳಿಕೆಯನ್ನು ನಿರೀಕ್ಷಿಸಿಯೇ–ಬಯಸಿಯೇ ಎಂದೂ ಹೇಳಬಹುದು– ಬರುತ್ತಾರೆ. ಆದರೆ ಭಾರತದ ಬಗ್ಗೆ ನಾನು ಆಶಾವಾದಿಯಾಗಿಯೇ ಇದ್ದೇನೆ. ಇದನ್ನೆಲ್ಲ ನಾನು ಕಾಲದ ಒಂದು ಕ್ಷಣ ಮಾತ್ರ ಎಂದು ಭಾವಿಸುವೆ. ನಮ್ಮ ಕೆಲಸ ೫೦೦೦ ವರ್ಷಗಳಿಂದ ಸಾಕಷ್ಟು ಶಕ್ತಿಯುತವಾಗಿಯೇ ನಡೆಯುತ್ತಾ ಬಂದಿದೆ; ಆದುದರಿಂದ ಇದು ಒಂದು ಸಣ್ಣ ಅಡೆ–ತಡೆ ಎಂದೇ ನಾನು ತಿಳಿದಿದ್ದೇನೆ. ಯುವ ಜನಾಂಗ ದೇಶದಲ್ಲಿನ ಸದ್ಯದ ಈ ಮೂಲಭೂತವಾದಿ ಮತ್ತು ಸಂಪ್ರದಾಯವಾದಿ ಮನೋಭಾವದಿಂದ ಬೇಸತ್ತು ಪರಿಸ್ಥಿತಿಯನ್ನು ಬದಲಾಯಿಸುತ್ತದೆ ಎಂಬ ದೃಢ ನಂಬಿಕೆ ನನಗಿದೆ. ನನ್ನ ದೇಶವನ್ನು ಬಿಟ್ಟು ಹೋಗಲು ನಾನು ಬಯಸಲಿಲ್ಲ ಆದರೆ ಅದೇ ವೇಳೆಗೆ ಸಂಪ್ರದಾಯವಾದಿ ಶಕ್ತಿಗಳನ್ನು ಸಮಾಜದಿಂದ ಬೇರ್ಪಡಿಸಿ ಹೊರಹಾಕಬೇಕೆಂದು ಬಯಸಿದವನೂ ನಾನಲ್ಲ. ನಾವೆಲ್ಲ ಒಂದು ದೊಡ್ಡ ಕುಟುಂಬದ ಸದಸ್ಯರು. ಈ ಕುಟುಂಬದ ಒಂದು ಮಗು ಏನನ್ನಾದರೂ ಮುರಿದು ಹಾಕಿದರೆ, ಅದನ್ನು ಮನೆಯಿಂದ ಹೊರ ಹಾಕಲಾಗುವುದಿಲ್ಲ. ಬದಲಿಗೆ ಅದಕ್ಕೆ ಒಂದಿಷ್ಟು ಬುದ್ಧಿ

**ಈ ಅಪೂರ್ವ ಕಲಾವಿದ, ಸಮಾಜವಾದಿ ಚಿಂತಕ ರಾಮ ಮನೋಹರ ಲೋಹಿಯಾರ ಅಭಿಮಾನಿ ಕೂಡಾ ಹೌದು. ಈ ಕಲಾವಿದನೇ ಹೇಳಿಕೊಂಡಂತೆ ತಾನು ರಾಮಾಯಣದ ಚಿತ್ರಗಳನ್ನು ಬಿಡಿಸಲಾರಂಭಿಸಿದ್ದು, ತನ್ನ ಚಿತ್ರಗಳ ಪೋಷಕರಲ್ಲೊಬ್ಬರಾಗಿದ್ದ ಬದ್ರಿ ವಿಶಾಲ ಪಿಟ್ಟಿಯವರ ಮೂಲಕ ಪರಿಚಯವಾದ ಲೋಹಿಯಾರ ಸೂಚನೆಯ ಮೇರೆಗೆ. ಅವರ 'ನೀವು ಬರೀ ಟಾಟಾ ಬಿರ್ಲಾಗಳಿಗಾಗಿ ಮಾತ್ರ ನಿಮ್ಮ ಕಲೆಯನ್ನು ಮೀಸಲಿರಿಸುತ್ತೀರೋ ಅಥವಾ ನಮ್ಮ ಹಳ್ಳಿಗರಿಗಾಗಿಯೂ ಏನಾದರೂ ರಚಿಸುತ್ತೀರೋ?' ಎಂಬ ಪ್ರಶ್ನೆಯಿಂದ ಕಲಕಲ್ಪಟ್ಟು. ಕಲಾ ಇತಿಹಾಸಕಾರ್ತಿ ಯಶೋಧರಾ ದಾಲ್ಮಿಯಾಗೆ ನೀಡಿದ ಇನ್ನೊಂದು ಸಂದರ್ಶನದಲ್ಲಿ ಹುಸೇನ್ ತಾವು ಹೇಗೆ ಲೋಹಿಯಾರ ಸೂಚನೆಯನ್ನು ಪಾಲಿಸಿ ಎಂಟು–ಹತ್ತು ವರ್ಷಗಳ ಕಾಲಾವಧಿಯಲ್ಲಿ ಬಿಡಿಸಿದ ರಾಮಾಯಣದ ಬೃಹತ್ ಚಿತ್ರಗಳನ್ನು ಅವರ ಅನಿರೀಕ್ಷಿತ ನಿಧನದ ನಂತರ ಅವರಿಗೆ ಶ್ರದ್ಧಾಂಜಲಿಯಾಗಿ, ಪಿಟ್ಟಿಯವರ ಸಲಹೆಯ ಮೇರೆಗೆ ಹೇಗೆ ಹೈದರಾಬಾದ್‌ನಿಂದ ೮೦ ಕಿಮೀಗಳ ದೂರದ ಹಳ್ಳಿಯೊಂದಕ್ಕೆ ಎತ್ತಿನ ಗಾಡಿಗಳಲ್ಲಿ ಪ್ರದರ್ಶನ ನೀಡುತ್ತಾ ಸಾಗಿಸಿ, ಬುರ್ರಕಥಾ ಹಾಡುಗಾರಿಕೆಯ ಜೊತೆಗೆ ಅವನ್ನು ಹಳ್ಳಿ ಜನರ ಕಲಾಭಿಜ್ಞತೆಯನ್ನು ಜಾಗೃತಗೊಳಿಸುವ ಪ್ರಯತ್ನದ ಭಾಗವಾಗಿ ಬಳಸಲಾಯಿತು ಎಂಬುದನ್ನು ವಿವರಿಸಿದ್ದಾರೆ. ಈ ಸಂದರ್ಶನದ ಮುಖ್ಯ ಮಾತೆಂದರೆ, 'ಹಳ್ಳಿಯ ಜನ ಬುರ್ರಕಥಾ ಕೇಳುತ್ತಾ, ಆ ಬೃಹತ್ ರಾಮ ಮತ್ತು ಹನುಮಾನರ ವರ್ಣಚಿತ್ರಗಳ ಮುಂದೆ ಕಿಕ್ಕಿರಿದು ಕೂತು ಮೈಮರೆತರು. ಯಾರೊಬ್ಬರೂ, ರಾಮನ ಕಣ್ಣುಗಳೆಲ್ಲಿ, ಈ ಚಿತ್ರವನ್ನು ಹೀಗೇಕೆ ಬಿಡಿಸಿದ್ದೀರಿ ಎಂಬ ಪ್ರಶ್ನೆಗಳನ್ನು ಕೇಳಲಿಲ್ಲ!'**

ಉಡುಪೆನ್ನಬಹುದಾದ ಕಚ್ಚೆ ಜುಬ್ಬಾ. ನಾನೆಣಿಸಿದುದಕಿಂತ ಸ್ವಲ್ಪ ಹೆಚ್ಚೇ ವಯಸ್ಸಾದಂತೆ ನನಗೆ ಆಗ ಕಂಡಿದ್ದಲ್ಲಿ, ಅದಕ್ಕೆ ಕಾರಣ; ಅಂದಿನ ಆ ದಣಿವಿಗಿಂತ, ಒಟ್ಟಾರೆ ಬದುಕಿನ ದಣಿವು ಅವರ ಮುಖವನ್ನು ಆವರಿಸಿದ್ದುದೇ ಕಾರಣವಿರಬಹುದು ಎಂದು ಅವರ ಬಗ್ಗೆ ಈಗ ಹೆಚ್ಚು ತಿಳಿದಿರುವ ನನಗೆ ಅನ್ನಿಸುತ್ತಿದೆ. ಅಬ್ಬಿಗೇರಿಯವರ ಓರಿಗೆಯ ಸಮಾಜವಾದಿಗಳಿಗೆ ಬದುಕಿನ ಕಷ್ಟದ ದಿನಗಳೇ ಹೆಚ್ಚು. ಅದರಿಂದ ಅವರು ಪಾರಾದಂತಿರಲಿಲ್ಲ. ಸುಖದ ದಿನಗಳನ್ನು ಕಂಡ ಸಮಾಜವಾದಿಗಳಾರೂ ಅವರ ನೆರವಿಗೆ ಬಂದಂತಿರಲಿಲ್ಲ. ಬಹುಶಃ ಎಷ್ಟೋ ವರ್ಷಗಳ ನಂತರ ಅವರು ಸಮಾಜವಾದಿಗಳ ಸಭೆಯೊಂದಕ್ಕೆ ಬಂದಂತಿತ್ತು. ಸ್ವಲ್ಪ ಕಾಲ ಅವರು ಕಾಂಗ್ರೆಸ್ ರಾಜಕಾರಣದಲ್ಲೂ ಇದ್ದು ವಿಷಣ್ಣಗೊಂಡಿದ್ದರು ಎಂದು ಕೇಳಿದ್ದೆ. ವಿಷಾದ ಯೋಗ ಅವರನ್ನು ಆವರಿಸಿದಂತಿತ್ತು. ಹಾಗಾಗಿ ಏಕೋ ಏನೋ ಪೂರ್ಣ ಅನ್ಯ ಮನಸ್ಕರಾದಂತಿದ್ದ ಅವರನ್ನು ಕಂಡು ನೀಲಗಂಗಯ್ಯ ಅವರು, 'ನಮ್ಮ ಅಬ್ಬಿಗೇರಿ ಒಳ್ಳೆ ವಾಗ್ಮಿ... ಈ ತಲೆಮಾರಿನ ಜನ ಅವರ ಮಾತನ್ನು ಕೇಳಲಿ. ಮೊದಲು ಅವರೇ ಮಾತಾಡಲಿ' ಎಂದು ಹುರಿದುಂಬಿಸಿದರು.

ವಿರೂಪಾಕ್ಷಪ್ಪನವರೇನೋ ಮಾತಾಡಿದರು. ಹಳೆಯ ನೆನಪುಗಳನ್ನು ಕೆದಕಿಕೊಳ್ಳುತ್ತಾ, ಉತ್ಸಾಹವನ್ನು ಆವಾಹಿಸಿಕೊಳ್ಳಲು ಹೆಣಗುತ್ತಾ ಮಾತನಾಡಲು ಪ್ರಯತ್ನಿಸಿದರಾದರೂ, ದೀರ್ಘ ರಾಜಕೀಯ ಆಯಾಸ ಅವರನ್ನು ಬಾಧಿಸುತ್ತಿದ್ದಂತಿತ್ತು. ಸಮಾಜವಾದವನ್ನು ಪ್ರಾಣ ಪದಕ ಮಾಡಿಕೊಂಡಿದ್ದ ಯಾರಿಗಾದರೂ ಆಯಾಸವಾಗಬಹುದಾದ ಸಂದರ್ಭವದು. ಸಮಾಜವಾದವು ಅರ್ಧ ಸಮಾಜವಾದಿಗಳ ಬೇಜವಾಬ್ದಾರಿ ರಾಜಕೀಯ ವರ್ತನೆಯಿಂದ ಇನ್ನರ್ಧ ಇತರರ ಅಪನಿರೂಪಣೆಗಳಿಂದ ಒಂದು ವಿಫಲ ಮತ್ತು ಕೆಲಮಟ್ಟಿಗೆ ಹಾಸ್ಯಾಸ್ಪದ ವಿದ್ಯಮಾನವೆನ್ನಿಸಿಕೊಳ್ಳುತ್ತಿದ್ದ ಜಾಗತೀಕರಣದ ಏರು ದಿನಗಳವು. ಅವರು ಸಮಾಜವಾದವನ್ನು ಹೊಸ ಹುಡುಗರಿಗೆ ಯಾವ ಪರಿಭಾಷೆಯಲ್ಲಿ ಹೇಳುವುದು, ತಮ್ಮ ಭಾಷೆಯಲ್ಲಿ ಹೇಳಿದರೆ ಅದು ಇನ್ನಷ್ಟು ಹಾಸ್ಯಾಸ್ಪದವಾಗುವುದೋ ಹೇಗೆ ಎಂಬ ಸಂದಿಗ್ಧದಲ್ಲಿದ್ದಂತಿತ್ತು. ತಮ್ಮ ಭಾಷಣದ ನಂತರ ಅವರು ನನ್ನೊಂದಿಗೆ ವೈಯುಕ್ತಿಕವಾಗಿ ಮಾತನಾಡುತ್ತಾ, ನನ್ನ ಪ್ರಯತ್ನವನ್ನು ಮೆಚ್ಚಿದರಾದರೂ, ಆ ಶಿಬಿರವನ್ನು ಉದ್ಘಾಟಿಸಿದ್ದ ದೇವ ನೂರ ಮಹಾದೇವ ಹೇಳಿದ್ದ ಮಾತುಗಳನ್ನೇ ಅವರೂ ಹೇಳಿದಾಗ ನನಗೆ ಆಶ್ಚರ್ಯವಾಯಿತು. ಏಕೆಂದರೆ ಶಿಬಿರದ ಉದ್ಘಾಟನೆಯ ದಿನ ಅವರು ಇರಲಿಲ್ಲ. ಅವರು ಮಹಾದೇವ ಅವರು ಆಡಿದ್ದ ಮಾತುಗಳನ್ನೇ ಸರಿ ಸುಮಾರಾಗಿ ಪುನರುಚ್ಛರಿಸಿದ್ದು ಹೀಗೆ: 'ಈ ದಿನಗಳಲ್ಲಿ ಸಮಾಜವಾದಿಗಳನ್ನು ಒಂದುಗೂಡಿಸುವುದು ಕಷ್ಟ. ಅಂದ ಮಾತ್ರಕ್ಕೆ ಈ ಒಂದುಗೂಡಿಸುವ ಕೆಲಸವನ್ನು ಮಾಡಬಾರದೆಂದೇನಲ್ಲ. ನಾಗಭೂಷಣ ಕರೆದಿದ್ದಾರೆಂದು ಬಂದಿದ್ದೇನಷ್ಟೆ' ನನ್ನ ಕಣ್ಣಲ್ಲಿ ನೀರಾಡಿತು. ಅವರ ಕಣ್ಣುಗಳಲ್ಲೂ...

ಅಂದಿನ ಆ ಸಂದರ್ಭದ ನನ್ನ ಒಂದೇ ವಿಷಾದವೆಂದರೆ ಈ ಇಬ್ಬರೂ– ಅಬ್ಬಿಗೇರಿ ಮತ್ತು ಮಹಾದೇವ–ಕೊನೆಯ ದಿನ ಕಿಷನ್ ಪಟ್ನಾಯಕರ ಮಾತುಗಳನ್ನು ಕೇಳಲು ಇರಲಿಲ್ಲವಲ್ಲ ಎಂಬುದು. ಕಿಷನ್ ಅಂದು ನಾನು ಗೋಷ್ಠಿಯ ಪೀಠಿಕೆಯಾಗಿ ಬೇಕೆಂದೇ–ವಿಚಾರ ಪ್ರಚೋದನೆಗೆಂದೇ–ಆಡಿದ 'ಸಮಾಜವಾದ ಎಂದೂ ಆಚರಣೆಗೆ ಸಾಧ್ಯವಾಗದ ಒಂದು ರೊಮ್ಯಾಂಟಿಕ್ ಕಲ್ಪನೆ ಮಾತ್ರವೇನೋ!' ಎಂಬ ಮಾತನ್ನೇ ನೆಪವಾಗಿರಿಸಿಕೊಂಡು ನಾನು ಅವರಿಂದ ಆವರೆಗೆ ಕೇಳಿರದಂತಹ ಅದ್ಭುತ ಭಾಷಣ ಮಾಡಿದರು. ಅಂದು ನನ್ನ ಕಣ್ಣಿಗೆ ಅವರು ಬುದ್ಧ ಮಹಾಗುರುವಿನಂತೆ ಕಂಗೊಳಿಸುತ್ತಾ ಆಡಿದ್ದು ಈ ಮಾತುಗಳನ್ನು: 'ರೊಮ್ಯಾಂಟಿಕ್ ಕಲ್ಪನೆಗಳೇ ಪ್ರಪಂಚದ ಇತಿಹಾಸವನ್ನು ನಿರ್ಮಿಸಿರುವುದು ಮತ್ತು ಮನುಷ್ಯರ ಬದುಕನ್ನು ಬದಲಿಸಿರುವುದು. ಆಧುನಿಕ ಕಾಲದ ಮಹಾ ರೊಮ್ಯಾಂಟಿಕ್ ಕಲ್ಪನೆಯಾದ ಸಮಾಜವಾದದ ಕಾಲ ಈಗ  ಬಹಳ ಜನ ಹೇಳುತ್ತಿರುವಂತೆ ಮತ್ತು ಬಹಳ ಜನ ನಂಬುತ್ತಿರುವಂತೆ ನಿಜವಾಗಿ ಮುಗಿದಿಲ್ಲ; ಅದು ಅರ್ಧ ದಾರಿ ಮಾತ್ರ ಕ್ರಮಿಸಿ ವಿಶ್ರಮಿಸುತ್ತಿದೆ;ಇದು ಅದಕ್ಕೆ ಧ್ಯಾನದ, ಆತ್ಮಾವಲೋಕನದ ಕಾಲ;ತನ್ನ ಅಧ್ಯಾತ್ಮಿಕತೆಯನ್ನು ಪುನರ್ ಆವಿಷ್ಕರಿಸಿಕೊಳ್ಳುವ ಕಾಲ; ತನ್ನ ಆಧುನಿಕ ಬೌದ್ಧಿಕ ಪರಿಕರಗಳ ಈವರೆಗಿನ ಕಾರ್ಯಸಾಧ್ಯತೆ–ಸಾಮರ್ಥ್ಯಗಳನ್ನು ಪುನರ್ಪರಿಶೀಲಿಸಿಕೊಳ್ಳುವ ಕಾಲ. ಬುದ್ಧ, ಪರಮಹಂಸ, ಮದರ್ ಥೆರೇಸಾರಿಂದ ಪಾಠ ಕಲಿಯುವ ಕಾಲ; ತನ್ನ ಸೈದ್ಧಾಂತಿಕ ಒಡಲೊಳಕ್ಕೆ ಬುದ್ಧ ಹೇಳಿದ 'ಕರುಣಾ'ವನ್ನು ಒಂದು ಕಾರ್ಯ ಕ್ರಮವಾಗಿ ಅಳವಡಿಸಿಕೊಳ್ಳಬೇಕಾದ ಕಾಲ...' ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಈಚಿನ ವರ್ಷಗಳಲ್ಲಿ ತನ್ನ ಗದ್ದಲಕೋರತನದಿಂದಾಗಿ ಹಿನ್ನೆಲೆಗೆ ಸರಿಸಿಕೊಂಡಿದ್ದು ಬಿಟ್ಟಿದ್ದ ಆಯಾಮವೊಂದನ್ನು ಕಿಷನ್ ಅಂದು ಮುನ್ನೆಲೆಗೆ ತಂದಿದ್ದರು...

ಅಬ್ಬಿಗೇರಿಯವರು ಈ ಭಾಷಣ ಕೇಳಲಿಲ್ಲ. ಕೇಳಬೇಕಿತ್ತು. ಅವರ ಆಳದ ಬೇಸರ ಸ್ವಲ್ಪವಾದರೂ ನೀಗುತ್ತಿತ್ತು;ಅವರ ಬದುಕಿನಲ್ಲಿ ಸಮಾಜವಾದ ಹೊಸ ರೂಪ ತಾಳಿ, ಜನರ ಮಧ್ಯೆ ಅವರಿಂದ ಇನ್ನಷ್ಟು ಮೌಲಿಕ ಕೆಲಸ ಮಾಡಿಸುತ್ತಿತ್ತು; ಇರುವಷ್ಟು ದಿನ ಅವರ ಬದುಕನ್ನು ಇನ್ನಷ್ಟು ಸಹ್ಯ ಮಾಡುತ್ತಿತ್ತು ಎಂದು ಈಗ ನನಗನ್ನಿಸುತ್ತಿದೆ... ಅದೇನೇ ಇರಲಿ, ಬಂದ ಆ ದಿನದ ಸಂಜೆಯೇ ಅವರು ಏನೋ ಅವಸರದಲ್ಲಿದ್ದಂತೆ ಹೊರಟು ನಿಂತರು.  ಅವರಿಗೆ ಪ್ರಯಾಣ ಭತ್ಯೆ ಮತ್ತು ಗೌರವ ಧನಗಳನ್ನು ಕೊಡಿಸಿ, ಯಾರದೋ ವಾಹನ ವ್ಯವಸ್ಥೆ ಮಾಡಿಸಿ ಬಸ್ ನಿಲ್ದಾಣಕ್ಕೆ ಕಳಿಸಿಕೊಟ್ಟೆ.

ಅವರನ್ನು ಮತ್ತೆ ನೋಡಲಿಲ್ಲ. ಅವರಂತಹವರನ್ನೂ...

*

# ಮಹಿಕೋ/ಮಾನ್ಸೆಂಟೋ ಕಂಪನಿಗಳಿಂದ ತಳಿ ಕಳ್ಳತನ!

ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಮಹಿಕೋ/ಮಾನ್ಸೆಂಟೋ ಕಂಪನಿಗಳು ಮತ್ತು ಅವುಗಳ ಸಹಯೋಗಿ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಂದಾಗಿದೆ ಎಂದು ESG (Environmental Support Group) ಎಂಬ ಪರಿಸರ ಸಂಸ್ಥೆ ತನ್ನ ಇತ್ತೀಚಿನ ಪ್ರಕಟಣೆಯೊಂದರಲ್ಲಿ ತಿಳಿಸಿದೆ. ಈ ಬಹುರಾಷ್ಟ್ರೀಯ ಕಂಪನಿಗಳು ಧಾರವಾಡ ಮತ್ತು ಕೊಯಮತ್ತೂರಿನ ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಇತರ ಕೆಲವು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗಳ ಜೊತೆಗೂಡಿ ಸ್ಥಳೀಯ ಬದನೆ ತಳಿಗಳನ್ನು ಸಂಬಂಧಪಟ್ಟ ರಾಷ್ಟ್ರೀಯ, ಪ್ರಾಂತೀಯ ಮತ್ತು ಸ್ಥಳೀಯ ಸಂಸ್ಥೆಗಳ ಪೂರ್ವಾನುಮತಿಯಿಲ್ಲದೆ ಪಡೆದುಕೊಂಡು ತನ್ನ ಬಿಟಿ ಬದನೆ ಮಿಶ್ರ ತಳಿಯನ್ನು ಅಭಿವೃದ್ಧಿಪಡಿಸಿರುವ ಮೂಲಕ ಈ ದೇಶದ ಜೀವ ವೈವಿಧ್ಯ ಸಂರಕ್ಷಣಾ ಕಾನೂನುಗಳನ್ನು ಉಲ್ಲಂಘಿಸಿರುವ ಕಾರಣಕ್ಕಾಗಿ ಈ ಕಾನೂನಿನ ಕ್ರಮ ಅಗತ್ಯವಾಗಿದೆ ಎಂದು ಅದು ತಿಳಿಸಿದೆ.

ಈ ಮೊದಲು ಈ ಹಿಂದಿನ ಪರಿಸರ ಸಚಿವ ಜೈರಾಂ ರಮೇಶ್ ಅವರು ಜನ ಸಭೆಗಳ ಅಭಿಪ್ರಾಯಗಳನ್ನು ಸಂಘಟಿಸುವ ಮೂಲಕ ಮಧ್ಯೆ ಪ್ರವೇಶಿಸಿ ಬಿಟಿ ಬದನೆ ಮಾರುಕಟ್ಟೆ ಪ್ರವೇಶಿಸದಂತೆ ನಿಷೇಧ ಹೇರಿದ್ದರಾದರೂ, ಅವರು ಈ ಬಹುರಾಷ್ಟ್ರೀಯ ಕಂಪನಿಗಳು ದೇಶದ ಕಾನೂನುಗಳನ್ನು ಉಲ್ಲಂಘಿಸಿ ಈ ತಳಿಯನ್ನು ಅಭಿವೃದ್ಧಿಪಡಿಸಿವೆ ಎಂಬ ಪರಿಸರ ಸಂಸ್ಥೆಗಳ ಆರೋಪಗಳ ಕಡೆ ಹೆಚ್ಚು ಗಮನ ಹರಿಸಿರಲಿಲ್ಲ. ಆದರೆ ESG ನೀಡಿದ ವಿವರವಾದ ದೂರಿನ ಮೇಲೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ತನಿಖೆ ನಡೆಸಿ ಈ ಶಿಫಾರ್ಸು ಮಾಡಿದೆ ಎಂದು ಹೇಳಲಾಗಿದೆ.

**(ಸುದ್ದಿ ಮೂಲ: ESG ಪ್ರಕಟಣೆ)**

ಗೆಳೆಯರ ಗುಂಪಿನ ದೃಶ್ಯದ ಇಂತಹ ಸಚಿತ್ರ ವಿವರಗಳನ್ನೊಳಗೊಂಡ ವರ್ಣನೆಯೊಂದಿಗೆ ಆರಂಭವಾಗುವ ಈ ಲೇಖನದ ಮುಂದಿನ ವಿವರಗಳ ಪ್ರಕಾರ ಲೋಹಿಯಾ, ಅಬ್ಬಿಗೇರಿಯವರನ್ನು ಅವರ ಮುಖದ ಮೇಲಿನ ಕಾತರವನ್ನು ಓದಿಕೊಂಡವರೆಂಬಂತೆ ತಾವೇ ಮಾತನಾಡಿಸಿ, ಅವರ ಮನೆಗೆ ಹೋಗಿ ಸ್ವಲ್ಪ ಕಾಲ ತಂಗುತ್ತಾರೆ. ಆಗ ಈ ಸಮಾಜವಾದಿ ಕಾರ್ಯಕರ್ತನ ಮನೆಯ ಗೋಡೆಯ ಮೇಲೆ ನಗುತ್ತಿರುವ ತಮ್ಮ ರಾಜಕೀಯ ವಿರೋಧಿ ನೆಹರೂ ಚಿತ್ರ ನೋಡಿ ದಂಗಾಗುತ್ತಾರೆ! ಆದರೆ ಇದೆಲ್ಲ ಸಹಜವೆಂಬಂತೆ, ವಿಚಲಿತರಾಗದೆ; ಅವರ ಮನೆಯಲ್ಲೇ ಎರಡು ಚಪಾತಿ ತಿಂದು ಒಂದು ಬಟ್ಟಲು ಮಜ್ಜಿಗೆ ಕುಡಿದು ನೆಹರೂ ನೇತೃತ್ವದ ಸರ್ಕಾರದ ವಿರುದ್ಧ ದಾಳಿ ಮಾಡಲು ಸಾರ್ವಜನಿಕ ಸಭೆಗೆ ತೆರಳುತ್ತಾರೆ. ದಾರಿಯಲ್ಲಿ ಆ ಹಳ್ಳಿಯ ದೇಗುಲವೊಂದರ ಸೌಂದರ್ಯಕ್ಕೆ ಮನಸೋತು ಅದನ್ನು ಸವಿಯುತ್ತಾ, ಮೆಚ್ಚುತ್ತಾ ನಿಲ್ಲುತ್ತಾರೆ. ಇಲ್ಲಿ ಅವರ ವ್ಯಕ್ತಿತ್ವದ ಇನ್ನೊಂದು ಆಯಾಮದ ಪರಿಚಯವಾಗುತ್ತದೆ. ನಂತರ ಲೋಹಿಯಾ ರೋಣದ ವೀರಭದ್ರಗುಡಿಯ ಹಜಾರದಲ್ಲಿ ನಿಂತು ಅಬ್ಬಿಗೇರಿಯವರ ಶಬ್ದವನ್ನೇ ಬಳಸಿ ಹೇಳುವುದಾರೆ, ರೈತ 'ಜನಸಮ್ಮರ್ದ'ವನ್ನುದ್ದೇಶಿಸಿ ಸುತ್ತಮುತ್ತಲ ಜನ ಆವರೆಗೆ ಕಂಡು ಕೇಳರಿಯದಂತಹ ವಿಚಾರಗಳ ಪ್ರಚಂಡ ಭಾಷಣ ಮಾಡುತ್ತಾರೆ.

ಭಾಷಣ ಮುಗಿಸಿ ಹೊರಡುವ ಮುನ್ನ ಲೋಹಿಯಾ ಅಬ್ಬಿಗೇರಿಯವರ ಭುಜದ ಮೇಲೆ ಕೈಯಿಟ್ಟು, 'ವಿರೂಪಾಕ್ಷಪ್ಪ ತುಂ ಧೀರ್ ಹೋ, ತೇಜಸ್ವಿ ಹೋ! ಅಪನಿ ಮಂಜಿಲ್ ಕೆ ಓರ್ ಬಢತೆ ರಹೋ!' ಎಂದು ಆಶೀರ್ವದಿಸುತ್ತಾರೆ. ಅಬ್ಬಿಗೇರಿಯವರು ಸಹಜವಾಗಿಯೇ ರೋಮಾಂಚನಗೊಳ್ಳುತ್ತಾರೆ. ಆದರೆ ಆ ರೋಮಾಂಚನವನ್ನು ಅಬ್ಬಿಗೇರಿಯವರು ಸಮಾಜವಾದಿಯಾಗಿ ತಮಗಷ್ಟೇ ಇರಿಸಿಕೊಳ್ಳದೆ, ತಮ್ಮ ಆಗಿನ ಗೆಳೆಯರಿಗಷ್ಟೇ ಅಲ್ಲ, ನಮ್ಮಂತಹ ಮುಂದಿನ ತಲೆಮಾರಿನವರಿಗೂ ಹಂಚಲೋ ಎಂಬಂತೆ, ತಮ್ಮ ಲೇಖನವನ್ನು ಮುಗಿಸುವುದು ಇಡೀ ಸಮಾಜವಾದಿ ಚಳುವಳಿ ಬಗ್ಗೆ ಇಂದಿಗೂ ಅರ್ಥಪೂರ್ಣವೆನಿಸುವ ಒಂದು ಹಿನ್ನೋಟ ಒದಗಿಸಬಲ್ಲ ಮತ್ತು ಈಗಲೂ ನಮ್ಮನ್ನು ಆಳವಾಗಿ ಕಲಕಬಲ್ಲ ಈ ಭಾವಪೂರ್ಣ ವಿದಾಯದ ಸಾಲುಗಳೊಂದಿಗೆ:

**'ಆ ಚಿತ್ರ, ಆ ದೃಶ್ಯ, ಆ ವಾಣಿ, ಆ ರಸ ನಿಮಿಷಗಳು...**

**ವರುಷಗಳ ನಂತರ ನಾನೀಗ ಅದನ್ನೆಲ್ಲ ನೆನೆದುಕೊಳ್ಳುತ್ತಿದ್ದೇನೆ. ಮುಚ್ಚಂಜೆಯ ಮುಸುಕಿನಂತೆ ಒಂದು ಬಗೆಯ ಮಬ್ಬು ಮನಸ್ಸಿಗೆ ಕವಿದಂತಾಗಿ ನಾನು ಚಿತ್ರಸ್ಥನಾಗಿ ಕೂಡುತ್ತೇನೆ. ಲೋಹಿಯಾ ನೆನಪಿನ ಅಲೆಗಳು ಹೊನ್ನಿನ ಹುಳುಗಳಂತೆ ಮಿಂಚುತ್ತಾ ಚಿತ್ರದಲ್ಲಿ ತೂರಿಕೊಂಡು ಬರುತ್ತಿವೆ. ಆ ವಾಣಿ ಈಗಲೂ ಅಂತರಂಗದಲ್ಲಿ ಅರುಣಿತವಾಗುತ್ತಿದೆ ಮತ್ತು ಒಡಲೊಳಗಿಂದ ಯಾರೋ ಒಡನುಡಿದಂತಾಗುತ್ತದೆ.. ಪಥಿಕನಿನ್ನೂ ದಣಿದಿಲ್ಲ. ದಾರಿಯಲ್ಲಿ ನಿಂತೂ ಇಲ್ಲ. ಅವನು ಎಚ್ಚರದಿಂದ ಮುನ್ನಡೆಯುತ್ತಲೇ ಇದ್ದಾನೆ. ಆದರೆ ದಾರಿ ತೋರಿ ಸುವವನೇ ದೂರವಾದ, ಗಂತವ್ಯವೂ ದೂರ, ದೂರ, ದೂರ, ಬಲು ದೂರ...'**

ಸಮಾಜವಾದಿ ಚರಿತ್ರೆಯ ಹಿನ್ನೋಟವೆಂದರೆ ಇಂತಹ ಹಲವಾರು ಆರ್ದ್ರ ಚಿತ್ರಗಳು ಒದಗಿಸುವ ಹಿನ್ನೋಟಗಳ ಸರಮಾಲೆಯೇ ಆಗಿದೆ. ಆದರೆ ಅವೆಲ್ಲ, ಲೋಹಿಯಾರ ವ್ಯಕ್ತಿತ್ವದ ಒಂದು ಪಾರ್ಶ್ವ ಅಥವಾ ಹೊರ ಕವಚ ಮಾತ್ರವಾಗಿದ್ದ ಗದ್ದಲಕೋರತನದ ಪ್ರತಿಬಿಂಬ ಮಾತ್ರಗಳಂತಿರುವ ನಮ್ಮ ಕಾಲದ ಹಲವು ಗಲಭೆಕೋರ ಸಮಾಜವಾದಿಗಳ ರೋಚಕ ಚಿತ್ರಗಳ ಮಧ್ಯೆ ಹಿನ್ನೆಲೆಗೆ ಸರಿದು ಹೋಗಿವೆ. ಸಮಾಜವಾದಿ ಆಂದೋಲನದ ದಟ್ಟ ಪ್ರಭಾವವಿದ್ದ ಗಂಗಾ ಬಯಲಿನ ರಾಜ್ಯಗಳಲ್ಲಿ ನಾನು ಇಂತಹ ಎರಡೂ ಬದಿಯ–ಆರ್ದ್ರ ಮತ್ತು ಗಲಭೆಕೋರತನದ–ಚಿತ್ರಗಳನ್ನು ನೋಡಿದ್ದೇನೆ. ಆದರೆ ಕರ್ನಾ ಟಕದಲ್ಲಿ ನಾನು ಕಂಡದ್ದು ಬಹುಪಾಲು ಒಂದೇ ರೀತಿಯ–ಗಲಭೆಕೋರತನದ–ಚಿತ್ರಗಳನ್ನಷ್ಟೇ. ಅಥವಾ ನಾನು ಕರ್ನಾಟಕದಲ್ಲಿನ ಸಮಾ ಜವಾದಿ ಚಳುವಳಿಯನ್ನು ಕಂಡ ಘಟ್ಟವೇ ಅಥವಾ ನನ್ನ ಸಹವಾಸವೇ ಹಾಗೇ ಇತ್ತೋ ಏನೋ ತಿಳಿಯದು! ಇದರ ಮಧ್ಯೆಯೇ ಆಗಾಗ್ಗೆ ಆಶ್ಚರ್ಯ ವೆಂಬಂತೆ ಎಸ್, ವೆಂಟರಾಂ, ಈಶ್ವರ್, ರಾಚಪ್ಪ ಬೆಟ್ಸೂರು, ವೀರಣ್ಣ ತಿಮ್ಮಾಜಿ ಯಂತಹವರನ್ನೂ ಕಂಡಿದ್ದೂ ನಿಜ. ಆದರೆ ಏಕೋ ಏನೋ ಈ ಗುಂಪಿನ ಮಧ್ಯೆ ಕೊರಳೆತ್ತಿ ನೋಡಿದರೂ ಅಬ್ಬಿಗೇರಿ ವಿರೂಪಾಕ್ಷಪ್ಪನವರು ಕಾಣಿಸಿಯೇ ಇರಲಿಲ್ಲ...

ಎಪ್ಪತ್ತರ ದಶಕದ ಅಂತ್ಯದ ಹೊತ್ತಿಗೆ ಸಮಾಜವಾದಿ ಚಳುವಳಿ ಜನತಾ ಪಕ್ಷದಲ್ಲಿ ಲೀನವಾಗಿ ಆನಂತರ ಜನತಾ ಪಕ್ಷದೊಂದಿಗೇ ಕಾಣೆಯಾದ ಬಳಿಕ ನಾವು ಕೆಲವರು ಸಮಾಜವಾದಿ ಯುವಜನ ಸಭಾದ ಪುನರುಜ್ಜೀವನ, ಲೋಹಿಯಾ ವಿಚಾರ ಮಂಚ, ಸಮತಾ ಸಮ್ಮೇಳನ–ಸಂಘಟನೆ, 'ಲಂಕೇಶ್ ಪತ್ರಿಕೆ', ದಲಿತ ಚಳುವಳಿ, ರೈತ ಚಳುವಳಿ, 'ಮಾನವ', 'ಪಂಚಮ', ಗೋಕಾಕ್ ಚಳುವಳಿ ಎಂದೆಲ್ಲ ಆಸೆಗಣ್ಣುಗಳಿಂದ ನಮ್ಮ ನಮ್ಮ ಮಿತಿಗಳಲ್ಲೇ ಭಾಗವಹಿಸುತ್ತಿದ್ದ ಆಂದೋಲನಗಳು ಒಂದಾದ ಮೇಲೊಂದರಂತೆ ತಮ್ಮದೇ ಆಂತರಿಕ ವಿರೋಧಾಸ ಗಳಿಂದ ತಮ್ಮ ಮೂಲ ಉದ್ದೇಶಗಳನ್ನೇ ಕಳೆದುಕೊಂಡು ದಿಕ್ಕಾಪಾಲಾಗ ತೊಡಗಿದಾಗ, ಇದ್ದಕ್ಕಿದ್ದಂತೆ ನನ್ನ ಬದುಕಿನ ಲಂಗರುಗಳೇ ಕಳಚಿ ಹೋದ ಅನುಭವವಾಯಿತು. ಆಗ ನಾನು ನನ್ನ ಬದುಕಿನ ತಾತ್ವಿಕ ಮತ್ತು ತಾರ್ಕಿಕ ಅಂತ್ಯಕ್ಕೆ ಬಂದ ಗಾಬರಿಗೆ ಸಿಕ್ಕಿ(ಆ ಹೊತ್ತಿಗೆ ನಾನು ಒಂದು ಪ್ರಾಣಾಂತಿಕ ದೈಹಿಕ ಅಸ್ವಸ್ಥತೆಗೂ ಈಡಾಗಿದ್ದೆ) ತತ್ತರಿಸಿದೆ. ಅದರಿಂದ ಪಾರಾಗಲೋ ಎಂಬಂತೆ (ಈಗ ಹಿಂದಿರುಗಿ ನೋಡಿದಾಗ ಹೀಗನ್ನಿಸುತ್ತಿದೆಯೋ ಏನೋ ತಿಳಿಯದು!) ೨೦೦೨ರಲ್ಲಿ ಶಿವಮೊಗ್ಗದಲ್ಲಿ ರಾಜ್ಯ ಮಟ್ಟದ ಮೂರು ದಿನಗಳ ಸಮಾಜವಾದಿ ಶಿಬಿರವೊಂದನ್ನು ಸಂಘಟಿಸುವ ಪ್ರಯತ್ನ ಮಾಡಿದೆ.

ಇದಕ್ಕೆ ಮೈಸೂರಿನಲ್ಲಿ ಆರಂಭವಾಗಿದ್ದ ಲೋಹಿಯಾ ಟ್ರಸ್ಟಿನ ಮತ್ತು ಕುವೆಂಪು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಆರ್ಥಿಕ ನೆರವೂ ಸಿಕ್ಕಿದುದರಿಂದ ಪಕ್ಷಾತೀತರೂ ಮತ್ತು ಅಧಿಕಾರೇತರರೂ ಆದ ಎಲ್ಲ ಸಮಾಜವಾದಿಗಳನ್ನೂ ಒಂದೆಡೆ ಸೇರಿಸುವ ಸಾಹಸ ಕೈಗೊಂಡೆ. ಆ ಹೊತ್ತಿಗೆ ಅಕಸ್ಮಾತ್ ಒಂದು ಜಿದ್ದಿಗೆ ಬಿದ್ದು, ಕರ್ನಾಟಕದ ಇಂತಹ ಎಲ್ಲ ಸಮಾಜ ವಾದಿಗಳ ಗುರುಗಳಾಗಿದ್ದ ಕಿಷನ್ ಪಟ್ನಾಯಕ್ ಅವರಿಗೆ ಒಂದು ಲಕ್ಷ ರೂಪಾಯಿಗಳ ನಿಧಿ ಅರ್ಪಿಸುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದ್ದೆ. ಆ ವೇಳೆಗೆ ರಾಚಪ್ಪ ಬೆಟ್ಸೂರ್ ಮತ್ತು ವೀರಣ್ಣ ತಿಮ್ಮಾಜಿ ಅಸು ನೀಗಿದ್ದರು. ಹಿರಿಯರಾಗಿ, ಅವರ ಸರೀಕರಾದ ಧಾರವಾಡದ ನೀಲಗಂಗಯ್ಯ ಪೂಜಾರ ಮತ್ತು ಅಬ್ಬಿಗೇರಿ ವಿರೂಪಾಕ್ಷಪ್ಪ ಅವರನ್ನು ಈ ಶಿಬಿರಕ್ಕೆ ಆಹ್ವಾನಿಸಿದೆ. ಅಬ್ಬಿಗೇರಿಯವರು ದೂರದ ಪ್ರಯಾಣ ಕಷ್ಟವೆಂದು ಹಿಂಜರಿದರಾದರೂ, ಶಿಬಿರದ ಎರಡನೇ ದಿನದ ಮಧ್ಯಾಹ್ನ ಬಂದೇ ಬಂದರು.

ಅವರು ದೂರದ ರೋಣದಿಂದ ಬಸ್ ಹತ್ತಿ ಇಳಿದು ಶಿವಮೊಗ್ಗದ ಬಸ್ ನಿಲ್ದಾಣದಿಂದ ಯಾರನ್ನೋ ಕೇಳಿಕೊಂಡು ಶಿಬಿರ ನಡೆಯುತ್ತಿದ್ದ ಊರಾಚೆಯ ಸಹ್ಯಾದ್ರಿ ಕಾಲೇಜಿನ ಆವರಣಕ್ಕೆ ನಡೆದೇ ಬಂದಿದ್ದರು. ಅವರ ದೇಹದಿಂದ ಬೆವರು ಬಸಿಯುತ್ತಿತ್ತು. ಮುಖ ದಣಿವಿಂದ ಸೋತಂತಿತ್ತು. 'ನೀವೇಕೆ ಆಟೋದಲ್ಲಿ ಬರಲಿಲ್ಲ?' ಎಂದು ಕೇಳಿದರೆ (ಅವರಿಗೆ ಹೋಗಿ ಬರುವ ಪೂರ್ಣ ಪ್ರಯಾಣದ ಖರ್ಚು ಮತ್ತು ಗೌರವ ಸಂಭಾವನೆ ಕೊಡುವುದಾಗಿ ಮೊದಲೇ ತಿಳಿಸಿದ್ದೆ) ಮುಗ್ಧ ಹಳ್ಳಿಗನಂತೆ, 'ಅದೆಲ್ಲ ರೂಢಿಯಿಲ್ರೀ... ಇಷ್ಟು ನಡೆಯೂದು ನಮಗೆ ಕಷ್ಟ ಅಲ್ರಿ...' ಎಂದು ಮುಖ ಕೈಕಾಲು ತೊಳೆದು, 'ನೀವು ಕೂರ್ರಿ.. ನಾವು ತಂದು ಕೊಡುವೆವು' ಎಂದು ಹೇಳಿದರೂ ಕೇಳದೆ ಸಂಘಟಕರು ಏರ್ಪಡಿಸಿದ್ದ ಸರಳ ಊಟಕ್ಕೆ ಸರತಿ ಸಾಲಿನಲ್ಲಿ ನಿಂತು ಬಿಟ್ಟರು. (ಆ ಹೊತ್ತಿಗಾಗಲೇ ನಮ್ಮ ಗಲಭೆಕೋರ ಸಮಾಜವಾದಿ ಮಿತ್ರರನೇಕರು ಚರ್ಚೆಯಲ್ಲಿ ಭಾಗವಹಿಸಿದ್ದರಿಂದಾಗಿ ಆಯಾಸಗೊಂಡು, ಪುಷ್ಕಳ ಊಟ ಹುಡುಕಿಕೊಂಡು ತಮ್ಮ ಸ್ಥಳೀಯ ಗೆಳೆಯರ ಮನೆಗಳೆಡೆಗೆ ಧಾವಿಸಿದ್ದರು.) ನನಗೆ ತಕ್ಷಣ ಅಬ್ಬಿಗೇರಿ ಅವರ ಆ ಲೇಖನ ನೆನಪಿಗೆ ಬಂತು.

ಇಪ್ಪತ್ತು ವರ್ಷಗಳ ಹಿಂದೆ ಅವರ ಲೇಖನವನ್ನೋದಿ ವಿರೂಪಾಕ್ಷಪ್ಪನವರು ಹೇಗಿರುವರೆಂದು ನಾನು ಭಾವಿಸಿದ್ದೆನೋ ಹಾಗೇ ಇದ್ದರು ಅವರು. ಸ್ವಲ್ಪ ಎತ್ತರವೆನ್ನಬಹುದಾದ ನಿಲುವು, ಕೋಲು ಮುಖ, ಎಣ್ಣೆಗೆಂಪು ಬಣ್ಣ, ಕರುಣಾಪೂರಿತವೆನ್ನಬಹುದಾದ ದೃಷ್ಟಿಯುಳ್ಳ ಕಣ್ಣುಗಳು, ಉತ್ತರ ಕರ್ನಾಟಕದ ರೈತಾಪಿ

ನಮ್ಮ ಸಮಾಜವಾದಿಗಳು

# ಅಬ್ಬಿಗೇರಿ ವಿರೂಪಾಕ್ಷಪ್ಪ: ಒಂದು ನೆನಪಿನ ಚಿತ್ರ

**ಡಿ.ಎಸ್.ನಾಗಭೂಷಣ**

ಅಬ್ಬಿಗೇರಿ ವಿರೂಪಾಕ್ಷಪ್ಪ ಅವರ ಹೆಸರನ್ನು ನಾನು ಮೊದಲು ಕೇಳಿದ್ದು, ೧೯೮೦ರಲ್ಲಿ. 'ಸಂಕ್ರಮಣ' ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ ಪಾಟೀಲರು ಆ ವರ್ಷ 'ಸಂಕ್ರಮಣ'ದ ಲೋಹಿಯಾ ವಿಶೇಷ ಸಂಚಿಕೆಯನ್ನು ಸಂಪಾದಿಸಿ ಕೊಡಲು ದೆಹಲಿಯಲ್ಲಿದ್ದ ನನ್ನನ್ನು ಕೇಳಿದ್ದರು. ಈ ಸಂಬಂಧ ನಾನು ಕರ್ನಾಟಕದ ಹಲವಾರು ಸಮಾಜವಾದಿ ಗೆಳೆಯರಿಗೆ ಮತ್ತು ಸಮಾಜವಾದಿ ಹಿನ್ನೆಲೆಯ ಲೇಖಕರಿಗೆ ಪತ್ರ ಬರೆದು ಲೋಹಿಯಾ ಕುರಿತಂತೆ ಲೇಖನಗಳನ್ನು ಆಹ್ವಾನಿಸಿದ್ದೆ. ಆಗ ಗೆಳೆಯ ಕಾಳೇಗೌಡ ನಾಗವಾರ ಅವರು ಉತ್ತರ ಕರ್ನಾಟಕದ ಸ್ಥಳೀಯ ಪತ್ರಿಕೆಯೊಂದರಲ್ಲಿ ಲೋಹಿಯಾ ಬಗ್ಗೆ ಪ್ರಕಟವಾಗಿದ್ದ ಲೇಖನವೊಂದನ್ನು ಕಳಿಸಿ ಅದನ್ನು ಸಂಚಿಕೆಗಾಗಿ ಬಳಸಿ ಕೊಳ್ಳಲು ಸಾಧ್ಯವೇ ನೋಡಿ ಎಂದಿದ್ದರು. ಆ ಲೇಖನ ಓದಿ ನಾನು ದಂಗಾದೆ. ಅದೊಂದು, ಆಳದಲ್ಲಿ ನಿಜವಾದ ಸಮಾಜವಾದಿಯಾಗಿದ್ದವನೊಬ್ಬ ಮಾತ್ರ ಬರೆಯಬಲ್ಲ ಲೇಖನವಾಗಿತ್ತು. ಭಾಷೆ, ಶೈಲಿ ಮತ್ತು ವಿವರಗಳಲ್ಲಿ ಸರಳತೆಯನ್ನೇ ಸೌಂದರ್ಯವನ್ನಾಗಿ ಒಡಮೂಡಿಸಿದ್ದ ಸಂವೇದನಾಶೀಲ ಕುಶಲ ಲೇಖನವಾಗಿತ್ತದು. ಅದನ್ನು ಬರೆದಿದ್ದವರು ಅಬ್ಬಿಗೇರಿ ವಿರೂಪಾಕ್ಷಪ್ಪ. (ಈ ಲೇಖನ ಈಗ ಪರಿಷ್ಕೃತ ಆವೃತ್ತಿಯಾಗಿ ಬಳ್ಳಾರಿಯ ಲೋಹಿಯಾ ಪ್ರಕಾಶನದಿಂದ ಹೊರ ಬಂದಿರುವ 'ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ' ಪುಸ್ತಕದಲ್ಲಿ 'ಲೋಹಿಯಾ: ಒಂದು ನೆನಪು' ಎಂಬ ಶೀರ್ಷಿಕೆಯಡಿ ಮೊದಲ ಲೇಖನವಾಗಿ ಪ್ರಕಟವಾಗಿದೆ.)



ಲೋಹಿಯಾ ಮತ್ತು ಅವರ ಸಮಾಜವಾದ ಕುರಿತು ಅಪಾರ ಅಭಿಮಾನದಿಂದಲೂ ಮತ್ತು ಆಳವಾದ ವಿದ್ವತ್ತಿನಿಂದಲೂ ಬರೆದ ಹಲವು ಲೇಖನಗಳನ್ನು ನಾನು ಓದಿದ್ದೆ, ಮೆಚ್ಚಿದ್ದೆ. ಆ ಮೂಲಕ ಲೋಹಿಯಾ ಬಗ್ಗೆ ಪ್ರೀತಿ–ಶ್ರದ್ಧೆಗಳನ್ನು ಬೆಳೆಸಿಕೊಂಡಿದ್ದೆ. ಆ ಪ್ರೀತಿ–ಶ್ರದ್ಧೆಗಳಲ್ಲಿ ಲೋಹಿಯಾ ಚಿತ್ರ, ನಾನು ಅವರನ್ನು ಕಣ್ಣಾರೆ ಕಾಣದಿದ್ದ, ಅವರೊಂದಿಗೆ ಒಡನಾಡದಿದ್ದ ವಿಷಾದದೊಂದಿಗೆ ಹಿನ್ನೆಲೆಯಲ್ಲಷ್ಟೇ ಇರುತ್ತಿತ್ತು. ಆದರೆ ಅಬ್ಬಿಗೇರಿಯವರ ಈ ಲೇಖನ ಲೋಹಿಯಾ ಅವರನ್ನು ನೇರ ನನ್ನ ಕಣ್ಮುಂದೆಯೇ ಜೀವಂತವಾಗಿ ತಂದು ನಿಲ್ಲಿಸಿತು. ನನ್ನ ಕಣ್ಣುಗಳನ್ನು ಒದ್ದೆಯಾಗಿಸಿತು.

ಈಗ ಗದಗ ಜಿಲ್ಲೆಗೆ ಸೇರಿರುವ ರೋಣ ತಾಲ್ಲೂಕಿನ ಸೂಡಿ ಗ್ರಾಮದ ರೈತರಾಗಿದ್ದ ಅಬ್ಬಿಗೇರಿಯವರು, ತಾವು ರೋಣ ತಾಲ್ಲೂಕಿನ ಸಮಾಜವಾದಿ ಪಕ್ಷದ (ಬಹುಶಃ ಅದರ ರೈತ ಶಾಖೆಯಾಗಿದ್ದ ಕಿಸಾನ್ ಸಭಾದ) ಕಾರ್ಯಕರ್ತರಾಗಿ, ಕಳೆದ ಶತಮಾನದ ಅರವತ್ತರ ದಶಕದಲ್ಲಿ ತಮ್ಮೂರಿಗೆ ಲೋಹಿಯಾ ಬಂದಾಗ ಅನುಭವಿಸಿದ ಸಂತೋಷ–ಸಂಭ್ರಮಗಳನ್ನು ಈ ಲೇಖನದಲ್ಲಿ ವರ್ಣಿಸಿದ್ದಾರೆ. ಹಾಗೇ, ಅದರ ಭಾಗವಾಗಿ ಲೋಹಿಯಾ ಅವರ ಸಂಕ್ಷಿಪ್ತ, ಆದರೆ ಜೀವಂತವಾದ ವ್ಯಕ್ತಿ ಚಿತ್ರವನ್ನು; ಆ ಭೇಟಿಯ ವಿವರಗಳನ್ನು ಸ್ಥಳೀಯ ಬಣ್ಣ–ಬೆಡಗುಗಳಿಂದೊಡಗೂಡಿದ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಆ ಮೂಲಕ ಸಮಾಜವಾದದ ನಿಜವಾದ ಸ್ಪರ್ಶ ಪಡೆದ ಅಭಿವ್ಯಕ್ತಿಯ ಕ್ರಮ ಹೇಗಿರುವುದೆಂಬುದನ್ನೂ ಪರಿಚಯಿಸಿದ್ದಾರೆ. ಆ ಲೇಖನ ದಲ್ಲಿ ತಾವು ಕಂಡ ಲೋಹಿಯಾ ವ್ಯಕ್ತಿ ಚಿತ್ರವನ್ನು ಅವರು ಬಿಡಿಸಿರುವುದು ಹೀಗೆ:

> **'ಹಾಳತ ಮೈಕಟ್ಟಿನ, ಕುಳ್ಳ ನಿಲುವಿನ, ಚುರುಕು ಸ್ವಭಾವದ ಆ ವ್ಯಕ್ತಿ, ಹಿತವಾದ ಕಪ್ಪು ಬಣ್ಣ, ಗುಂಡು ಮುಖ, ದೊಣ್ಣೆ ಮೂಗು, ದಪ್ಪನೆಯ ಕನ್ನಡಕ, ಅದರ ಹಿಂದೆ ಹೊಳೆಯುವ ಪಿಳಿ ಪಿಳಿ ಕಣ್ಣುಗಳು, ಮುಖದ ಮೇಲೆ ಒಮ್ಮೊಮ್ಮೆ ಅಶಾಂತ ಜೀವನ ವಿದ್ರೋಹದ ಭಾವ ಮುದ್ರೆ, ಒಮ್ಮೊಮ್ಮೆ ಹಸುಳೆಯಾಗಿ ಹೂನಗೆ, ಮತ್ತೊಮ್ಮೆ ಎಳೆ ಹುಡುಗನ ತುಂಟ ನಗೆ...'**

ತಾನು ಕೆಲ ನಿಮಿಷಗಳ ಕಾಲ ಮಾತ್ರ ಕಂಡ ವ್ಯಕ್ತಿಯೊಂದಿಗೆ ತಾದಾತ್ಮ್ಯ ಸಾಧಿಸಿಕೊಂಡ ಒಂದು ಸ್ಪಂದನಶೀಲ ಮನಸ್ಸು ಮಾತ್ರ ಇಂತಹ ಒಂದು ಶಬ್ದ ಚಿತ್ರವನ್ನು ಕಡೆಯಬಲ್ಲುದು. ಸಮಾಜವಾದ ಮಾತ್ರ ಅಷ್ಟೇನೂ ನುರಿತ ಬರಹಗಾರನಲ್ಲದ ಹಳ್ಳಿಯ ಸಾಮಾನ್ಯ ರೈತನೊಬ್ಬನಿಂದ ಇಂತಹ ಸಾಲುಗಳನ್ನು ಬರೆಸಬಲ್ಲುದೋ ಏನೋ! ಲೋಹಿಯಾರ ಈ ವ್ಯಕ್ತಿ ಚಿತ್ರವನ್ನು ಅದರೆಲ್ಲ ಚಲನಶೀಲತೆಯೊಂದಿಗೆ ಗ್ರಹಿಸಲು ನಮ್ಮನ್ನು ತಯಾರು ಮಾಡುವ ಆ ಲೇಖನದ ಈ ಕುತೂಹಲಕಾರಿ ಆರಂಭವನ್ನು ಗಮನಿಸಿ:

'ಸರಿಯಾಗಿ ಮುವ್ವತ್ತು ವರ್ಷಗಳ ಹಿಂದೆ. ಸೊಗಸಾದ ಮುಂಜಾವು. ಹನ್ನೊಂದು ಘಂಟೆ. ಸಮಾಜವಾದಿ ಸಾಥಿಯೊಬ್ಬನ ಪುಟ್ಟ ಮನೆ. ಅದರ ಪಕ್ಕದಲ್ಲೊಂದು ಹಜಾರ. ತೆಂಗಿನ ಗರಿಗಳನ್ನೋ, ತಾಳೇಗರಿಗಳನ್ನೋ ಹೊದಿಸಿದ ಚಪ್ಪರ. ಅದರ ಉದ್ದಕ್ಕೂ ಅಗಲಕ್ಕೆ ಸಮಾಂತರವಾಗಿ ಬಿಗಿದ ಬಿದಿರುಗಳು. ಅಲ್ಲಿಯ ಚೌಕುಚೌಕಾದ ಕಿಂಡಿಗಳಿಂದ ತಂತಾನೆ ರಚಿತವಾದ ಜಾಳಾಂಧ್ರಗಳು. ಅವುಗಳಿಂದ ಇಳಿದು ಬರುವ ನೆಳಲು ಬೆಳಕಿನ ಸುಸಿಲಾಟ. ಹಜಾರದ ನೆಲಕ್ಕೆ ನೇಸರಿನ ಕಿರಣಗಳು ನಕ್ಷೆ ಬರೆದು ಚುಂಬಿಸುತ್ತಿವೆ. ಇದೇ ಹಜಾರದ ಒಂದು ಕಡೆಗೆ ಹಲವರು ಕೂತುಕೊಂಡಿದ್ದಾರೆ. ಹೆಚ್ಚಿನ ಯಾವ ಠೀವಿಯೂ ಇಲ್ಲ. ಹತ್ತಾರು ಗೆಳೆಯರು ಬಳಗವಾಗಿ ಸೇರಿ ಆತ್ಮೀಯವಾಗಿ ಸರಸ–ಸಲ್ಲಾಪವಾಡುತ್ತಿರುವಂತೆ ತೋರುತ್ತಿದೆ ಆ ದೃಶ್ಯ...'

ತಮ್ಮ ಹಳ್ಳಿಗೆ ಲೋಹಿಯಾರ ಆಗಮನವನ್ನು ನಿರೀಕ್ಷಿಸುತ್ತಾ ಕೂತ

# ಅಂದ ಹಾಗೆ: ಕಿಡಿಗೇಡಿಯೊಬ್ಬನ ಕಾಲಹರಣದ ಟಿಪ್ಪಣಿಗಳು

## ಬಾಲು ಬಾಲ ರಾಷ್ಟ್ರೋತ್ಥಾನ ಬಳಗದಲ್ಲಿ...

ಬಾಲು ಎಂದೇ ತಮ್ಮ ಅಂತರ್ಜಾಲ ಅಭಿಮಾನಿಗಳ ಒಕ್ಕೂಟ ಮತ್ತು ಕುವೆಂಪು ವಿಶ್ವವಿದ್ಯಾಲಯದಲ್ಲಿನ ತಮ್ಮ ಮಠದ ಮರಿಗಳಿಂದ ಕರೆಯಲ್ಪಡುವ ಬೆಲ್ಜಿಯಂನ ಸಮಾಜಶಾಸ್ತ್ರ ವಿದ್ವಾಂಸ ಎಸ್. ಎನ್ ಬಾಲಗಂಗಾಧರ ರಾವ್, ಅವರ ನಿಜ ಮೂಲ ಸ್ಥಾನ ಯಾವುದೆಂದು ನಾವೆಲ್ಲ ಊಹಿಸಿದ್ದೆವೋ ಈಗ ಅಲ್ಲಿಗೇ ಹೋಗಿ ತಲುಪಿದ್ದಾರೆ. ಅಕ್ಷರ, ಅಭಿನವ, ರವಿ ಬೆಳಗೆರೆ, ವಿಶ್ವೇಶ್ವರ ಭಟ್ಟ ರನ್ನೆಲ್ಲ ಹಾದು ಬಂದಿರುವ ಅವರು ಮೊನ್ನೆ ಶಿವಮೊಗ್ಗದ 'ವಾಸವಿ ಭವನ'ದಲ್ಲಿ ರಾಷ್ಟ್ರೋತ್ಥಾನ ಬಳಗದ ವೇದಿಕೆಯಡಿ 'ಜಗತ್ತಿಗೆ ಭಾರತ ಏನನ್ನು ಕೊಡಬಲ್ಲುದು?' ಎಂಬ ವಿಷಯವಾಗಿ ಭರ್ಜರಿ ಭಾಷಣ ಮಾಡಿ ದ್ದಾರೆ. ಸ್ಥಳೀಯ ಸಂಘ ಪರಿವಾರದ ಬೌದ್ಧಿಕ ನಾಯಕ ಪಿ.ವಿ.ಕೃಷ್ಣ ಭಟ್ಟರ ಸನ್ನಿಧಾನದಲ್ಲಿ ಅವರು 'ನಮ್ಮ ಸಂಸ್ಕೃತಿ' ಎಂಬುದರಲ್ಲಿ 'ನಮ್ಮ' ಅಂದರೆ ಯಾರು, ಏನು ಎಂಬುದನ್ನು ಹೇಳದೆ, 'ನಮ್ಮ ಸಂಸ್ಕೃತಿಯಿಂದ ಇಂದಿನ ಪೀಳಿಗೆ ವಿಮುಖವಾಗಿದೆ ಎಂದು ವಿಷಾದಿಸಿದ್ದಾರೆ!

ಎಂದಿನಂತೆ ಭಾರತೀಯರಾಗಿ ನಮ್ಮ 'ಸ್ವಪ್ರಜ್ಞೆ' ಎಂಬುದು ವಸಾಹತುಶಾಹಿ ಯಿಂದಲೇ ಮೂಡಿರುವುದು ಎಂದು ಸಾರಾಸಗಟಾಗಿ ಘೋಷಿಸಿರುವ ಅವರು, ಈ 'ಸ್ವಪ್ರಜ್ಞೆ' ಎಂಬುದು ಕೂಡಾ ಒಂದು ನಿರಂತರ ಪ್ರಕ್ರಿಯೆ ಎಂಬುದನ್ನು ತಮ್ಮ ಆಳದ ವೈದಿಕ ಮನಸ್ಸಿನ ಮಾಯೆಗೆ ಸಿಕ್ಕಿ ಆತ್ಮವಾದಿಯಾಗಿರುವ ಕಾರಣದಿಂದಾಗಿ ಮರೆತಿರುವಂತೆ ಕಾಣುತ್ತದೆ. ಪತ್ರಿಕಾ ವರದಿಗಳನ್ನೇ ನಂಬುವು ದಾದರೆ, ಅವರು ತಮ್ಮ ದಾರಿಯಲ್ಲಿ ಎಷ್ಟು ದೂರ ಕ್ರಮಿಸಿದ್ದಾರೆಂದರೆ, ೫ ಸಾವಿರ ವರ್ಷಗಳ ಭಾರತವು ಬುದ್ಧ, ಗಾಂಧಿ ಮುಂತಾದ ಬೆರಳೆಣಿಕೆಯ ಕೊಡುಗೆಗಗಳನ್ನು ಮಾತ್ರ ನೀಡಿದೆ ಎಂದು ಹೇಳುವ ಚರಿತ್ರೆ ನಿಜವಾಗಿದ್ದರೆ, ನಮ್ಮ ಯುಜನತೆ ನಮ್ಮ ಸಂಸ್ಕೃತಿಯಿಂದ ವಿಮುಖವಾಗುವುದೇ ಲೇಸು ಎಂದು ಸಾರಿದ್ದಾರೆ! ಆದರೆ ತಮ್ಮ ಚರಿತ್ರೆಯ ಪ್ರಕಾರ ಅದರ ಇತರ ಮಹಾ ಕೊಡುಗೆಗಳು ಯಾವುವು ಎಂಬುದನ್ನು ಇನ್ನೂ ಸಾರ್ವಜನಿಕವಾಗಿ ಬಹಿರಂಗಪಡಿಸಿಲ್ಲ. ಬಹುಶಃ ಅದಕ್ಕಿನ್ನೂ ಕಾಲ ಕೂಡಿ ಬಂದಿಲ್ಲ!

ಜಾತಿ ವ್ಯವಸ್ಥೆ ಬಗ್ಗೆ ಏಕೋ ಸ್ವಲ್ಪ ರಾಗ ಬದಲಾಯಿಸಿದಂತೆ ಕಾಣುವ ಬಾಲು, ಜಾತಿ ವ್ಯವಸ್ಥೆ ಸಾವಿರಾರು ವರ್ಷಗಳ ಕಾಲ ಉಳಿದುಕೊಂಡು ಬಂದಿದೆ ಎಂದು ಹೇಳುವವರು, ಆ ಕಾರಣದಿಂದಲೇ ಅದನ್ನು ಎಲ್ಲ ರಾಜ ಕೀಯ ವ್ಯವಸ್ಥೆಗಳಿಗಿಂತ ಉತ್ತಮ ವ್ಯವಸ್ಥೆ ಎಂದೂ ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಲಾ ಪಾಯಿಂಟ್ ಹಾಕುತ್ತಾ, ತಾವು ನಾಗಪುರದತ್ತ ಪ್ರಯಾಣ ಬೆಳೆ ಸುವ ಕಾಲ ದೂರವೇನಿಲ್ಲ ಎಂಭ ಸೂಚನೆಯನ್ನೂ ನೀಡಿದ್ದಾರೆ!

## ಹರಗೋಪಾಲರ ಕಕ್ಕಾವಿಕ್ಕಿ; ತೇಲ್ತುಂಬ್ಡೆ ಆಶ್ಚರ್ಯ!

ಮೊನ್ನೆ ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ 'ಜಾಗತೀಕರಣ ಮತ್ತು ಸಾಮಾಜಿಕ ಚಳುವಳಿಗಳು: ಕರ್ನಾಟಕದ ಅನುಭವಗಳು' ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸಿದವರು ಆಂಧ್ರ ಪ್ರದೇಶದ ಉಸ್ಮಾನಿಯಾ ವಿಶ್ವವಿದ್ಯಾ ಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರೂ ಮತ್ತು ಮಾನವ ಹಕ್ಕುಗಳ ಆಂದೋಲನದ ಅಗ್ರ ನಾಯಕರಲ್ಲೊಬ್ಬರೂ ಆದ ಪ್ರೊ॥ ಹರಗೋಪಾಲ್ ಅವರು ಅದಕ್ಕೆ ತಕ್ಕನಾಗಿ ಅವರು, ಮಾನವ ಹಕ್ಕುಗಳ ಆಂದೋಲನದ ಪರಿಚಯವನ್ನು ಆಂಧ್ರದ ನಕ್ಸಲೀಯರನ್ನು ಪೋಲೀಸರು ವಿಚಾರಣೆಯಿಲ್ಲದೆ ಕೊಲ್ಲುವುದರ ವಿರುದ್ಧ ತಾವು ನ್ಯಾಯಾಲಯದಲ್ಲಿ ಹೋರಾಡಿದ ಪರಿಯನ್ನು ವಿವರಿಸುವ ಮೂಲಕ ಆರಂಭಿಸಿದರು. ಇದರ ಭಾಗವಾಗಿ, ಅಲ್ಲಿ ದಲಿತ ಚಳುವಳಿ ಎಡಗೈ–ಬಲಗೈ ಎಂದು ವಿಭಜಿತವಾಗಿದ್ದರ ಹಿನ್ನೆಲೆಯ ರಾಜಕಾರಣವನ್ನು ಅವರು ವಿಶ್ಲೇಷಿಸುತ್ತಿದ್ದ ಹಾಗೆ, ಕರ್ನಾಟಕದ ದಲಿತ ಚಳುವಳಿಯ ನಾಯಕರಲ್ಲಿ ತಳಮಳ ಆರಂಭವಾದಂತಾಗಿ, ಅಲ್ಲಿ ದಲಿತರನ್ನು ಒಡೆದಿರುವ ನಿಮ್ಮ ಮಾರ್ಕ್ಸ್‌ವಾದಿ ಪ್ರವಚನ ಇಲ್ಲಿ ಬೇಡ ಎಂದು ತಿರುಗಿ ಬಿದ್ದಾಗ ಹರಗೋಪಾಲರು ದಂಗಾಗಿ ಹೋದರು! ಪಕ್ಕದಲ್ಲಿದ್ದ 'ಖೈರ್ಲಾಂಜಿ' ಕೃತಿ ಖ್ಯಾತಿಯ ಆನಂದ ತೇಲ್ತುಂಬ್ಡೆಯವರು ಕಿಡಿ ಗೇಡಿಯತ್ತ ತಿರುಗಿ, ಹರಗೋಪಾಲರು ಮಾತಾಡಿದ್ದರಲ್ಲಿ ಮಾರ್ಕ್ಸ್‌ವಾದ ಎಲ್ಲಿತ್ತು ಎಂದು ಆಶ್ಚರ್ಯ ವ್ಯಕ್ತಪಡಿಸಿದಾಗ ದಂಗಾಗುವ ಸರದಿ ನನ್ನದಾಗಿತ್ತು!

ತೇಲ್ತುಂಬ್ಡೆ ತಮ್ಮ ಪಕ್ಕದಲ್ಲಿ ಕೂತಿದ್ದ ಈ ಕಿಡಿಗೇಡಿಯೊಂದಿಗೆ ತೋಡಿಕೊಂಡ ಇನ್ನೊಂದು ಆಶ್ಚರ್ಯವೆಂದರೆ, ಮಹಾರಾಷ್ಟ್ರದಲ್ಲೂ ದಲಿತರು ಮಾರ್ಕ್ಸ್‌ವಾದ ವೆಂದರೆ ಸಿಡಿಮಿಡಿಗೊಳ್ಳುತ್ತಾರೆ ಏಕೆ ಎಂಬುದು! ಇದಕ್ಕೆ ಉತ್ತರವೋ ಎಂಬಂತೆ ಹಿಂದೊಂದು ಇಂತಹುದೇ ವಿಚಾರ ಸಂಕಿರಣದಲ್ಲಿ ಮಾರ್ಕ್ಸ್‌ವಾದದ ಬಗ್ಗೆ ಗೆಳೆಯ ಕೆ.ಬಿ.ಸಿದ್ಧಯ್ಯ ಕೇಳಿದ ಒಂದು 'ನಿಗೂಢ' ಪ್ರಶ್ನೆಯನ್ನು ಈ ಗೋಷ್ಠಿಯ ನಿರ್ವಾಹಕನಾಗಿದ್ದ ಈ ಕಿಡಿಗೇಡಿ ಸಭೆಯ ಗಮನಕ್ಕೆ ತರಲೇಬೇಕಾಯಿತು!:

ಆ ವಿಚಾರ ಸಂಕಿರಣದಲ್ಲಿ ಗೆಳೆಯರೊಬ್ಬರು ತಮ್ಮ ಮಾತುಗಳನ್ನು, 'ಮಾರ್ಕ್ಸ್‌ವಾದದ ಬಗ್ಗೆ ನಮ್ಮ ಏನೇ ಆಕ್ಷೇಪಣೆ ಇದ್ದರೂ, ಈ ಲೋಕವನ್ನು ನಿರ್ಮಿಸಿರುವುದು ದುಡಿಯುವ ಕೈಗಳು ಎಂದು ಅದು ಹೇಳಿದ ಮೂಲ ಸತ್ಯವನ್ನು ಯಾರೂ ನಿರಾಕರಿಸಲಾರರು' ಎಂದು ಹೇಳುತ್ತಿದ್ದಂತೆ ಈ ಕಿಡಿಗೇಡಿಯ ಪಕ್ಕದಲ್ಲಿ ಕೂತಿದ್ದ ಸಿದ್ದಯ್ಯ ಕಿಡಿಗೇಡಿ ಕಿವಿಯಲ್ಲಿ 'ಆ ಕೈಗಳನ್ನು ನಿರ್ಮಿಸಿದ್ದು ಯಾರು ಎಂದು ಈತನನ್ನೊಮ್ಮೆ ಕೇಳಬೇಕಲ್ಲ!' ಎಂದು ಹೇಳಿದಾಗ, ಮೂಲ ಸತ್ಯ ನಿಜವಾಗಿ ಯಾವುದು ಎಂಬ ಗೊಂದಲ ನನ್ನಲ್ಲಿ ಶುರುವಾಯಿತು!

ಆದರೆ ಇದನ್ನು ಕೇಳಿ ಕಾನೂನು ಶಾಲೆಯ ಈ ವಿಚಾರ ಸಂಕಿರಣದಲ್ಲಿದ್ದ ವಿದ್ವಾಂಸ ಸಮೂಹ ತಿಲ ಮಾತ್ರವೂ ಅಲ್ಲಾಡಲಿಲ್ಲವಲ್ಲ, ಏಕೆ?

ಹಾಗೇ, ಮಾರ್ಕ್ಸ್‌ವಾದಿ ಭಾಷಣಗಳಿಂದ ರೋಸಿ ಹೋದಂತಿದ್ದ ಕೆ.ರಾಮಯ್ಯ ಎಂಬ ಮಾಜಿ ಮಾರ್ಕ್ಸ್‌ವಾದಿ ಕ್ರಾಂತಿಕಾರಿ ಮತ್ತು ಮಾಜಿ ದಲಿತ ಹೋರಾಟಗಾರ ಕೇಳಿದ 'ಜಾಗತೀಕರಣವನ್ನು ಮೂಲತಃ ಒಂದು ಆರ್ಥಿಕ ವಿದ್ಯಾಮಾನವೆಂದಷ್ಟೇ ನೋಡಬೇಕೇ?' ಎಂಬ ಪ್ರಶ್ನೆಯೂ ಆ ರಾಸಿ ರಾಶಿ ಚರ್ಚೆಯಲ್ಲಿ ಕಳೆದು ಹೋಯಿತಲ್ಲಾ, ಏಕೆ?

## ರಂಜಾನ್ ದರ್ಗಾರ ಮುದ್ದು ಸಮನ್ವಯ... ರಹಮತ್‌ರ ದಿವ್ಯ ಮೌನ...

ಇದೇ ವಿಚಾರ ಸಂಕಿರಣದಲ್ಲಿ ನಮ್ಮ ಪುರಾತನ ಕಮ್ಯೂನಿಸ್ಟರಲ್ಲೊಬ್ಬರೂ, ಹಾಲಿ ಖ್ಯಾತ ಬಸವವಾದಿಗಳೂ ಆದ ರಂಜಾನ್ ದರ್ಗಾ, ಚರ್ಚೆ ಬಿಕ್ಕಟ್ಟಿಗೆ ಸಿಕ್ಕಿದಾಗಲೆಲ್ಲ;ತಮ್ಮ ಎಂದಿನ ಮುದ್ದುಮುದ್ದಾದ ಸಮನ್ವಯ ಶೈಲಿಯಲ್ಲಿ ಮಧ್ಯೆ ಪ್ರವೇಶಿಸಿ ಇಂಡಿಯಾದಲ್ಲಿ ಮಾರ್ಕ್ಸ್‌ವಾದವನ್ನು ನಿಜವಾಗಿ ಬೆಳೆಸಿದವರು ಲೋಹಿ ಯರೇ;ಇಂಡಿಯಾದ ನಿಜವಾದ ಕಮ್ಯೂನಿಸ್ಟ್ ನಾಯಕ ಎಂದರೆ ಲೋಹಿಯಾ ಅವರೇ ಎಂದು ಹೇಳುತ್ತಾ, ಮಾರ್ಕ್ಸ್‌ವಾದಿಗಳಲ್ಲೂ, ಲೋಹಿಯಾವಾದಿಗಳಲ್ಲೂ ಒಟ್ಟಿಗೇ ತಳಮಳ ಉಂಟು ಮಾಡುತ್ತಿದ್ದುದು ವಿಚಾರ ಸಂಕಿರಣದ ಸೋಜಿಗ ಗಳಲ್ಲೊಂದಾಗಿತ್ತು!

ಇನ್ನೊಂದು ಗೋಷ್ಠಿಯಲ್ಲಿ ರಹಮತ್ ತರೀಕೆರೆಯವರು ಅಲ್ಪಸಂಖ್ಯಾತರ ಚಳುವಳಿ ಬಗ್ಗೆ ಮಾತನಾಡುತ್ತಾ ಪ್ರಗತಿಪರ ಮುಸ್ಲಿಂನೋರ್ವನ ಕಷ್ಟಗಳನ್ನು ಪ್ರಾಮಾಣಿಕವಾಗಿ ಹೇಳಿಕೊಂಡರಾದರೂ, ಕರ್ನಾಟಕದ ಮುಸ್ಲಿಂ ಸಮಾಜ ಬುಹುರೂಪಿಯಾಗಿರುವುದನ್ನು ನೆನಪಿಟ್ಟುಕೊಳ್ಳಬೇಕು ಎಂಬ ಎಚ್ಚರಿಕೆಯ ಮಾತನ್ನೂ ಅದರ ವಿಮರ್ಶಕರಿಗೆ ಹೇಳಲು ಮರೆಯಲಿಲ್ಲ.. ಆದರೆ ಈ ಬಹುರೂಪಿ ಸಮಾಜದ ವಿಮರ್ಶೆ ಆರಂಭವಾದೊಡನೆ ಅದರೊಳಗಿಂದ ಏಕರೂಪಿ ಧ್ವನಿಯೇ ಬರುತ್ತಲ್ಲ ಏಕೆ ಎಂಬ ಕಿಡಿಗೇಡಿ ಪ್ರಶ್ನೆಗೆ ಮಾತ್ರ ಅವರು ಉತ್ತರ ಹೇಳುವ ಗೋಜಿಗೆ ಹೋಗಲಿಲ್ಲ!

**–ಕಿಡಿಗೇಡಿ.**

ರಕ್ಷಣೆಗಾಗಿ ಇಟ್ಟುಕೊಳ್ಳುವುದು ಇತಿಹಾಸದುದ್ದಕ್ಕೂ ಸದಾ ಆಕ್ರಮಣಗಳಿಗೆ ಒಳಗಾಗುತ್ತಿರುವ ಭಾರತಕ್ಕೆ ಅನಿವಾರ್ಯ ಎಂದು ವಿವರಿಸಿದರು.

ಲೋಹಿಯಾ ಸಮತಾ ವಿದ್ಯಾಲಯ ಕೈಗೊಂಡಿರುವ ಅನೌಪಚಾರಿಕ ಶಿಕ್ಷಣವನ್ನು ಶ್ಲಾಘಿಸಿದ ಮಾಜಿ ರಾಷ್ಟ್ರಪತಿಗಳು, ವಿದ್ಯಾ ಲಯ ಆಯೋಜಿಸಿದ್ದ ಉಣ್ಣೆ ಆಧಾರಿತ ಕರ’ಕುಶಲ ವಸ್ತುಗಳ ಪ್ರದರ್ಶನ ಮಳಿಗೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿದ್ಯಾ ಲಯದ ಅಧ್ಯಕ್ಷ ಪ್ರೊ. ರವಿವರ್ಮಕುಮಾರ್, ಸಾಹಿತಿ ದೇವನೂರು ಮಹಾದೇವ, ರೈತ ಮುಖಂಡರಾದ ಕಡಿದಾಳು ಶಾಮಣ್ಣ, ಅನುಸೂಯಮ್ಮ, ಸ್ಥಳೀಯ ಶಾಸಕ ಟಿ.ಬಿ.ಜಯಚಂದ್ರ, ತುಮಕೂರು ಜಿಲ್ಲಾಧಿಕಾರಿ ಸಿ.ಸೋಮಶೇಖರ್ ಹಾಗೂ ಅನೇಕ ಸ್ಥಳೀಯ ನಾಯಕರು ಉಪಸ್ಥಿತರಿದ್ದರು.

**(ವರದಿ: ವಿವಿಧ ಮೂಲಗಳಿಂದ: ಕೆ.ಪಿ.ನಟರಾಜ್/ಬುಕ್ಕಾಪಟ್ಣ ರಾಜು)**

## ಸಮಕಾಲೀನ

# ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತೆ ಇರಬೇಕು: ತೋಂಟದಾರ್ಯ ಸ್ವಾಮೀಜಿ

**ತನ್ನ ಮುಕ್ತ ಮಾರುಕಟ್ಟೆ ಆರ್ಥಿಕತೆಯನ್ನು ಜಾರಿಗೆ ತರುವ ರಭಸದಲ್ಲಿ ಸರ್ಕಾರಗಳು ವಿಶ್ವ ಬ್ಯಾಂಕಿನ ನಿರ್ದೇಶನಗಳ ಮೇರೆಗೆ ಕೈಗೊಂಡ ಆರ್ಥಿಕ 'ಸುಧಾರಣಾ' ಕ್ರಮಗಳು ನಮ್ಮ ರೈತರನ್ನು ಒಂದೇ ಸಮನೆ ಆತ್ಮಹತ್ಯೆಗೆ ದೂಡುತ್ತಲೇ ಇವೆ. ಈಗಾಗಲೇ ರಾಷ್ಟ್ರಾದ್ಯಂತ ಮೂರು ಲಕ್ಷಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಇದರಿಂದ ತೃಪ್ತವಾಗದ ಸರ್ಕಾರ, ರೈತ ಸಮುದಾಯ ಹೀಗೆ ಸಂಪೂರ್ಣ ನಾಶವಾಗಲು ಬಹುಕಾಲ ಬೇಕಾಗುತ್ತದೆಯೆಂದು ಲೆಕ್ಕಹಾಕಿಯೇನೋ ಈಗ ಎಲ್ಲಡೆ ಎರಡಂಕಿ ದರದ 'ಅಭಿವೃದ್ಧಿ'ಯ ಸಮೂಹ ಸನ್ನಿ ಸೃಷ್ಟಿಸಿ ಯುದ್ಧೋಪಾದಿಯಲ್ಲಿ ರೈತರ ಭೂಸ್ವಾಧೀನ ಆರಂಭಿಸಿದೆ. ಇದು ಸಿಂಗ್ರೂರಿನಲ್ಲಿ ಆರಂಭವಾದಂತೆ ರಾಷ್ಟ್ರ್ಯಾದ್ಯಂತ ದೊಡ್ಡ ಪ್ರಮಾಣದ ಅಶಾಂತಿಗೆ ಕಾರಣವಾಗಿದೆ. ಇತ್ತೀಚೆಗೆ ಕರ್ನಾಟಕದ ಉಡುಪಿ ಮತ್ತು ಗದಗದ ಬಳಿ ಬಹುರಾಷ್ಟ್ರೀಯ ಕಂಪನಿಗಳ ಕೈಗಾರಿಕಾ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಆರಂಭಿಸಿದ ಇಂತಹ ಭೂಸ್ವಾಧೀನದ ವಿರುದ್ಧ ರೈತರು ಸಿಡಿದೆದ್ದು ನಿಂತರು. ಉಡುಪಿಯಲ್ಲಿ ಪೇಜಾವರ ಸ್ವಾಮಿಗಳ ಉಪವಾಸಕ್ಕೆ ಬೆದರಿದ ಸರ್ಕಾರ ಭೂಸ್ವಾಧೀನವನ್ನು ಕೈಬಿಟ್ಟರೆ, ಗದಗದಲ್ಲಿ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳು ರೈತ ಚಳವಳಿಯ ನೇತೃತ್ವ ವಹಿಸಿ ಜನ ಜಾಗೃತಿ ಕಾರ್ಯಕ್ರಮ ಹಾಕಿಕೊಳ್ಳುವವರೆಗೆ ತನ್ನ ಕಾರ್ಯಾ ಚರಣೆಯನ್ನು ಮುಂದುವರೆಸಿಯೇ ಇತ್ತು. ಅಲ್ಲಿ ಉಕ್ಕು ಸ್ಥಾವರ ಸ್ಥಾಪಿಸಲು ಬಂದಿದ್ದ ಪೋಸ್ಕೋ ಕಂಪನಿಯ ಏಜೆಂಟನಂತೆ ವರ್ತಿಸಿದ ನಮ್ಮ ಕೈಗಾರಿಕಾ ಮಂತ್ರಿ ಕೊನೇ ಕ್ಷಣದವರೆಗೂ ಸ್ವಾಮೀಜಿಯನ್ನು ಮಣಿಸಲು ನೋಡಿ ಕೊನೆಗೆ ಹತಾಶರಾಗಿ ಕಾರ್ಯಾಚರಣೆಯಿಂದ ಹಿಂದೆ ಸರಿದರು.**

**ಈ ಹಿನ್ನೆಲೆಯಲ್ಲಿ ತೋಂಟದಾರ್ಯ ಸ್ವಾಮೀಜಿಯವರನ್ನು ‘ನವ ಮಾನವ’ ಐದು ಪ್ರಶ್ನೆಗಳನ್ನು ಕೇಳಿತು. ಅದಕ್ಕೆ ಅವರು ಕೊಟ್ಟ ಉತ್ತರಗಳು ಇಲ್ಲಿವೆ:**

**ನವ ಮಾನವ:** ಭೂಸ್ವಾಧೀನ ವಿರೋಧಿ ಚಳುವಳಿಯ ನೇತೃತ್ವ ವಹಿಸಿಕೊಳ್ಳಲು ನೀವು ಕಂಡುಕೊಂಡ ಕಾರಣಗಳೇನು? ಇದು ಮಠಾಧೀಶರ ಕರ್ತವ್ಯ ವ್ಯಾಪ್ತಿಯ ಎಲ್ಲೆಗಳನ್ನು ಮೀರಿದ್ದು ಎಂದು ನಿಮಗನ್ನಿಸಲಿಲ್ಲವೇ?

**ಸ್ವಾಮೀಜಿ:** ಅನ್ನದಾತನ ಜೀವನಾಧಾರವಾದ ಅವನ ಭೂಮಿಯ ಅಸ್ತಿತ್ವಕ್ಕೆ ಧಕ್ಕೆ ಬಂದಾಗ, ಅಶಿಕ್ಷಿತರೂ, ಅಸಂಘಟಿತರೂ, ಅಸಹಾಯಕರೂ ಆದ ರೈತರ ನೆರವಿಗೆ ಹೋಗುವುದು ನಮ್ಮ ಕರ್ತವ್ಯ. ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತೆ ಇರಬೇಕು. ಎಲ್ಲರ ಹಿತ ಕಾಯಬೇಕು. ಭಾರತೀಯ ತತ್ವಜ್ಞಾನದಲ್ಲಿ ಇಹಕ್ಕಿಂತ ಪರಕ್ಕೆ ಲಕ್ಷ್ಯ ಕೊಟ್ಟವರೇ ಬಹಳ. ಪರದಷ್ಟೇ ಇಹಕ್ಕೂ ಬೆಲೆ ಕೊಟ್ಟವರು ಬಸವಣ್ಣನವರು. ಆ ಬಸವ ಪರಂಪರೆಯ ವ್ಯಾಪ್ತಿಯಲ್ಲಿಯೇ ನಮ್ಮ ಮಠ ಬರುವುದರಿಂದ ಈ ಚಳುವಳಿಯಲ್ಲಿ ಭಾಗವಹಿಸಬೇಕಾಯ್ತು.

**ನ:** ಕೃಷಿ ಲಾಭದಾಯಕವಾಗಿಲ್ಲ ಎಂದು ಹೇಳಲಾಗುತ್ತಿರುವ ಈ ದಿನಗಳಲ್ಲಿ ಸಣ್ಣ ರೈತರಾದರೂ, ಸರ್ಕಾರದ ಕೈಗಾರಿಕೀರಣ ಯೋಜನೆಯ ಜೊತೆ ಕೈಜೋಡಿಸುವ ಮೂಲಕ ಒಂದು ನೆಮ್ಮದಿಯ ಹೊಸ ಬದುಕನ್ನು ಕಂಡುಕೊಳ್ಳುವ ಸಾಧ್ಯತೆ ಇದೆಯಲ್ಲವೇ?



**ಸ್ವಾ:** ಕೃಷಿ ಆಧಾರಿತ ಕೈಗಾರಿಕೆಗಳಿಂದಲೇ ರೈತರು ನೆಮ್ಮದಿಯ ಬದುಕನ್ನು ಬದುಕಲು ಸಾಧ್ಯವಿದೆ. ಒಂದು ಕಾಲಕ್ಕೆ ಗದಗ ಜಿನ್ನಿಂಗ್, ಪ್ರೆಸ್ಸಿಂಗ್, ಎಣ್ಣೇ ಮಿಲ್ಲುಗಳಿಗಾಗಿ ಕರ್ನಾಟಕದಲ್ಲಿಯೇ ಉದ್ಯಮ ನಗರವೆಂದು ಪ್ರಸಿದ್ಧವಾಗಿತ್ತು. ದುರಂತವೆಂದರೆ, ವಿಜ್ಞಾನ ಬೆಳೆದಂತೆ ಗದಗಿನ ಈ ಉದ್ಯಮಗಳಲ್ಲಿ ಆಧುನಿಕತೆ ಬರಲೇ ಇಲ್ಲ. ಅದೇ ರೀತಿ, ಗೋವಿನ ಜೋಳ, ಗೋಧಿ, ಹತ್ತಿ ಇವುಗಳ ತಜ್ಜನ್ಯ ಪದಾರ್ಥಗಳಿಂದ ರೈತ ಪರಿಸರ ಸ್ನೇಹಿಯಾದ ನೂರೆಂಟು ಉದ್ಯಮಗಳನ್ನು ಮಾಡಬಹುದು.

**ನ:** ಸರ್ಕಾರ(ಗಳು) ಜಾಗತೀಕರಣದ ಅಡಿಯಲ್ಲಿ ಅನುಸರಿಸುತ್ತಿರುವ ‘ಅಭಿವೃದ್ಧಿ’ ಮಾದರಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಸ್ವಾ:** ಸೂರತ್‌ನಲ್ಲಿ ಮೊಗಲರ ಕಾಲಕ್ಕೆ ಒಂದು ವ್ಯಾಪಾರ ಮಳಿಗೆಯಾಗಿ ಬಂದ ಈಸ್ಟ್ ಇಂಡಿಯಾ ಕಂಪನಿ ಭಾರತವನ್ನು ಇನ್ನೂರು ವರ್ಷ ಶೋಷಿಸಿದ್ದು ಇತಿಹಾಸ. ಅಭಿವೃದ್ಧಿಯ ಹೆಸರಿನಲ್ಲಿ ಜಾಗತಿಕ ಬಂಡವಾಳಶಾಹಿಗಳು ಕರ್ನಾಟಕದ ನೆಲ, ನೀರು, ವಿದ್ಯುತ್, ಖನಿಜಗಳನ್ನು ಬಳಸಿಕೊಂಡು ಲಾಭಾಂಶವನ್ನು ತಮ್ಮ ದೇಶಕ್ಕೆ ಒಯ್ಯುವರು. ಪೋಸ್ಕೋ ತೊಡಗಿಸಬೇಕೆಂದಿರುವ ಬಂಡವಾಳ ಡಾ. ನಂಜುಂಡಪ್ಪ ವರದಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಖರ್ಚು ಮಾಡಬೇಕೆಂದು ಸೂಚಿಸಿದ್ದ ಮೊತ್ತದಷ್ಟೇ ಆಗುವುದು! ಈ ದಿಸೆಯಲ್ಲಿ ದೇಶೀ ಸರ್ಕಾರಗಳೇ ಉದ್ಯಮದಲ್ಲಿ ತೊಡಗಿಸಿ ಕೊಳ್ಳಬೇಕು. ಅಭಿವೃದ್ಧಿಯ ಹರಿಕಾರರಾಗಬೇಕು.

**ನ:** ಭೂಸ್ವಾಧೀನ ವಿರೋಧಿ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ಧರ್ಮ ಕುರಿತ ನಿಮ್ಮ ಅರಿವಿಗೆ ಹೊಸ ಆಯಾಮವೇನಾದರೂ ದೊರಕಿದೆ ಎಂದು ನಿಮಗೆ ಅನ್ನಿಸಿದೆಯೆ?

**ಸ್ವಾ:** ಮಠಾಧಿಪತಿಗಳ ಕಾರ್ಯ ಬರೀ ಪೂಜೆ, ಬೋಧೆಯಲ್ಲ. ಜನಗಳ ನೋವಿಗೆ ಸ್ಪಂದಿಸುವುದೂ, ಪಾಲ್ಗೊಳ್ಳುವುದೂ ಆಗಿದೆ.

**ನ:** ಗದಗ ಜಿಲ್ಲೆಯಲ್ಲಿ ಸರ್ಕಾರ ಭೂಬ್ಯಾಂಕಿನ ಹೆಸರಿನಲ್ಲಿ ಮತ್ತೆ ಭೂಸ್ವಾಧೀನಕ್ಕೆ ತೊಡಗಿದೆ ಎಂಬ ಸುದ್ದಿಯಿದೆ. ಇದು ನಿಜವಾಗಿದ್ದಲ್ಲಿ, ನೀವು ಮತ್ತೆ ಚಳುವಳಿಗೆ ಧುಮುಕುವಿರಾ?

**ಸ್ವಾ:** ಗದಗ ಜಿಲ್ಲೆಯಲ್ಲಿ ಭೂ–ಬ್ಯಾಂಕಿನ ಹೆಸರಿನಲ್ಲಿ ಭೂಸ್ವಾಧೀನಕ್ಕೆ ತೊಡಗಿರುವ ಸುದ್ದಿ ನಿಜ. ಇದು ನೆಲದ ಮಕ್ಕಳ ಪರವಾಗಿದ್ದರೆ ನಮ್ಮ ಸಹಕಾರವಿದೆ.

*

ತೋರಿಸುವ ಸೈದ್ಧಾಂತಿಕ ಕೆಲಸವನ್ನು ನಾವು ಮಾಡುತ್ತಲೇ ಇರಬೇಕಾಗುತ್ತದೆ ಎಂದರು. ಈ ದಿಸೆಯಲ್ಲಿ 'ನವ ಮಾನವ' ಕೆಲಸ ಮಾಡಲಿ; ಅದರ ಹಿಂದೆ ನಾವೆಲ್ಲ ಇದ್ದೇವೆ ಎಂಬ ಭರವಸೆಯ ಮಾತುಗಳನ್ನಾಡಿದರು.

ಸಮಾರಂಭದಲ್ಲಿ ಮಹೇಶ್ ಹರವೆ ಪತ್ರಿಕೆಯ ಮೊದಲ ಸಂಚಿಕೆಯನ್ನು ಪರಿಚಯಿಸಿದರು. ನಂತರ ಸ್ನೇಹಾ, ಅಪೂರ್ವ ಡಿಸಿಲ್ವ, ನರೇಂದ್ರ ಕುಮಾರ್ ಮತ್ತು ಮಲ್ಲಿಕ್ ಸಮಕಾಲೀನ ಯುವ ಜನಾಂಗವನ್ನು ಪ್ರತಿನಿಧಿಸಿ ಮಾತನಾಡುತ್ತಾ, ತಮ್ಮ ಪ್ರಕಾರ ಪತ್ರಿಕೆಯ ಆಶಯಗಳೇನಿರಬೇಕೆಂದು ಸೂಚಿಸಿದರು. ಮುಖ್ಯವಾಗಿ ಪತ್ರಿಕೆ ಹೊಸ ಕಾಲದ ಸವಾಲುಗಳನ್ನು ಅರಿತು, ಹೊಸ ತಲೆಮಾರಿಗೆ ಮಾರ್ಗದರ್ಶನ ಮಾಡುವಂತಿರಬೇಕು ಎಂದು ಅವರು ಅಭಿಪ್ರಾಯಪಟ್ಟರು. ರವಿಚಂದ್ರ ಎಲ್ಲರನ್ನೂ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಹಳೆಯ ಮತ್ತು ಹಿರಿಯ ಸಮಾಜವಾದಿಗಳ ಜೊತೆಗೆ ಸಾಕಷ್ಟು ಜನ ತರುಣ-ತರುಣಿಯರೂ ಕುತೂಹಲದಿಂದ ಭಾಗವಹಿಸಿದ್ದು ಗಮನಾರ್ಹವಾಗಿತ್ತು.

**(ವರದಿ: ಬಿ.ರಾಜೇಶ್)**

## ಪತ್ರಿಕೆಗೆ ಸ್ವಾಗತ ತೋರಣ...

ಪ್ರಿಯ ನಾಗಭೂಷಣ,

'ಮಾನವ' ಪುನರಾರಂಭದ ಸುದ್ದಿ ಕೇಳಿ ತುಂಬಾ ಸಂತೋಷವಾಯಿತು. ಕಳೆದು ಹೋದ ಕಾಲ ಕಳೆದು ಹೋಗಿಲ್ಲ ಎನ್ನಿಸುವ ಭರವಸೆ ಹುಟ್ಟಿಸಿತು. ದೇವನೂರು ಅವರನ್ನು ಎಬ್ಬಿಸಿ ಚುರುಕುಗೊಳಿಸಿ.

**-ಡಾ.ಯು.ಆರ್.ಅನಂತಮೂರ್ತಿ,** ಬೆಂಗಳೂರು.

ನವ ಮಾನವ ಮಾಸಿಕದ ಮೊದಲ ಸಂಚಿಕೆಯನ್ನು ಪೂರ್ತಿಯಾಗಿ ಓದಿದೆ. ಅಂದರೆ, ಅದೇ ಓದಿಸಿಕೊಂಡು ಹೋಯಿತು. ಜಾತಿ ನಿರ್ಮೂಲನೆ ಗೋಷ್ಠಿಯ ವರದಿ ಹಾಗೂ ಅನುಭವ ನಿರೂಪಣೆಗಳು ಚೆನ್ನಾಗಿದ್ದವು. ಅಪೂರ್ವ ಡಿ'ಸಿಲ್ವ ಅವರ ಲೇಖನಕ್ಕೆ ಯಾರಾದರೂ, 'ಎ.ಸಿ.ರೂಮಿನ ಪರಿಸರವಾದಿಗಳು' ಪ್ರತಿಕ್ರಿಯಿಸಿದರೆ, ಮುಂದಿನ ಸಂಚಿಕೆಯಲ್ಲಿ ಅದನ್ನು ಚರ್ಚೆಗೆ ಮುಂದೊಡ್ಡಿ. ಪತ್ರಿಕೆ ತರುವುದು ಹಾಗೂ ದೀರ್ಘಕಾಲ ಆ ಬದ್ಧತೆಯನ್ನು ಉಳಿಸಿಕೊಳ್ಳುವುದು ಸಾಕಷ್ಟು ಶ್ರಮದ ಕೆಲಸ(ಯೋಗೇಂದ್ರ ಯಾದವರ ಧ್ವನಿಮುದ್ರಣವನ್ನು ಕನ್ನಡಕ್ಕೆ ತರುವಲ್ಲಿ ಇದು ನಿಮಗೆ ಅನುಭವಕ್ಕೆ ಬಂದಿರಬೇಕು.) ನಾನು ನಗರಕ್ಕೆ ಹೋದಾಗ ಕೊಂಚ ಹಣ ಕಳಿಸುವೆ. ಸರಕು ಕೇಂದ್ರಿತ ನಾಗರೀಕತೆ ತುಸುವಾದರೂ ಜೀವ ಕೇಂದ್ರಿತ ಆಗುವಲ್ಲಿ ನಿಮ್ಮ ಶ್ರಮಕ್ಕೆ ನಾವು ಬೇರೆ ಯಾವ ರೀತಿ ನೆರವು ನೀಡಲು ಸಾಧ್ಯ ತಿಳಿಸಿ.

**-ನಾಗೇಶ್ ಹೆಗಡೆ,** ಮೈತ್ರಿ ಗ್ರಾಮ(ಬೆಂಗಳೂರು)

ಸಮಾಜವಾದಿ ಹಿನ್ನೆಲೆಯಲ್ಲಿ ಮೂಡಿಬರುತ್ತಿದ್ದ ಮಾನವ' ಪತ್ರಿಕೆಯು ಪುನರುಜ್ಜೀವನಗೊಂಡು 'ನವ ಮಾನವ' ಶೀರ್ಷಿಕೆಯೊಂದಿಗೆ ಪ್ರಕಟವಾಗ ತೊಡಗಿರುವುದು ಹೆಮ್ಮೆಯ ವಿಷಯ. ವೈಚಾರಿಕ ಹಿನ್ನೆಲೆಯಲ್ಲಿ ಮೂಡಿಬಂದ ಸಂಚಿಕೆಯನ್ನು ಓದಿ ಶ್ರೀಗಳಿಗೆ ತುಂಬಾ ಸಂತೋಷವಾಯಿತು. ಪತ್ರಿಕೆಯ ಪೋಷಕ ನಿಧಿಗೆ ಕಿರುಕಾಣಿಕೆಯಾಗಿ ಐದು ನೂರು ರೂಪಾಯಿಗಳನ್ನು ಈ ಮೂಲಕ ಡಿ.ಡಿ.ರೂಪದಲ್ಲಿ ಕಳಿಸಲಾಗುತ್ತಿದೆ.

**-ಶಿವನಗೌಡ,** ಕಾರ್ಯದರ್ಶಿ, ತೋಂಟದಾರ್ಯ ಸಂಸ್ಥಾನ ಮಠ, ಗದಗ

ನವ ಮಾನವ ಮಾಸಿಕದ ಪ್ರಕಟಣೆ ಇಂದಿನ ಕರ್ನಾಟಕದ ಬೌದ್ಧಿಕ ಚರ್ಚೆಗಳು ಪಡೆಯುತ್ತಿರುವ ಅವ್ಯವಸ್ಥಿತ ಸ್ವರೂಪದ ಹಿನ್ನೆಲೆಯಲ್ಲಿ ಒಂದು ಅಪೂರ್ವ ಪ್ರಯತ್ನವೆಂದೇ ಹೇಳಬೇಕು. ಆದರೆ ಈ ಸಂಚಿಕೆಯಲ್ಲಿ ವಿಸ್ತಾರವಾಗಿ ಚರ್ಚಿತವಾಗಿರುವ ಜಾತಿ ನಿರ್ಮೂಲನೆಯ ಪರಿಕಲ್ಪನೆ, ಅದು ಭಾರತದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರದಂತೆ ಕಂಡರೂ, ಅದರ ಬಗ್ಗೆ ನನಗೆ ನನ್ನದೇ ಅನುಮಾನಗಳಿವೆ. ಚಂದಾ ಕಳಿಸುವೆ.

**-ಡಾ.ವಿಜಯ ತಂಬಂಡ ಪೂಣಚ್ಚ,** ಹಂಪಿ.

ನಮ್ಮ ಕಾಲದ ಜೊತೆಗೆ ಮಾತಾಡಲೂ ನವ ಮಾನವದ ಮರುಪ್ರವೇಶ ಅಗತ್ಯವಾಗಿತ್ತು. ಸಮಕಾಲೀನ ಸಮಾಜ, ರಾಜಕಾರಣ, ಧರ್ಮ ಮತ್ತು ಅಧ್ಯಾತ್ಮಿಕ ಅಂತರ್ಧಾರೆಗಳಿರುವ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಮುಖಾ ಮುಖಿಯಾಗಲು ಈ ಪತ್ರಿಕೆಯ ಸಮಾಜವಾದಿ ಸಂವೇದನೆ ನೆರವಾಗಲಿ ದೆಯೆಂದು ಆಶಿಸುವೆ.

**-ಕೆ.ಪಿ.ನಟರಾಜ,ತುಮಕೂರು.**

ನವ ಮಾನವ ಮಾಸಿಕ ಶುರು ಮಾಡಿದ್ದು ಸ್ವಾಗತಾರ್ಹ. ನಿಮ್ಮ ಪ್ರಯತ್ನಕ್ಕೆ ಪ್ರಜ್ಞಾವಂತರು ಒತ್ತಾಸೆಯಾಗಿ ನಿಲ್ಲುವರು ಎಂದು ಆಶಿಸುತ್ತೇನೆ.

**-ಹಸನ್ ನಯೀಂ ಸುರಕೋಡ,** ರಾಮದುರ್ಗ.

'ಮುಚ್ಚು ಮರೆ'(ರಕ್ಷಾಪುಟ) ಇಲ್ಲದೆ, ನೇರವಾಗಿ ಮುಖ್ಯ ವಿಷಯಗಳನ್ನು ಎದುರಿಸುವ ಇಂತಹ ಪತ್ರಿಕೆಯನ್ನು ನಾನು ಕಂಡದ್ದು ಇದೇ ಮೊದಲು. ವ್ಯಕ್ತಿ ಕೇಂದ್ರಿತ ಚರ್ಚೆಗಳೇ ಹೆಚ್ಚಾಗಿರುವ ಆತಂಕದ ಸನ್ನಿವೇಶದಲ್ಲಿ ಸಮಷ್ಟಿ ಚಿಂತನೆಯ ಸಮಜವಾದೀ 'ನವ ಮಾನವ' ಹುಟ್ಟಿ ಬಂದದ್ದು ಸಂತೋಷ, ಸಮಾಧಾನ ತಂದಿದೆ. ಈ ನವ ಮಾನವ ತನ್ನ ಗಾತ್ರ-ಪಾತ್ರಗಳನ್ನು ಹಿಗ್ಗಿಸಿಕೊಂಡು ಮುನ್ನುಗ್ಗಲಿ ಎಂದು ಆಶಿಸುವೆ.

**-ಟಿ.ಎಲ್.ರೇಖಾಂಬಾ,** ಶಿವಮೊಗ್ಗ.

## ಲೋಹಿಯಾ ಸಮತಾ ವಿದ್ಯಾಲಯದಲ್ಲಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ!



ಅಪಮಾರ್ಗದ ಮೂಲಕಪ್ಪ ಕೂಡಿಟ್ಟ ಆಸ್ತಿಯನ್ನು ಮಕ್ಕಳು ತಿರಸ್ಕರಿಸಬೇಕೆಂದು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ ಕಲಾಂ ಯುವ ಜನತೆಗೆ ಕರೆ ಕೊಟ್ಟಿದ್ದಾರೆ. ಅವರು ಸ್ವಾತಂತ್ರ್ಯೋತ್ಸವದ ಅಂಗವಾಗಿ ಸಿರಾದ ಲೋಹಿಯಾ ಸಮತಾ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಮಕ್ಕಳೊಡನೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು

ಸದ್ಯದ ಭ್ರಷ್ಟಾಚಾರ ವಿರೋಧಿ ಆಂದೋಲನ ಕುರಿತ ಪ್ರಶ್ನೆಗೆ ಉತ್ತರ ನೀಡಿದ ಕಲಾಂ ಅವರು, ಈ ಆಂದೋಲನ ಮನೆ ಮನೆಯಲ್ಲೂ ಆರಂಭವಾಗಿ, ಮಕ್ಕಳೇ ಇದರ ನೇತೃತ್ವ ವಹಿಸಿಕೊಳ್ಳ ಬೇಕೆಂದು ಸಲಹೆ ಮಾಡಿದರು. ಅಹಿಂಸೆಯನ್ನು ಪ್ರತಿಪಾದಿಸುವ ರಾಷ್ಟ್ರವಾಗಿ ಭಾರತ ಅಣ್ವಸ್ತ್ರಗಳನ್ನು ತಯಾರಿಸುತ್ತಿರುವುದು ಎಷ್ಟು ಸರಿ ಎಂಬ ಪ್ರಶ್ನೆಗೆ ಉತ್ತರ ನೀಡಿದ ಅವರು, ಶಸ್ತ್ರಾಸ್ತ್ರಗಳನ್ನು ಆಕ್ರಮಣಕ್ಕಲ್ಲದಿದ್ದರೂ

# ಮೈಸೂರಿನಲ್ಲಿ 'ನವ ಮಾನವ ಮಾಸಿಕ'ದ ಬಿಡುಗಡೆ!



ಸಂಪದಭಿವೃದ್ಧಿ ಮತ್ತು ಸಮಾನತೆ ದೇಶದ ಪ್ರಗತಿ ರಥದ ಎರಡು ಗಾಲಿಗಳಾಗಿದ್ದು, ಜಾಗತೀಕರಣದ ಈ ದಿನಗಳಲ್ಲಿ ಈ ರಥ ಸಂಪದಭಿವೃದ್ಧಿಯ ಒಂದೇ ಗಾಲಿಯ ಮೇಲೇ ಓಡುತ್ತಿದ್ದು ಯಾವಾಗ ಕುಸಿದು ಬೀಳುವುದೋ ಎಂಬ ಆತಂಕವುಂಟಾಗಿದೆ ಎಂದು ಹಿರಿಯ ಲೇಖಕ ಮತ್ತು ಚಿಂತಕ ದೇವನೂರ ಮಹಾದೇವ ಹೇಳಿದರು. ಅವರು ಕಳೆದ ಜುಲೈ ೩೧ರಂದು ಮೈಸೂರಿನ ರಂಗಾಯಣದ ಆವರಣದಲ್ಲಿ 'ಶ್ರೀರಂಗ' ರಂಗ ವೇದಿಕೆಯಲ್ಲಿ ಸಮಾಜವಾದಿ ಗೆಳೆಯರ ಬಳಗ ಏರ್ಪಡಿಸಿದ್ದ 'ನವ ಮಾನವ ಮಾಸಿಕ'ದ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಎಪ್ಪತ್ತರ ದಶಕದಲ್ಲಿ ತಾವು ಪಿಯುಸಿ ಫೇಲಾಗಿ ದಿಕ್ಕುಗಾಣದಿದ್ದಾಗ ಬದುಕಿನಲ್ಲಿ ತಮಗೆ ದಿಕ್ಕು ತೋರಿಸಿದ್ದು ಲೋಹಿಯಾರ ಸಮಾಜವಾದ ಎಂದು ತಿಳಿಸಿದ ಮಹಾದೇವ ಅವರು, ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರು 'ಮಾನವ'ದ ಕೆಲಸಕ್ಕಾಗಿ ಮಹಾರಾಜಾ ಕಾಲೇಜಿನಲ್ಲಿ ಎಲ್ಲರನ್ನೂ ಬಿಟ್ಟು ವಿದ್ಯಾರ್ಥಿಯಾಗಿದ್ದ ತಮ್ಮನ್ನು ಹುಡುಕಿಕೊಂಡು ಬರುತ್ತಿದ್ದುದನ್ನು ನೆನಪಿಸಿಕೊಂಡರು. ಆ ಮೂಲಕ 'ಮಾನವ' ತಮಗೊಂದು 'ಅಸ್ತಿತ್ವ' ನೀಡಿತು ಎಂದು ಹೇಳುತ್ತಾ, ಆ 'ಮಾನವ' ಇಂದು 'ನವ ಮಾನವ ಮಾಸಿಕ'ವಾಗಿ ಹೊರಬರುತ್ತಿರುವುದಕ್ಕಾಗಿ ಅವರು ಸಂತೋಷ ವ್ಯಕ್ತಪಡಿಸಿದರು.

ಅಮೆರಿಕಾದಲ್ಲಿನ ಇತ್ತೀಚಿನ ಎರಡನೇ ಆರ್ಥಿಕ ಕುಸಿತವನ್ನು ಪ್ರಸ್ತಾಪಿಸಿದ ಮಹಾದೇವ, ಅಂತಹ ಬಂಡವಾಳಶಾಹಿ ದೇಶಗಳು ಬೇರೆಯವರ ತಲೆಯೊಡೆದು ಬದುಕಬಹುದೇನೋ; ಆದರೆ ನಮ್ಮಂಥ ದೇಶದ ಪಾಡೇನು ಎಂಬ ಭೀತಿ ನಮ್ಮನ್ನೆಲ್ಲ ಕಾಡುತ್ತಿದೆ ಎಂದರು. ಮೊದಲ ಕುಸಿತದ ಸಂದರ್ಭದಲ್ಲಿ ಕಮ್ಯೂನಿಸ್ಟ್ ಪಕ್ಷಗಳು–ಅವುಗಳ ಬಗ್ಗೆ ನಮ್ಮ ಇತರ ತಕರಾರುಗಳೇನೇ ಇರಲಿ–ಹಠ ಮಾಡಿ ಸರ್ಕಾರದ ಕೆಲವು ಆರ್ಥಿಕ ಕ್ರಮಗಳನ್ನು ತಡೆ ಹಿಡಿದುದರಿಂದ ನಾವು ಬಚಾವಾದೆವು ಎಂದು ಅಭಿಪ್ರಾಯಪಟ್ಟ ಅವರು, ಈ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳಿಗೆ ಅಂತಃಕರಣವಿಲ್ಲ ಎಂಬ ಕಡಿದಾಳು ಶಾಮಣ್ಣನವರ ಮಾತನ್ನು ನೆನಪಿಸಿಕೊಂಡರು

ಬಡತನಕ್ಕೆ ಎಂದೂ ಇಲ್ಲದ ದೈನ್ಯತೆಯನ್ನು ತಂದುಕೊಟ್ಟು ಕ್ರೌರ್ಯ ಮೆರೆದಿರುವ ಜಾಗತೀಕರಣವು ಮಾದಕ ವಸ್ತು ವ್ಯಸನಿ ಮದ್ದು ಪಡೆಯಲು ಏನು ಬೇಕಾದರೂ ಮಾಡಲು ಹೇಸದಂತೆ, ಆಧುನಿಕ ಮನುಷ್ಯನಲ್ಲಿ ಗಳಿಸಲು ಏನನ್ನಾದರೂ ಮಾಡಲು ಪ್ರೇರೇಪಿಸುತ್ತಿದೆ. ಮೊದಲು ನ್ಯಾಯವಾಗಿ ಗಳಿಸಲು ಇರಲಿ, ಅನ್ಯಾಯವಾಗಿ ದೋಚಲೂ ಶ್ರಮ ಪಡಬೇಕಿತ್ತು; ಕಾಲ ಅಗತ್ಯವಿತ್ತು. ಇಂದು ಅವಾವುವೂ ಬೇಕಿಲ್ಲ. ಇದರ ಪರಿಣಾಮಗಳನ್ನು ನಾವು ಬಳ್ಳಾರಿಯಲ್ಲಿ ನೋಡಬಹುದು. ಅಲ್ಲಿ ಎಲ್ಲ ಇದೆ. ಕರ್ನಾಟಕದ ಅರ್ಧ ಸಂಪತ್ತೇ ಅಲ್ಲಿನ ಮಹಲುಗಳಲ್ಲಿ, ಸ್ಟಾರ್ ಹೋಟೆಲ್‌ಗಳಲ್ಲಿ, ಬ್ಯಾಂಕುಗಳಲ್ಲಿ. ವಿಮಾನ ನಿಲ್ದಾಣದಲ್ಲಿ, ಹೆಲಿಕಾಪ್ಟರುಗಳಲ್ಲಿ ಇದೆ. ಆದರೆ ಅಲ್ಲಿ ಹೋಗಿ ನಿಜವಾಗಿ ನೋಡಿದರೆ ಇಡೀ ಜಿಲ್ಲೆಯೇ ಸುಲಿಗೆಯಾಗಿ ಜನ ಗುಳೆ ಎದ್ದು ಹೋಗುವುದಕ್ಕೆ ಸಿದ್ಧವಾದ ಹಾಳು ಕೊಂಪೆಯಂತೆ ಕಾಣುತ್ತಿದೆ. ಇಂತಹ ದುರಂತ ಸಂಭವಿಸಿರುವುದು ಪ್ರಜಾಪ್ರಭುತ್ವವನ್ನು ನಾವು ಖರೀದಿಯ ಸರಕನ್ನಾಗಿ ಮಾಡಿರುವುದರಿಂದ. ಹಾಗಾಗಿ, ಸಂಪತ್ತಿನ ಸೃಷ್ಟಿಯನ್ನು ಸಮಾನತೆಯ ಮೌಲ್ಯದ ಜೊತೆಗೇ ಸಾಧಿಸುವ ರಾಜಕಾರಣವನ್ನು ನಾವು ಎತ್ತಿ ಹಿಡಿಯಬೇಕಾಗಿದೆ ಎಂದು ಮಹಾದೇವ ಪ್ರತಿಪಾದಿಸಿದರು. ಇಲ್ಲದಿದ್ದರೆ, ನಾಳೆ ಕರ್ನಾಟಕವೇಕೆ, ಭಾರತವೇ ಬಳ್ಳಾರಿಯಂತಾದೀತು ಎಂದು ಎಚ್ಚರಿಸಿದರು.

ಸಮತೆಯೊಂದಿಗೇ ಸಂಪದಭಿವೃದ್ಧಿ ಎಂಬ ಘೋಷಣೆ ಲೋಹಿಯಾರ ಸಮಾಜವಾದಿ ರಾಜಕಾರಣದ ಮೂಲ ಮಂತ್ರವಾಗಿತ್ತು ಎಂದು ನೆನಪಿಸಿದ ಮಹಾದೇವ ಅವರು, ಇಂತಹ ರಾಜಕಾರಣವನ್ನು ಚಾಲ್ತಿಗೆ ತರುವ ಮೂಲಕ ಮಾತ್ರ ಜಾಗತೀಕರಣ ಮತ್ತು ಉದಾರೀಕರಣಗಳನ್ನು ಸಮತಾಕರಿಸಬಹುದು ಎಂದು ಹೇಳುತ್ತಾ, ಇದಕ್ಕಾಗಿ ನೈಸರ್ಗಿಕ ಕೃಷಿ, ಪರ್ಯಾಯ ಔಷಧ ಪದ್ಧತಿ ಇತ್ಯಾದಿ ದೇಸೀ ಜೀವನ ಕ್ರಮ ಮತ್ತು ಮೌಲ್ಯಗಳ ಪುನರನ್ವೇಷಣೆ ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು.

ಈ ಮೊದಲು ಪ್ರಾಸ್ತಾವಿಕವಾಗಿ ಮಾತನಾಡಿದ 'ನವ ಮಾನವ' ಪತ್ರಿಕೆಯ ಸಂಪಾದಕ ಡಿ.ಎಸ್.ನಾಗಭೂಷಣ ಅವರು, ಜಾಗತೀಕರಣ ಉಂಟು ಮಾಡುತ್ತಿರುವ ಹಿಂಸೆಯ ನಡುವೆ ಸಮಾಜವಾದವನ್ನು ಪುನರನ್ವೇಷಿಸುವ ಕಾಲ ಈಗ ಒದಗಿ ಬಂದಿದ್ದು; ಈ ಹೊಸ ಸಮಾಜವಾದದ ಕೇಂದ್ರ ಕಾಳಜಿ, ಮಿತಿಗಳುಳ್ಳ ಬದುಕಿನ ಹೊಸ ಮಾದರಿಯನ್ನು ರೂಪಿಸುವುದಾಗಬೇಕಿದೆ ಎಂದರು, ಇದಕ್ಕಾಗಿ ಇತ್ತೀಚಿನ ವರ್ಷಗಳಲ್ಲಿ ಚಾಲ್ತಿಗೆ ಬಂದಿರುವ 'ಹೆಚ್ಚು ಹೆಚ್ಚು'ವನ್ನು ಆಧರಿಸಿದ ಸೌಂದರ್ಯಶಾಸ್ತ್ರಕ್ಕೆ ಪರ್ಯಾಯವಾಗಿ 'ಕಮ್ಮಿ ಕಮ್ಮಿ'ಯನ್ನು ಆಧರಿಸಿದ ಹೊಸ ಸೌಂದರ್ಯಶಾಸ್ತ್ರವನ್ನು ಕಟ್ಟಬೇಕಾಗಿದೆ;ಇದಕ್ಕೆ ಒಂದು ಪುಟ್ಟ ವೇದಿಕೆ 'ನವ ಮಾನವ' ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ 'ಆಂದೋಲನ' ದಿನಪತ್ರಿಕೆಯ ಸಂಪಾದಕರಾದ ರಾಜಶೇಖರ ಕೋಟಿಯವರು 'ಎಲ್ಲರಿಗೂ ಏನು ಆಗುತ್ತದೆಯೋ ಅದು ನನಗೂ ಆಗುತ್ತದೆ' ಎಂಬ ಹತಾಶೆಯ ಮನಸ್ಥಿತಿ ತಲುಪಿರುವ ಜನರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸಬೇಕಾದ ಕಾರ್ಯ ಈಗ ತುರ್ತಾಗಿ ಆಗಬೇಕಿದೆ ಎಂದರು. ರಾಜಕಾರಣಿಗಳು ಮಾತ್ರ ಭ್ರಷ್ಟರಾಗಿಲ್ಲ. ಅವರು ಜನರನ್ನು, ಮತದಾರರನ್ನು ಭ್ರಷ್ಟರನ್ನಾಗಿ ಮಾಡಿದ್ದಾರೆ. ಮತಗಳನ್ನು ಖರೀದಿಸಿದ್ದಾರೆ. ಇಂದು ಜನತೆಯ ಒಂದು ವರ್ಗ ಒಂದು ತಿಂಡಿ, ಎರಡು ಹೊತ್ತಿನ ಊಟ ಸಿಕ್ಕರೆ ಸಾಕು ಎಂಬ ಸ್ಥಿತಿ ತಲುಪಿದೆ. ಇದರಿಂದ ಹೋರಾಟದ ಮನೋಭಾವ ಕಳೆದುಕೊಂಡಿದೆ. ಆದರೆ ಒಂದು ಹೊತ್ತಿನ ಊಟಕ್ಕೂ ಕಲ್ಲು ಬಿದ್ದಾಗ ಸಿಟ್ಟಿನ ಮನೋಭಾವ ಬರುತ್ತದೆ. ಜನ ಸಿಡಿದೇಳುತ್ತಾರೆ. ಆಗ ಅರಾಜಕತೆ ಉಂಟಾಗುತ್ತದೆ. ಹಾಗಾಗಬಾರದು. ಜನರಿಗೆ ದಿಕ್ಕು

ಖಾಸಗಿ ಪ್ರಸಾರಕ್ಕಾಗಿ

# ನವ ಮಾನವ ಮಾಸಿಕ

**ಸೆಪ್ಟೆಂಬರ್, ೨೦೧೧** **ಪುಟ:** ೧೬ **ಚಂದಾ:** ನೀವು ಕೊಟ್ಟಷ್ಟು!

ಸಂಪಾದಕ: **ಡಿ.ಎಸ್.ನಾಗಭೂಷಣ**

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ- ೫೭೭೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨೪೨೨೮೪ **ಈ-ಮೇಲ್:** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು:

ಪ್ರಿಯ ಓದುಗರೇ,

ಸದ್ಯದ ಅಣ್ಣಾ ಹಜಾರೆ ಆಂದೋಲನ ಏನನ್ನೇ ಸಾಧಿಸಲಿ, ಬಿಡಲಿ; ಅದು ಒಂದು ಸತ್ಯವನ್ನಂತೂ ದೇಶದ ಮುಂದೆ ತೆರೆದಿಟ್ಟಿದೆ. ಈ ದೇಶದ ಆತ್ಮಸಾಕ್ಷಿಯನ್ನು ಈಗಲೂ ಒಬ್ಬ ಹಳ್ಳಿಗ, ಅದೂ ಸಾಮಾನ್ಯ ಹಳ್ಳಿಗನೊಬ್ಬ ಮಾತ್ರ ಜಾಗೃತಗೊಳಿಸಬಲ್ಲ ಎಂಬುದೇ ಆ ಸತ್ಯ. ಈ ದೇಶ ಅಭಿರುಚಿ ಮತ್ತು ಆದ್ಯತೆಗಳಲ್ಲಿ ಪಾಶ್ಚಿಮಾತ್ಯ ನಾಗರೀಕತೆಯ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಾ ಶರವೇಗದಲ್ಲಿ ಬದಲಾಗುತ್ತಿದೆ ಎಂಬ ವ್ಯಾಪಕ ಆತಂಕದ ನಡುವೆಯೂ, ಅದರ ಆತ್ಮ ಇನ್ನೂ ಭಾರತದ ಹಳ್ಳಿಗಾಡಿನ ಹಿರಿಯನೊಬ್ಬನ ಮನದಾಳದ ಮಾತುಗಳನ್ನು-ಅವೆಷ್ಟೇ ಅಸ್ಪಷ್ಟ ಮತ್ತು ಅವಿಷದವಾಗಿದ್ದರೂ-ಕೇಳುವಷ್ಟು ಸೂಕ್ಷ್ಮತೆಯನ್ನು ಉಳಿಸಿಕೊಂಡಿದೆ ಎಂಬುದು ಇಂದು ಭವಿಷ್ಯದ ಬಗ್ಗೆ ಸ್ವಲ್ಪವಾದರೂ ಭರವಸೆ ಹುಟ್ಟಿಸುವ ಸಂಗತಿಯಾಗಿದೆ.

ಜೆಪಿಯವರೊಂದಿಗೇ ದೇಶ ತನ್ನ ರಾಷ್ಟ್ರೀಯ ಹೋರಾಟದ ಪರಂಪರೆಯೊಂದಿಗೆ ಕೊನೆಯ ಕೊಂಡಿ ಕಳಚಿಕೊಂಡಿರಬಹುದು ಎನ್ನಿಸುತ್ತಿರುವ ಹೊತ್ತಿನಲ್ಲೇ ಈ ಅಣ್ಣಾ ರಾಷ್ಟ್ರ ವೇದಿಕೆ ಹತ್ತಿದ್ದಾರೆ. ತಾತ್ವಿಕ ಪರಿಭಾಷೆಯ ನೆಲೆಯಲ್ಲಿ ಗಾಂಧಿವಾದಿ ಎಂದೆನಿಸದಿದ್ದರೂ, ಗಾಂಧಿ ಸಮಾಧಿ ಮುಂದೆ ಧ್ಯಾನಕ್ಕೆ ಕೂತು ಶಕ್ತಿ ಸಂಚಯ ಮಾಡಿಕೊಂಡು ಭ್ರಷ್ಟ ವ್ಯವಸ್ಥೆಯ ವಿರುದ್ಧ ದೊಡ್ಡ ಸವಾಲೆಸೆಯಲು ಅಣಿಯಾದ ಈ ಅಣ್ಣಾ, ಆನಂತರ ಮಾತನಾಡತೊಡಗಿದ ಭಾಷೆ ನಿಜ ಗಾಂಧಿವಾದಿಗಳಲ್ಲಿ ಹೊಸ ಹುರುಪು ಹುಟ್ಟಿಸುವಂತಿದೆ. ಗಾಂಧಿಗಿಂತ ಸ್ವಲ್ಪ ಹೆಚ್ಚು ಮೈ ಮುಚ್ಚಿಕೊಂಡಿರುವ ಅಣ್ಣಾ, ಗಾಂಧಿಗಿಂತ ಹೆಚ್ಚು ಬಾಯಿ ಬಿಚ್ಚುತಾ ಸ್ವಲ್ಪ ಆತುರಗಾರರಂತೆ ಕಾಣುತ್ತಾರೆ;ಹಾಗೇ ಹಠಮಾರಿಯಾಗಿ ಕೂಡ. ಇದಕ್ಕೆ ಇವರು ಗಾಂಧಿಯಂತೆ ಒಳಗಿನ ಅಗ್ನಿದಿವ್ಯದ ಮೂಲಕ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡವರಲ್ಲ. ಹೊರಗಿನ ಶಕ್ತಿಗಳಿಂದ ಪ್ರಭಾವಿತರಾಗಿ ಒಳಗಿನ ಬೆಂಕಿ ಹತ್ತಿಸಿಕೊಂಡವರು. ಆದರೆ ಈ ಮಿತಿಗಳ ನಡುವೆಯೇ, ಮನಮೋಹನ ಸಿಂಗ್-ರಾಹುಲ್ ಗಾಂಧಿ-ಗಡ್ಕರಿ-ಮಾಯಾವತಿ-ಕರುಣಾನಿಧಿ-ಯಡಿಯುರಪ್ಪನವರು ಒಟ್ಟಾಗಿ ಸೇರಿ ಸೃಷ್ಟಿಸಿರುವ ಹೊಸ ವಸಾಹತುಶಾಹಿ ರಾಜಕಾರಣದ ವಿರುದ್ಧ ಹೋರಾಡಲು ಈ ಗಾಂಧಿಯಾದರೂ ಸಿಕ್ಕರಲ್ಲ ಎಂದು ನಾವು ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿರುವವರು.

ಅಣ್ಣಾ ಗಾಂಧಿಯಲ್ಲದಿರಬಹುದು; ಆದರೆ ಇಂದಿನ ಸಂಕೀರ್ಣ ಸಂದರ್ಭದಲ್ಲಿ-ರಾಷ್ಟ್ರ ಪ್ರಗತಿಯ ಹಾದಿಯಲ್ಲಿದೆ ಎಂದು ವ್ಯವಸ್ಥೆ ಎಲ್ಲರನ್ನೂ ನಂಬಿಸುತ್ತಿರುವಾಗ-ರಾಷ್ಟ ಅವನತಿಯ ಹಾದಿಯಲ್ಲಿದೆ ಎಂದು ಎಚ್ಚರಿಸಬಲ್ಲ ವಿವೇಕ ಮತ್ತು ಸ್ಥೈರ್ಯಗಳನ್ನು ಪ್ರದರ್ಶಿಸಿರುವ ಮೂಲಕ ಅವರು ಗಾಂಧಿಯನ್ನು ಮತ್ತೆ ರಾಷ್ಟ್ರಜೀವನದ ಮುಖ್ಯ ವೇದಿಕಗೆ ತಂದಿರುವರು. ಜೊತೆಗೆ, ಗಾಂಧಿ ಮಾರ್ಗವೊಂದೇ ಈ ದಾರಿಯಿಂದ ನಮ್ಮನ್ನು ಪಾರು ಮಾಡಬಹುದೆಂದು ಬಹು ತಾತ್ವಿಕ ಸ್ಪಷ್ಟತೆಯೊಂದಿಗಲ್ಲದಿದ್ದರೂ, ಭಾವನಾತ್ಮಕ ನೆಲೆಯಲ್ಲಿ ಅರಿತು ರಾಷ್ಟ್ರೀಯ ವೇದಿಕೆಯನ್ನು ಹತ್ತಿರುವರು. ಅವರು ತಮ್ಮ ಹಳ್ಳಿ ರಾಳೇಗಾಂವ್ ಸಿದ್ಧಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಾಡಿನಲ್ಲಿ ಮಾಡಿರುವ ಪರಿವರ್ತನೆಯ ಕೆಲಸದಿಂದ ಪಡೆದ ಅನುಭವ ಮತ್ತು ಭವಿಷ್ಯ ಕುರಿತ ಭರವಸೆಯ ಸ್ಫೂರ್ತಿಯೊಂದಿಗೇ ಅವರು ಇಂದು ಈ ವೇದಿಕೆಯಿಂದ ರಾಷ್ಟ್ರ ಪುರ್ನನಿರ್ಮಾಣದ ಮಾತುಗಳನ್ನಾಡುವ ಧೈರ್ಯ ತೋರಿರುವುದು.

ಇದು ಬಲಪಂಥೀಯರೆದುರು ಜನಸಂಘಟನೆಯ ವಿಷಯದಲ್ಲಿ ಸಂಪೂರ್ಣ ಸೋತಿರುವ ಎಡಪಂಥೀಯರೆಂದು ತಮ್ಮನ್ನು ಕರೆದುಕೊಳ್ಳುವವರು ಆಳವಾಗಿ ಯೋಚಿಸಬೇಕಾದ ಸಂದರ್ಭ. ಅಣ್ಣಾ ಇಂದು ಭ್ರಷ್ಟಾಚಾರದ ವಿರುದ್ಧ ಹಾಕಿರುವ ಮತ್ತು ದೇಶದ ತುಂಬಾ ಅನುರಣಿಸುತ್ತಿರುವ ಕೂಗು ಗ್ರಾಮ ಭಾರತ, ರೈತ ಭಾರತದ ಒಡಲಾಳದ ಕೂಗು ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ಹಾಗಾಗಿ ಅದರ ಹಿಂದೆ ಕೇವಲ ಲಂಚ-ಶುರುವತ್ತುಗಳಿಗೆ ಸೀಮಿತವಾದ ಭ್ರಷ್ಟಾಚಾರದ ವಿರುದ್ಧ ಮಾತ್ರವಾದ ಆಕ್ರೋಶ ಇರಲಾರದು. ಇದನ್ನು ಬುದ್ಧಿವಂತರೆಂದು ಕರೆದುಕೊಳ್ಳುವ ಎಡಪಂಥೀಯರು ಅರ್ಥ ಮಾಡಿಕೊಂಡು ಅದನ್ನು ವಿವರಿಸಿ ಹೇಳುವ ಮತ್ತು ಅ ಮೂಲಕ ಈ ಆಂದೋಲನಕ್ಕೆ ಹೊಸ ವಿಸ್ತರಣೆ ನೀಡಿ ಅದನ್ನು ಅದರ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವ ಹೊಣೆ ಹೊರಬೇಕು. ಇಂದಿನ ಅಭಿವೃದ್ಧಿ ರಾಜಕಾರಣ ಹರಿಸಿರುವ ಹಡಬೆ ಹಣ ಹುಟ್ಟು ಹಾಕಿರುವ ವೈವಿಧ್ಯಮಯ ಹಿಂಸೆಗೆ ಕೊನೆ ಹಾಡುವ ಪ್ರಯತ್ನಕ್ಕೆ ಮುಂದಾಗಬೇಕು. ಇದರ  ಬದಲಿಗೆ, ಅವರ ಹಿಂದೆ ಅಂತಹ ಜನ ಇದ್ದಾರೆ, ಇಂತಹ ಜನ ಇದ್ದಾರೆ ಎಂದು ಆರೋಪಿಸುತ್ತಾ ಇವರು ಹೊಣೆರಹಿತ ಪ್ರತಿಕ್ರಿಯೆ ನೀಡುತ್ತಿರುವುದು ವಿಷಾದಕರ.

ತಮ್ಮ ಸೈದ್ಧಾಂತಿಕ ಶ್ರೇಷ್ಠತೆಯ ಅಹಂಕಾರದಿಂದ ಎಡಪಂಥೀಯರು, ಸಮಾಜವಾದಿಗಳು ಮತ್ತು ಪ್ರಗತಿಪರರೆನಿಸಿಕೊಂಡವರು ಇತಿಹಾಸದುದ್ದಕ್ಕೂ ಇಂತಹ ತಪ್ಪುಗಳನ್ನು ಮಾಡುತ್ತಲೇ ಬಂದಿದ್ದಾರೆ. ಅದರ ಪರಿಣಾಮವಾಗಿ ರಾಷ್ಟ್ರ ರಾಜಕಾರಣದ ಪರಿಧಿಯಲ್ಲೇ ಉಳಿದು ಸಿನಿಕತೆಗೆ ಈಡಾಗಿ ಜನರಿಂದ ದೂರವಾಗಿ ಹೋಗಿದ್ದಾರೆ. ಆದುದರಿಂದ ಈಗಲಾದರೂ ಇವರು ತಮ್ಮ ಹೊಣೆಯರಿತು; ಬರೀ ಬುದ್ಧಿವಂತಿಕೆಯ ಮಾತಿನ ರಾಜಕಾರಣ ಮಾಡದೆ, ಅಣ್ಣಾ ಹಿಂದೆ ಎಲ್ಲ ತರದ ಜನರಿರುವುದನ್ನು ಒಂದು ಅವಕಾಶವೆಂದೇ ಪರಿಗಣಿಸಿ, ತಮ್ಮ ವಿಚಾರ-ವ್ಯವಹಾರಗಳಿಂದ ಅವರನ್ನು ಗೆಲ್ಲುವ ಶ್ರಮದ ರಾಜಕಾರಣ ಮಾಡುವತ್ತ ಮನಸ್ಸು ಕೊಡಲಿ. ಅಣ್ಣಾ ಮತ್ತು ಅವರ ಆಂದೋಲನದಲ್ಲಿ ಅನೇಕ ದೋಷ ಮತ್ತು ಮಿತಿಗಳಿಲ್ಲದಿಲ್ಲ. ಆ ದೋಷ ಮತ್ತು ಮಿತಿಗಳೇ ಅವರೊಂದಿಗೆ ಕೈಜೋಡಿಸಬೇಕಾದುದಕ್ಕೆ ಕಾರಣಗಳಾಗಬೇಕು. ಈ ರಚನಾತ್ಮಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳದ ಹೊರತು ಇವರಿಗೆ ಜನರ ಹೃದಯದೊಳಕ್ಕೆ ಪ್ರವೇಶವಿಲ್ಲ.

**-ಸಂಪಾದಕ.**